೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-ಗಂಗಾವತಿ, ಕೊಪ್ಪಳ ಜಿಲ್ಲೆ

ಹೈದರಾಬಾದ ಕರ್ನಾಟಕ
ಕಥೆ-ವ್ಯಥೆ

(ಸಂವಿಧಾನದ ೩೭೧ ಕಲಂ ತಿದ್ದುಪಡಿ ಹೋರಾಟದ ಇತಿಹಾಸ)

ರಝಾಕ ಉಸ್ತಾದ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

೭೮ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ – ಗಂಗಾವತಿ, ಕೊಪ್ಪಳ ಜಿಲ್ಲೆ

ಹೈದ್ರಾಬಾದ–ಕರ್ನಾಟಕ ಕಥೆ–ವ್ಯಥೆ

(ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಹೋರಾಟದ ಇತಿಹಾಸ)

ರಝಾಕ ಉಸ್ತಾದ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು–೧೮

HYDRABADA - KARNATAKA KATHE - VYATHE
by : **Sri Razaka Ustada**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 80 + vi   Price : **Rs. 30=00**   : **2011**

ಮೊದಲನೇ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಬೆಲೆ : ಮೂವತ್ತು ರೂಪಾಯಿಗಳು

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಸಂಚಾಲಕರು – ಪ್ರೊ. ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಸಂಗಮೇಶ ಬಾದವಾಡಗಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ಪ್ರೊ. ಜಿ. ವೆಂಕಟಸುಬ್ಬಯ್ಯ
೭೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಆಯುಕ್ತರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು

ಮುಖಪುಟ ವಿನ್ಯಾಸ : ಶ್ರೀ ಮುರಳೀಧರ ವಿ. ರಾಠೋಡ್

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾಲ್ಕು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಅದೃಷ್ಟ ಕೆಲವು ಅಧ್ಯಕ್ಷರಿಗೆ ಮಾತ್ರ ಬರುತ್ತದೆ. ಅಂಥ ಸುಯೋಗ ನನ್ನ ಪಾಲಿಗೆ ಬಂದಿರುವುದರಿಂದ ಚಿತ್ರದುರ್ಗ, ಗದಗ, ಬೆಂಗಳೂರುಗಳ ನಂತರ ಇದೀಗ ೨೦೧೧ರ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭರದ ಸಿದ್ಧತೆಗಳು ನಡೆಯುವ ಕ್ಷಣಗಣನೆ ಆರಂಭವಾಗಿದೆ. ಎಂದಿನಂತೆ ಈ ಸಮ್ಮೇಳನದ ಹೊತ್ತಿಗೂ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಘನತೆಗೆ ಯೋಗ್ಯವೆಂದು ಪ್ರಕಟಣ ಸಮಿತಿ ಆಯ್ಕೆ ಮಾಡಿರುವ ಕೃತಿಗಳನ್ನು ಹೊರತರಲಾಗುತ್ತಿದೆ.

ನಾನು ಅಧ್ಯಕ್ಷನಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶ ಮಾಡಿದಾಗಿನಿಂದ ಸಾಹಿತ್ಯ ಪರಿಷತ್ತಿನಲ್ಲಿ ಹಲವು ಸಕಾಲಿಕವೆನಿಸುವಂಥ ಸುಧಾರಣೆಗಳನ್ನು ಮಾಡುತ್ತಾ ಬಂದಿದ್ದೇನೆ. ಇವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುವ ಪುಸ್ತಕಗಳು ಒಳಗೆ ಮೌಲಿಕವಾಗಿರುವಂತೆ ಹೊರಗೆ ಆಕರ್ಷಕವಾಗಿರಬೇಕೆನ್ನುವುದೂ ಒಂದು. ಪುಸ್ತಕಗಳ ಮೂಲಕ ಓದುಗ ವರ್ಗದಲ್ಲಿ ಸದಭಿರುಚಿಯನ್ನು ನಿರ್ಮಾಣ ಮಾಡುವುದರಲ್ಲಿ ಪರಿಷತ್ತಿಗೆ ಒಂದು ವಿಶೇಷ ಜವಾಬ್ದಾರಿಯಿದೆ ಎಂಬುದನ್ನು ನಾನು ಮನಗಂಡೇ ಇಂಥ ಸುಧಾರಣೆಗೆ ಕೈ ಹಚ್ಚಿದ್ದೇನೆ. ಪರಿಷತ್ತಿನ ಪುಸ್ತಕಗಳು ಆತ್ಮಾಭಿಮಾನದಿಂದ ತಲೆಯೆತ್ತಿ ನಿಲ್ಲುವುದಕ್ಕೆ ಏನೇನು ಸಾಧ್ಯವಿತ್ತೋ ಆ ಎಲ್ಲ ಪ್ರಯೋಗಗಳನ್ನು ಮಾಡಲಾಗಿ ಇವತ್ತು ನಮ್ಮ ಪ್ರಕಟಣೆಗಳು ಯಾರಿಗೂ ಕಡಿಮೆಯಿಲ್ಲದಂತೆ ಭರಾಟೆಯಿಂದ ಖರ್ಚಾಗುತ್ತಿವೆ. ಹೊಸ ಬಣ್ಣಗಳಲ್ಲಿ, ಹೊಸ ವಿನ್ಯಾಸಗಳಲ್ಲಿ ಕಂಗೊಳಿಸುತ್ತಿವೆ. ಓದುಗರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಬಹುಬೇಗ ಖರ್ಚಾಗುತ್ತಿವೆ, ಮರುಮುದ್ರಣಗೊಳ್ಳುತ್ತಿವೆ. ಈ ಬಾರಿಯ ಅಕ್ಷರಜಾತ್ರೆಯಲ್ಲಿ ಅರ್ಥಪೂರ್ಣ ಪುಸ್ತಕಗಳು ಇರಬೇಕೆನ್ನುವ ಎಚ್ಚರದೊಂದಿಗೆ ಈ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ೨೦೧೧ ಡಿಸೆಂಬರ್ ೯ ರಿಂದ ೧೧ರವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯಲಿರುವ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳ್ಳಲಿರುವ ಈ ಪುಸ್ತಕಗಳು ಸಹೃದಯರ ಜ್ಞಾನಭಂಡಾರವನ್ನು ವಿಸ್ತರಿಸಿ, ಅವರು ಬಯಸುವ ಸಂತೋಷವನ್ನು ಕೊಡಲೆಂದು ಆಶಿಸುತ್ತೇವೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಲೇಖಕರ ಮಾತು

ಹೈದ್ರಾಬಾದ - ಕರ್ನಾಟಕದ ಸಮಸ್ಯೆಗಳು ಹಾಗೂ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯ ಅವಶ್ಯಕತೆ ಕುರಿತು ಸಮಗ್ರ ಮಾಹಿತಿ ಒಂದು ಪುಸ್ತಕ ರೂಪದಲ್ಲಿ ಬರಬೇಕೆಂದು ಬಹಳ ದಿನಗಳಿಂದ ಈ ಭಾಗದ ಹೋರಾಟಗಾರರಿಗೆ ಇಚ್ಚೆ ಇತ್ತು. ಇದನ್ನು ಕಾರ್ಯರೂಪಕ್ಕೆ ತರಲು ನನಗೆ ಪ್ರೋತ್ಸಾಹಿಸಿದವರು ಬಹಳ ಜನ. ಹೈದ್ರಾಬಾದ - ಕರ್ನಾಟಕದ ಸಮಗ್ರ ಇತಿಹಾಸ. ನಾವು ಎದುರಿಸುತ್ತಿರುವ ಸಮಸ್ಯೆಗಳು, ಅವುಗಳಿಗೆ ಪರಿಹಾರ ಏನು, ಹೇಗೆ ಸಮಸ್ಯೆಗಳು ಬಗೆಹರಿಯುತ್ತವೆ ಎನ್ನುವುದೇ ಒಂದು ಯಕ್ಷ ಪ್ರಶ್ನೆಯಾಗಿತ್ತು. ಹೈದ್ರಾಬಾದ - ಕರ್ನಾಟಕ ಎದುರಿಸುತ್ತಿರುವ ಶೈಕ್ಷಣಿಕ, ನಿರುದ್ಯೋಗ, ನೀರಾವರಿ, ಬರಗಾಲ, ಮೂಲಭೂತ ಸೌಕರ್ಯಗಳು, ಹಲವಾರು ಸಮಸ್ಯೆಗಳ ಕುರಿತು ಸಮಗ್ರವಾದ ಮಾಹಿತಿಯ ಅವಶ್ಯಕತೆ ಇದೆ. ಈ ಸಮಸ್ಯೆಗಳಿಗೆ ಪರಿಹಾರ ಏನು, ಇದು ಹೇಗೆ ಪಡೆಯುವದು, ಮುಲ್ಕಿ ಕಾನೂನು ಎಂದರೇನು, ಅದು ನಮಗೆ ಯಾಕೆ ಅನ್ವಯಿಸುತ್ತೇ, ನಮಗ್ಯಾಕೆ ನೀಡಲಿಲ್ಲ. ಈ ಭಾಗದ ಜನ ಸ್ವಾತಂತ್ರ್ಯ ದಿನಾಚಾರಣೆಯನ್ನು ಎರಡು ಸಲ ಯಾಕೆ ಆಚರಿಸುತ್ತಾರೆ, ಸಂವಿಧಾನದ ೩೭೧ನೇ ಕಲಂ ಯಾಕೆ ಬೇಕು, ಅದರಿಂದಾಗುವ ಪ್ರಯೋಜನ ಏನು. ಇಂತಹ ಹಲವಾರು ಪ್ರಶ್ನೆಗಳು ಈ ಭಾಗದ ಜನತೆಯನ್ನು ಕಾಡುತ್ತಿವೆ. ಆದರೆ ಉತ್ತರ ಹುಡುಕುವುದೇ ಒಂದು ಸಮಸ್ಯೆಯಾಗಿತ್ತು. ಈ ಎಲ್ಲ ಪ್ರಶ್ನೆಗಳಿಗೆ ಉತ್ತರವೇ ಪುಸ್ತಕದ ರೂಪದಲ್ಲಿ ಹೊರ ತರಲು ಪ್ರಯತ್ನಿಸಿದ್ದೇನೆ.

ನಾನು ಈ ಭಾಗದ ಸಮಸ್ಯೆಗಳ ಕುರಿತು ಆಳವಾಗಿ ಅರ್ಥಮಾಡಿಕೊಂಡಿದ್ದು ೨೦೦೧ ರಲ್ಲಿ ನಾನು ಎಂ.ಎಸ್ಸಿ. ಓದುತ್ತಿರುವಾಗ. ಆಗ ಗುಲ್ಬರ್ಗಾದಲ್ಲಿ ವಿಭಾಗ ಮಟ್ಟದಲ್ಲಿ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ನಡೆಯಬೇಕು ಎಂದು ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆದಿತ್ತು. ನಾನು ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದೆ. ಅಲ್ಲಿ ಶ್ರೀ ವೈಜನಾಥ ಪಾಟೀಲರ ಭಾಷಣದಿಂದ ಪ್ರೇರೇಪಿತನಾದ ನಾನು ಆ ದಿಶೆಯಲ್ಲಿ ಮುನ್ನಡೆಯಲು ತಿರ್ಮಾನಿಸಿ ಅವರ ಹೋರಾಟಕ್ಕೆ ಕೈ ಜೋಡಿಸಲು ಅಂದೇ ತಿರ್ಮಾನಿಸಿದ್ದೆ. ಅದಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿ ವಿಷಯ ಸಂಗ್ರಹಿಸಿದಾಗ ತಿಳಿದ ಸಂಗತಿ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕು ಎನ್ನುವುದು.

ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯ ರಾಯಚೂರು ಘಟಕದಲ್ಲಿ ನಾನು ಮತ್ತು ಮಲ್ಲಪ್ಪ ಪಾಟೀಲ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ಹೋರಾಟ ಪ್ರಾರಂಭಿಸಿದೆವು, ಅದು ಮುಂದೆ ದೊಡ್ಡ ಮಟ್ಟದ ಹೋರಾಟಕ್ಕೆ ನಾಂದಿಯಾಯಿತು. ಹೋರಾಟದ ರೂಪ ರೇಷೆಗಳನ್ನು ತಯಾರು ಮಾಡುವ ಕುರಿತು ತಿಳಿಸಿಕೊಟ್ಟವರು ಹಿರಿಯರು, ಮಾರ್ಗದರ್ಶಕರು ಆದ ರಾಘವೇಂದ್ರ ಕುಷ್ಟಗಿಯವರು, ಅವರು ನನಗೆ ಯಾವಾಗಲೂ ಹೇಳುತ್ತ

ಬಂದಿರುವುದು ಏನೆಂದರೆ ನೀವು ಕೇವಲ ಮಾತನಾಡಿದರೆ ಸಾಲದು ಅದನ್ನು ಬರವಣಿಗೆ ರೂಪದಲ್ಲಿ ತರಬೇಕೆಂದು ಒತ್ತಾಯಿಸುತ್ತಿದ್ದರು. ಈ ಪುಸ್ತಕ ಬರೆಯಲು ನನಗೆ ಪ್ರೇರೇಪಿಸಿದ ಅವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹೈದ್ರಾಬಾದ – ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ಅನ್ವಯಿಸುತ್ತೆ ಎನ್ನುವದು ಮೊಟ್ಟ ಮೊದಲ ಬಾರಿಗೆ ನಮಗೆ ತಿಳಿಸಿಕೊಟ್ಟಂತಹವರು, ಈ ಹೋರಾಟದ ರುವಾರಿಗಳೂ, ಮಾರ್ಗದರ್ಶಕರು ಆದ ಮಾನ್ಯ ವೈಜನಾಥ ಪಾಟೀಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಿಶೇಷವಾಗಿ ನನ್ನನ್ನು ಹೈದ್ರಾಬಾದ – ಕರ್ನಾಟಕದ ಇತಿಹಾಸ, ಸಮಸ್ಯೆಗಳು ಮತ್ತು ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯ ಕುರಿತು ಮಾಹಿತಿಯನ್ನು ನೀವು ಬರೆದು ಕೊಡಿ ನಾವು ಗವಿಮಠ ಕೊಪ್ಪಳದ ವತಿಯಿಂದ ಮುದ್ರಿಸುತ್ತೇವೆ ಎಂದು ನನಗೆ ಆಶೀರ್ವದಿಸಿದ ಶ್ರೀ ಮ.ನಿ.ಪ್ರ.ಸ್ವ.ಜ. ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ ಇವರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಜೊತೆ ಹೆಗಲಿಗೆ ಹೆಗಲು ಕೊಟ್ಟು ಹೋರಾಟದಲ್ಲಿ ಪಾಲ್ಗೊಂಡ ಕಾರಟಗಿಯ ಗೆಳೆಯರಾದ ಶಿವಶರಣಗೌಡ, ಪ್ರಭು ಉಪನಾಳ, ಬಸವರಾಜ ಪಗಡದಿನ್ನಿ, ಕೆ.ಪ್ರಕಾಶ ಮುಂತಾದವರು ನಮಗೆ ಇದರ ಬಗ್ಗೆ ಸಾಹಿತ್ಯ ಬರೆದು ಕೊಡಿ ನಾವು ಹೇಗಾದರೂ ಮಾಡಿ ಪುಸ್ತಕದ ರೂಪದಲ್ಲಿ ಹೊರತರುತ್ತೇವೆ ಎಂದು ಒತ್ತಾಯಿಸುತ್ತಿದ್ದರು, ಅವರಿಗೂ ಕೂಡ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಗಂಗಾವತಿಯ ಎ.ಕೆ. ಮಹೇಶಕುಮಾರ, ರಮೇಶ ಗಬ್ಬೂರ, ಕೊಪ್ಪಳದ ಶಿವಕುಮಾರ ಕುಕನೂರು, ಚಂದ್ರಶೇಖರ್ ಕವಲೂರು, ಸಂತೋಷ ದೇಶಪಾಂಡೆ, ಜಗದೀಶಗೌಡ, ರಾಜಾಬಕ್ಷೀ, ಹುಸೇನ ಬಾಷಾ, ಸಿಂಧನೂರಿನ ಸುಮೀತ ತಡಕಲ್, ರಾಯಚೂರಿನ ಮಲ್ಕಪ್ಪ ಪಾಟೀಲ್, ಸ್ವಾಮಿ ನಾಯಕ, ಅಶೋಕಕುಮಾರ ಜೈನ್, ಶಿವಕುಮಾರ ಯಾದವ, ಜೆ.ಎಲ್. ಈರಣ್ಣ, ಅಂಬಣ್ಣ ಅರೋಲಿ, ಜೆ.ಪಿ. ರಾಜು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಗಂಗಾವತಿಯಲ್ಲಿ ನಡೆದ ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯಲ್ಲಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಚರ್ಚಿಸಿದಾಗ ಇದರ ಅವಶ್ಯಕತೆಯನ್ನು ಮನಗಂಡ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಡಾ. ನಲ್ಲೂರು ಪ್ರಸಾದರವರು ಈ ನಿಟ್ಟಿನಲ್ಲಿ ಈ ಎಲ್ಲ ವಿಷಯಗಳನ್ನೊಳಗೊಂಡ ಒಂದು ಪುಸ್ತಕವನ್ನು ಪರಿಷತ್‌ನಿಂದ ಮುದ್ರಿಸುವುದಾಗಿ ಹೇಳಿ ಅದೇ ರೀತಿ ಕಾರ್ಯರೂಪಕ್ಕೆ ತಂದಿರುವ ಅಧ್ಯಕ್ಷರಿಗೆ ಈ ಭಾಗದ ಜನತೆಯ ಪರವಾಗಿ ಅಭಾರಿಯಾಗಿದ್ದೇನೆ.

ರಝಾಕ ಉಸ್ತಾದ

ಮುನ್ನುಡಿ

ಭಾರತವು ಪ್ರಜಾಪ್ರಭುತ್ವ ರಾಷ್ಟ್ರ ಸರಿಯಾದರು ಇಲ್ಲಿನ ಪ್ರಜೆಗಳಿಗೆ ಎಲ್ಲ ಸೌಲಭ್ಯಗಳು ಪ್ರಜಾಪ್ರಭುತ್ವ ಮಾದರಿಯಲ್ಲಿ ಸಿಗದೆ ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಯಾವ ಪ್ರಭುಗಳು ಆಳ್ವಿಕೆ ನಡೆಸುತ್ತಿದ್ದರೋ ಅವರ ಪ್ರಭುತ್ವ ಪ್ರಭುದ್ಧತೆ ಆಧಾರದ ಮೇಲೆ ಆಯಾ ಪ್ರದೇಶದ ಜನರಿಗೂ ಶಿಕ್ಷಣ ಹಾಗೂ ಇನ್ನಿತರ ಸೌಲಭ್ಯಗಳು ಸಿಕ್ಕವು. ಮೈಸೂರು ಭಾಗದಲ್ಲಿ ೧೯೧೬ ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಆದರೆ ಹೈದ್ರಾಬಾದ ಕರ್ನಾಟಕದಲ್ಲಿ ೧೯೪೮ ರ ವರೆಗೂ ಕೇವಲ ಮು[illegible]ನೇ ಮೂರು ಪ್ರೌಢ ಶಾಲೆಗಳಿದ್ದವು ಮಾತ್ರ ಇದ್ದವು.

ಸ್ವಾತಂತ್ರ್ಯ ಪೂರ್ವದಲ್ಲಿ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ಪ್ರದ[illegible] ಬಹುಸಂಖ್ಯಾತ ಜನರ ಭಾಷೆ ತೆಲಗು, ಮರಾಠಿ ಮತ್ತು ಕನ್ನಡವಾಗಿತ್ತು. ಆದರೆ ಆಡಳಿತ ಭಾಷೆ ಉರ್ದುವಾಗಿತ್ತು. ಈ ಕಾರಣದಿಂದ ಇಲ್ಲಿಗೆ ಅಲಿಗರ್ ಮುಸ್ಲಿಂ ವಿ.ವಿ.ಯ ಅಭ್ಯರ್ಥಿಗಳು ಸರ್ಕಾರಿ ಹುದ್ದೆಗಳಿಗೆ ನೇಮಕವಾಗುತ್ತಿದ್ದರು. ಆ ಕಾರಣದಿಂದ ಹೈದ್ರಾಬಾದ ನಿಜಾಮನ ೧೯೧೯ ರಲ್ಲಿ ಮುಲ್ಕಿ ಕಾನೂನು ಜಾರಿಗೆ ತಂದನು. (ಮುಲ್ಕಿ ಅಂದರೆ ಉರ್ದುವಿನಲ್ಲಿ ಸ್ಥಳೀಯರು ಎಂದರ್ಥ) ಈ ಕಾನೂನಿನ ಪ್ರಕಾರ ಸರ್ಕಾರದ ಎಲ್ಲಾ ಹುದ್ದೆಗಳಲ್ಲಿ ೮೦% ಮೀಸಲಾತಿ ನೀಡುವ ಅವಕಾಶ ಇತ್ತು. ೧೯೫೬ರಲ್ಲಿ ಕರ್ನಾಟಕ ಉದಯವಾದಾಗ ಹೈದ್ರಬಾದ ಕರ್ನಾಟಕವನ್ನು ಸೇರಿಸಿದ್ದೆ ದೊಡ್ಡ ಸಾಧನೆ ಹೊರತು ಈ ಭಾಗದ ಜನರಿಗೆ ಸೌಲಭ್ಯಗಳು ಸಿಗಲಿಲ್ಲ.

ಒಂದು ಕುಟುಂಬದಲ್ಲಿ ಇಬ್ಬರು ಮಕ್ಕಳಿದ್ದರೆ ಒಬ್ಬ ದಷ್ಟ-ಪುಷ್ಟವಾಗಿದ್ದ, ಇನ್ನೊಬ್ಬ ಮಗ ತೆಳ್ಳಗಿದ್ದರೆ ಅವನಿಗೆ ಪೌಷ್ಟಿಕ ಆಹಾರ ನೀಡಿ ಇಬ್ಬರನ್ನ ಸಮವಾಗಿ ಮಾಡುವಲ್ಲಿ ಪಾಲಕರು ಚಿತ್ತಹರಿಸುವರು. ಹಾಗೆಯೆ ಹಿಂದುಳಿದ ಹೈದ್ರಬಾದ ಕರ್ನಾಟಕಕ್ಕೆ ಸರ್ಕಾರಗಳು ಸೌಲಭ್ಯ ನೀಡಬೇಕಾಗಿತ್ತು. ಆ ದಿಸೆಯಲ್ಲಿ ಅನುಚ್ಛೇದ ೩೭೧ ನ್ನು ಜಾರಿಮಾಡಬೇಕಾಗಿತ್ತು. ನಿಜಾಮನ ಉಳಿದ ಪ್ರಾಂತ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಗೆ ಅನುಚ್ಛೇದ ೩೭೧ ತಿದ್ದುಪಡಿ ಮಾಡಿದ್ದಾರೆ. ಆದರೆ ನಿಜಾಮನ ಇನ್ನೊಂದು ಪ್ರಾಂತ್ಯವಾದ ಹೈದ್ರಬಾದ ಕರ್ನಾಟಕಕ್ಕೆ ಅನುಚ್ಛೇದ ೩೭೧ ಜಾರಿಗೊಳಿಸದಿರುವುದು ಪ್ರಜಾಪ್ರಭುತ್ವದ ಅಣಕವೇ ಸರಿ.

ಶಿವರಾಜ ತಂಗಡಗಿ

ಹೈದ್ರಬಾದ ಕರ್ನಾಟಕಕ್ಕೆ ೩೭೧ ಅನುಚ್ಛೇದ ಜಾರಿಯಾಗದಿದ್ದಕ್ಕೆ ನಮ್ಮ ಭಾಗದ ಅನಕ್ಷರತೆಯು ಒಂದು ಕಾರಣ. ಆದರೆ ಇತ್ತೀಚೆಗೆ ಒಂದು ದೇಶದ ಇಚ್ಛಾಶಕ್ತಿ ಕ್ರಿಯಾಶಕ್ತಿ ಎಂದು ಪರಿಗಣಿಸುವ ಯುವಕರು ಈ ಭಾಗಕ್ಕೆ ನ್ಯಾಯಕ್ಕಾಗಿ ಹೋರಾಡುವ ಪ್ರಜ್ಞಾವಂತಿಕೆ ಬೆಳಸಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ ನಡೆದ ೭೮ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ೩೭೧ ಅನುಚ್ಛೇದ ಔಚಿತ್ಯದ ಬಗ್ಗೆ ಗೋಷ್ಠಿ ಏರ್ಪಡಿಸಿ ಈ ಭಾಗದ ಸಮಸ್ಯೆಯನ್ನು ರಾಜ್ಯದ ಜನರಿಗೆ ತಿಳಿಸುವಲ್ಲಿ ಸಾಹಿತ್ಯ ಪರಿಷತ್ತು ಮಾಡಿದ್ದು ಸಹ ಒಳ್ಳೆಯ ಬೆಳವಣಿಗೆ. ಅಷ್ಟೇ ಅಲ್ಲದೇ ಅನುಚ್ಛೇದ ೩೭೧ ಕುರಿತಾಗಿ ಸಾಹಿತ್ಯ ಪರಿಷತ್ತು ಪುಸ್ತಕ ಪ್ರಕಟಿಸುತ್ತಿರುವುದು ಔಚಿತ್ಯ ಪೂರ್ಣ ಕಾರ್ಯವಾಗಿದೆ. ಸಾತ್ವಿಕ ಹೋರಾಟಕ್ಕೆ, ನ್ಯಾಯಯುತ ಬೇಡಿಕೆಗೆ ನಮ್ಮ ಬೆಂಬಲ ಸದಾ ಇರುತ್ತದೆ. ನಮ್ಮ ಭಾಗಕ್ಕೆ ಬೇಗ ಅನುಚ್ಛೇದ ೩೭೧ ಜಾರಿಯಾಗಲಿ, ಎಂದು ಒತ್ತಾಯಿಸುತ್ತೇನೆ.

ವೆಂಕಟರಾವ ನಾಡಗೌಡ.

ಹೈದ್ರಾಬಾದ – ಕರ್ನಾಟಕದ ಸಮಸ್ಯೆಗಳು ಮತ್ತು ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯ ಅವಶ್ಯಕತೆ

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ೫೬೫ ಸಂಸ್ಥಾನಗಳು ಇದ್ದು, ಆ ಎಲ್ಲ ಸಂಸ್ಥಾನಗಳು ರಾಜ ಮಹಾರಾಜರು, ಅವರ ಮಾಂಡಲೀಕರು ಆಳುತಿದ್ದರು. ಬ್ರಿಟೀಷರು ಈ ದೇಶ ಬಿಟ್ಟು ಹೋಗುವಾಗ ಆ ಎಲ್ಲ ಸಂಸ್ಥಾನಗಳಿಗೆ ಒಂದು ಆಹ್ವಾನವನ್ನು ನೀಡಿದ್ದರು. ಯಾವುದೇ ಸಂಸ್ಥಾನ ತಾನು ಇಚ್ಛೆಪಟ್ಟರೇ ಭಾರತ ಒಕ್ಕೂಟದಲ್ಲಿ ಸೇರಬಹುದು ಅಥವಾ ಪಾಕಿಸ್ತಾನಕ್ಕೆ ಸೇರಬಹುದು ಅಥವಾ ಪ್ರತ್ಯೇಕವಾಗಿ ಉಳಿಯಬಹುದು ಎಂದು ದ್ವಿಮುಖ ನೀತಿಯನ್ನು ಬಿಟ್ಟು ಹೋದರು. ಈ ಹಿನ್ನಲೆಯಲ್ಲಿ ಭಾರತದ ಅವಿಭಾಜ್ಯ ಅಂಗವಾಗಿರುವ ಜಮು–ಕಾಶ್ಮೀರದ ರಾಜ ಹರಿಸಿಂಗ್, ಪಂಜಾಬದ ಜುನಾಗಡ ಸಂಸ್ಥಾನದ ಮಹರಾಜ ಮೊಹಮ್ಮದ್ ಮಹಾಬಾತ್ ಕಣಜಿ –III ಹಾಗೂ ಹೈದ್ರಾಬಾದ ಸಂಸ್ಥಾನದ ನಿಜಾಮರಾದ ಮೀರ್ ಉಸ್ಮಾನ ಅಲೀ ಖಾನ ಇವರುಗಳು ಆಗಸ್ಟ್ ೧೫, ೧೯೪೭ ರಂದು ಭಾರತ ಒಕ್ಕೂಟದಲ್ಲಿ ಸೇರಲು ನಿರಾಕರಿಸಿ ಪ್ರತ್ಯೇಕವಾಗಿ ಉಳಿಯಲು ನಿರ್ಧರಿಸಿದರು. ಕಾಲಕ್ರಮೇಣ ಜಮ್ಮು ಕಾಶ್ಮೀರ ಸಂಸ್ಥಾನವು ಭಾರತ ಒಕ್ಕೂಟದಲ್ಲಿ ಕೆಲವು ಷರತ್ತುಗಳೊಂದಿಗೆ ಸೇರಿತು. ಅದೇ ರೀತಿ ಪಂಜಾಬ್ ಸಂಸ್ಥಾನವು ಕೂಡ ೨೪ ನೇ ಫೆಬ್ರವರಿ ೧೯೪೮ರಂದು ಭಾರತ ಒಕ್ಕೂಟದಲ್ಲಿ ಸೇರಲು ಒಪ್ಪಿಕೊಂಡಿತ್ತು.

ಆದರೆ ಹೈದ್ರಾಬಾದ ಸಂಸ್ಥಾನದ ನಿಜಾಮರು ಪ್ರತ್ಯೇಕವಾಗಿ ಉಳಿಯುವ ಯೋಚನೆಯೊಂದಿಗೆ ಭಾರತ ಸರಕಾರಕ್ಕೆ ಒಂದು ವರ್ಷಗಳ ಕಾಲಾವಕಾಶವನ್ನು "ಸ್ಟ್ಯಾಂಡ್ ಸ್ಟಿಲ್ ಅಗ್ರಿಮೆಂಟ್" ಮುಖಾಂತರ ಕೋರಿದರು. ಹಾಗಾಗಿ ಇಡೀ ದೇಶಕ್ಕೆ ೧೫ ಆಗಸ್ಟ್ ೧೯೪೭ ರಂದು ಸ್ವಾತಂತ್ರ್ಯ ಸಿಕ್ಕರೂ ಈ ಸಂಸ್ಥಾನದ ಜನರಿಗೆ ಆ ಭಾಗ್ಯ ದೊರೆಯಲಿಲ್ಲ. ಇದರಿಂದ ಈ ಸಂಸ್ಥಾನದ ಜನರು ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ತಯಾರಾಗುವುದು ಅನಿವಾರ್ಯವಾಯಿತು. ಈ ಪ್ರದೇಶದ ಅನೇಕ ನಾಯಕರು ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ಸೇರಿಸಬೇಕು ಎಂದು ಎಲ್ಲ ರೀತಿಯ ಹೋರಾಟ ಮಾಡುತ್ತ ಬಂದರು. ಆ

ಹೋರಾಟದ ಫಲವಾಗಿ ೧೭-೦೯-೧೯೪೮ ರಂದು ಹೈದ್ರಾಬಾದ ಸಂಸ್ಥಾನವನ್ನು ಭಾರತ ಸರಕಾರ ಪೋಲಿಸ್ ಕಾರ್ಯಾಚರಣೆಯನ್ನು "ಆಪರೇಶನ್ ಪೋಲೋ" ಎಂಬ ಹೆಸರಿನಿಂದ ೧೩-೦೯-೧೯೪೮ ರಂದು ಪ್ರಾರಂಭಿಸಿ ಕೇವಲ ನಾಲ್ಕು ದಿನಗಳಲ್ಲಿ ಹೈದ್ರಾಬಾದ ನಗರಕ್ಕೆ ಮುತ್ತಿಗೆ ಹಾಕಲಾಯಿತು, ಈ ಸಂದರ್ಭದಲ್ಲಿ ಪರಸ್ಥಿತಿಯ ಗಂಭೀರತೆಯನ್ನು ಅರಿತ ನಿಜಾಮ ಮೀರ್ ಉಸ್ಮಾನ ಅಲಿ ಖಾನ ಹೈದ್ರಾಬಾದ ಸಂಸ್ಥಾನವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಿದರು. ಆಗ ದೇಶದಲ್ಲಿ ಹೈದ್ರಾಬಾದ ಒಂದು ರಾಜ್ಯವಾಯಿತು. ಪೋಲಿಸ್ ಕಾರ್ಯಾಚರಣೆಯ ಮುಖ್ಯಸ್ಥರಾಗಿದ್ದ ಜನರಲ್ ಚೌಧರಿಯವರೆ ಮಿಲಿಟರಿ ಗೌವರ್ನರ್ ಆಗಿ ಅಧಿಕಾರ ಸ್ವೀಕರಿಸಿದರು ಹಾಗೂ ಅವರು ಡಿಸೆಂಬರ್ ೧೯೪೯ ವರೆಗೆ ಮುಂದುವರೆದರು. ಅವರ ನಂತರ ಹೈದ್ರಾಬಾದ ರಾಜ್ಯದ ಮುಖ್ಯಮಂತ್ರಿಯಾಗಿ ಎಂ.ಕೆ.ವೆಲ್ಲೋಡಿ ಐ.ಸಿ.ಎಸ್. ನೇಮಕವಾದರು. ನಿಜಾಮ ಮೀರ್ ಉಸ್ಮಾನ ಅಲಿ ಖಾನ ಕೇಂದ್ರ ಸರಕಾರದ ಜೊತೆ ಸಂಧಾನವನ್ನು ಏರ್ಪಡಿಸಿ ೨೬ನೇ ಜನವರಿ ೧೯೫೦ರಿಂದ ಹೈದ್ರಾಬಾದ ರಾಜ್ಯದ ರಾಜಪ್ರಮುಖರಾಗಿ ೧೯೫೬ರ ವರೆಗೆ ಅಧಿಕಾರದಲ್ಲಿದ್ದರು. ಹೈದ್ರಾಬಾದ ರಾಜ್ಯವನ್ನು ರಾಜ್ಯ ಪುನರ್ವಿಂಗಡಣೆಯ ಸಂದರ್ಭದಲ್ಲಿ ಮೂರು ಭಾಗಗಳನ್ನಾಗಿ ವಿಭಜಿಸಿ ಬೇರೆ ರಾಜ್ಯಗಳ ಜೊತೆ ವಿಲೀನಗೊಳಿಸಿದರು. ಈ ಸಂದರ್ಭದಲ್ಲಿ ಹೈದ್ರಾಬಾದ ರಾಜ್ಯ ಅಸ್ತಿತ್ವ ಕಳೆದುಕೊಂಡಿತು.

ಹೀಗಾಗಿ ಹೈದ್ರಾಬಾದ ಕರ್ನಾಟಕದವರು ವರ್ಷದಲ್ಲಿ ಎರಡು ಸಲ ಸ್ವಾತಂತ್ರ್ಯ ದಿನಾಚಾರಣೆಯನ್ನು ಆಚರಿಸುತ್ತಾರೆ. ಒಂದು ಭಾರತಕ್ಕೆ ಸಿಕ್ಕ ಸ್ವಾತಂತ್ರ್ಯಕ್ಕಾಗಿ, ಇನ್ನೊಂದು ಹೈದ್ರಾಬಾದ ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರಿದ ದಿನ ೧೭ನೇ ಸೆಪ್ಟೆಂಬರ್‌ರಂದು ಹೈದ್ರಾಬಾದ್-ಕರ್ನಾಟಕ ವಿಮೋಚನಾ ದಿನಾಚರಣೆ ಎಂದು ಆಚರಿಸಲಾಗುತ್ತದೆ.

ಹೈದ್ರಾಬಾದ ಸಂಸ್ಥಾನ: ಹೈದ್ರಾಬಾದ ಸಂಸ್ಥಾನವು ೧೭೨೪ರಲ್ಲಿ ಮೊಗಲ ಸಾಮ್ರಾಜ್ಯದ ವಿಸ್ತರಣೆಯ ಅಂಗವಾಗಿ ಡೆಕ್ಕನನ ಪ್ರಾಂತ್ಯವಾಗಿ ಉದಯವಾಯಿತು. ಇದರ ಮೊದಲ ವೈಸ್‌ರಾಯಿಯಾಗಿ ನಿಜಾಮುಲ್-ಮುಲ್ಕ ಎಂದು, "ಆಸೀಫ ಜಾಹೀ" ವಂಶಸ್ಥರನ್ನು ಮೊಗಲ ದೊರೆ ಔರಂಗಜೇಬ್ ನೇಮಿಸಿದನು, ಇದರ ಮೊದಲ ರಾಜಧಾನಿ ಔರಂಗಾಬಾದ ಆಗಿತ್ತು. "ಆಸೀಫ ಜಾಹೀ" ವಂಶದ ಮೊದಲ ಆಡಳಿತಗಾರನಾಗಿ ಖಮರುದ್ದೀನ ಖಾನ ಸಿದ್ದಿಖಿ ಅಧಿಕಾರ ಸ್ವೀಕರಿಸಿದನು. ಇವನ ಆಡಳಿತವು ಮಾರ್ಚ್ ೧೭೨೪ ರಿಂದ ೧ನೇ ಜೂನ್ ೧೭೪೮ಕ್ಕೆ ಕೊನೆಗೊಳ್ಳುತ್ತದೆ. ಇವನ ನಂತರ ಇವನ ನಾಲ್ಕನೇ ಮಗನಾದ ನವಾಬ್ ಮೀರ್ ನಿಜಾಮ ಅಲೀ ಖಾನ ಸಿದ್ದಿಖಿ ಬಹದೂರ ಇವನು ಅಧಿಕಾರಕ್ಕೆ

ಬರುತ್ತಾನೆ. ೧೭೬೩ರಲ್ಲಿ ರಾಜಧಾನಿಯನ್ನು ಔರಂಗಾಬಾದ್‌ದಿಂದ ಹೈದ್ರಾಬಾದಗೆ ಸ್ಥಳಾಂತರಿಸಿದ ಇವನು ೧೮೦೩ರಲ್ಲಿ ನಿಧನವಾಗುತ್ತಾನೆ. ಇವನ ನಂತರ ಇವನ ಎರಡನೇ ಮಗ ಮೀರ್ ಅಕ್ಬರ್ ಅಲೀ ಖಾನ ಸಿದ್ದಿಖಿ ಸಿಕಂದರ ಜಹಾ ಅಧಿಕಾರಕ್ಕೆ ಬರುತ್ತಾನೆ. ಇವನು ನಿಧನಾನಂತರ ೧೮೨೯ರಲ್ಲಿ ಇವನ ಮಗ ನಾಸೀರ್ ಉದ್ - ದವಲಾಹ ಮೀರ್ ಫರಕುಂದಾ ಅಲೀಖಾನ ಸಿದ್ದಿಖಿ ಅಧಿಕಾರಕ್ಕೆ ಬರುತ್ತಾನೆ. ಇವನು ೧೮೫೭ ರವರೆಗೆ ಅಧಿಕಾರದಲ್ಲಿರುತ್ತಾನೆ, ಇವನ ನಂತರ ಇವನ ಮಗನಾದ ಅಪ್ಜಲ್-ಅದ್-ದವಲ್ ೧೮೫೭ ರಲ್ಲಿ ಅಧಿಕಾರಕ್ಕೆ ಬರುತ್ತಾನೆ. ಇವನು ೧೮೬೯ರವರೆಗೆ ಅಧಿಕಾರದಲ್ಲಿರುತ್ತಾನೆ, ಇವನ ನಂತರ ಇವನ ಮಗನಾದ ಮಹಿಬೂಬ ಅಲಿ ಖಾನ ಸಿದ್ದಿಖಿ ೧೮೬೯ ರಲ್ಲಿ ಅಧಿಕಾರಕ್ಕೆ ಬರುತ್ತಾನೆ. ಇವನ ನಂತರ ಕೊನೆಯ ನಿಜಾಮ ದೊರೆ ಮೀರ ಉಸ್ಮಾನ್ ಅಲೀ ಖಾನ (ಆಸೀಫ್ ಜಾಹ - ೭) ೧೯೧೧ ರಲ್ಲಿ ಅಧಿಕಾರಕ್ಕೆ ಬರುತ್ತಾನೆ. ಇವನ ಆಡಳಿತದಲ್ಲಿ ಹೈದ್ರಾಬಾದ ಸಂಸ್ಥಾನ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸುತ್ತದೆ.

ಕೊನೆಯ ನಿಜಾಮನ ಆಡಳಿತ: ಈ ಸಂಸ್ಥಾನದ ಕೊನೆಯ ನಿಜಾಮ ಮೀರ್ ಉಸ್ಮಾನ ಅಲಿ ಖಾನ ೧೮೮೬ ಏಪ್ರಿಲ್ ೬ ರಂದು ಮಹಿಬೂಬ ಅಲಿ ಖಾನ ಸಿದ್ದಿಖಿಯ ಎರಡನೆಯ ಮಗನಾಗಿ ಜನಿಸಿದನು. ಇವನು ೧೮ನೇ ಸೆಪ್ಟೆಂಬರ್ ೧೯೧೧ರಲ್ಲಿ ಅಧಿಕಾರಕ್ಕೆ ಬಂದನು. ಇವನ ಆಡಳಿತದಲ್ಲಿ ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಇವನು ಕೂಡ ಒಬ್ಬನಾಗಿದ್ದನು. ೧೯೪೦ರಲ್ಲಿ ಇವನ ಹತ್ತಿರ ೨ ಬಿಲಿಯನ್ ಡಾಲರ್ ಹಣವಿತ್ತು. ಆ ಸಂದರ್ಭದಲ್ಲಿ ಭಾರತ ಸರಕಾರದ ವಾರ್ಷಿಕ ಬಜೆಟ್ ೧ ಬಿಲಿಯನ್ ಡಾಲರ್ ಆಗಿತ್ತು. ಹೀಗಾಗಿ ಇವನು ಸಾಯುವವರೆಗೂ ೧೯೬೭ವರೆಗೆ ಏಷಿಯಾ ಖಂಡದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿಯೇ ಉಳಿದ. ಇವನು ಸುಶಿಕ್ಷಿತನು, ಒಳ್ಳೆಯ ಆಡಳಿತಗಾರನು ಆಗಿದ್ದನು. ಇವನು ಒಳ್ಳೆಯ ಶಿಕ್ಷಣ ಪಡೆದಿದ್ದನು, ಇಂಗ್ಲಿಷ್, ಉರ್ದು, ಪರ್ಷಿಯನ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದನು. ಇವನ ಆಡಳಿತದಲ್ಲಿ ಹೈದ್ರಾಬಾದ ಸಂಸ್ಥಾನವು ಸ್ವಾತಂತ್ರ್ಯ ಪೂರ್ವ ಭಾರತದ ಅತ್ಯಂತ ದೊಡ್ಡ ಸಂಸ್ಥಾನವಾಗಿತ್ತು, ಹೈದ್ರಾಬಾದ ಸಂಸ್ಥಾನವು ೨,೨೩,೦೦೦ ಚ.ಕಿ. ವಿಸ್ತೀರ್ಣ ಹೊಂದಿತ್ತು.

ಈ ಸಂಸ್ಥಾನದ ಆಡಳಿತ ಭಾಷೆ ಉರ್ದುವಾಗಿತ್ತು, ಶಿಕ್ಷಣ ಮಾಧ್ಯಮ ಕೂಡ ಉರ್ದುವಾಗಿತ್ತು. ಈತನ ಆಡಳಿತದಲ್ಲಿ ಹಲವಾರು ಅಭಿವೃದ್ಧಿ

ಯೋಜನೆಗಳನ್ನು ಹಮ್ಮಿಕೊಂಡಿದ್ದನು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ೧೯೧೭ರಲ್ಲಿ ಹೈದ್ರಾಬಾದ ನಗರದಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯ ಸ್ಥಾಪನೆ, ೧೯೨೬ ರಲ್ಲಿ ಉಸ್ಮಾನಿಯ ವೈದ್ಯಕೀಯ ಕಾಲೇಜು ಸ್ಥಾಪಿಸಿದನು, ಬನಾರಸ್ ಹಿಂದು ವಿಶ್ವವಿದ್ಯಾಲಯ ಹಾಗೂ ಅಲಿಗಡ್ ಮುಸ್ಲಿಂ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ೧೦ ಲಕ್ಷ ರೂ. ಹಣವನ್ನು ದೇಣಿಗೆ ನೀಡಿದನು. ಶಿಕ್ಷಣಕ್ಕಾಗಿ ಅವನು ತನ್ನ ಬಜೆಟ್‌ನ ಶೇ ೧೧ರಷ್ಟು ಹಣವನ್ನು ಮೀಸಲಿಟ್ಟನು. ಆದರೆ ತನ್ನ ಸಂಸ್ಥಾನದ ಪ್ರಜೆಗಳ ಅವಶ್ಯಕತೆಗೆ ತಕ್ಕಂತೆ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚು ಮಾಡಲಿಲ್ಲ. ಇದರಿಂದ ರಾಜ್ಯ ಶಿಕ್ಷಣದಲ್ಲಿ ಭಾರಿ ಹಿನ್ನಡೆ ಸಾಧಿಸಿತು.

೭ನೇ ನವೆಂಬರ್ ೧೯೧೯ರಲ್ಲಿ ಸರಕಾರ ನಡೆಸಲು ಹೊಸ ಸಂವಿಧಾನವನ್ನು ಜಾರಿಗೆ ತಂದನು. ಅವನ ಸಂಸ್ಥಾನದಲ್ಲಿ ಹೈದ್ರಾಬಾದ ಸಿವಿಲ್ ಸರ್ವಿಸ್ ಎಂಬ ಸರಕಾರಿ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದಿದ್ದನು. ೧೯೨೦ರಲ್ಲಿ ಉಸ್ಮಾನ ಸಾಗರ, ಹಿಮಾಯತ್ ಸಾಗರ ಎರಡು ಜಲಾಶಯಗಳನ್ನು ನಿರ್ಮಿಸಿದನು. ಹೊಸಪೇಟೆ ಹತ್ತಿರ ತುಂಗಾ-ಭದ್ರಾ ನದಿಗೆ ೧೯೪೫ರಲ್ಲಿ ಜಲಾಶಯವನ್ನು ನಿರ್ಮಿಸಲು ಪ್ರಾರಂಭಿಸಿದನು, ಅದು ೧೯೫೩ರಲ್ಲಿ ಪೂರ್ಣಗೊಂಡಿದೆ. ಕೃಷ್ಣ ನದಿಗೆ ಜಲಾಶಯ ನಿರ್ಮಿಸುವ ಸರ್ವೆ ಕಾರ್ಯಕ್ಕೆ ಚಾಲನೆ ನೀಡಿದನು. ಅದೇ ರೀತಿ ವಾಡಿ – ಗದಗ ಹಾಗೂ ಮಹಿಬೂಬ ನಗರ – ಮುನಿರಾಬಾದ ರೈಲ್ವೆ ಯೋಜನೆಗೆ ಚಾಲನೆ ನೀಡಿ ಸರ್ವೆ ಕಾರ್ಯ ಪೂರ್ಣಗೊಳಿಸಿದನು. ಆ ರೈಲ್ವೆ ಯೋಜನೆಗಳು ಇಂದಿಗೂ ನನೆಗುದಿಗೆ ಬಿದ್ದಿರುವುದು ಪ್ರಜಾಪ್ರಭುತ್ವ ಸರಕಾರಗಳ ದುರಂತವೇ ಸರಿ. ಅವನು ಹಣಕಾಸಿನ ವ್ಯವಹಾರಕ್ಕೆ ತನ್ನದೇ ಆದ ನಾಣ್ಯವನ್ನು ಹೊಂದಿದ್ದು (ಹೈದ್ರಾಬಾದ ಸಿಕ್ಕಾ), ಸಂಸ್ಥಾನದ ಹಣಕಾಸಿನ ವ್ಯವಹಾರವನ್ನು ನಡೆಸಲು ೧೯೪೧ ರಲ್ಲಿ "ಹೈದ್ರಾಬಾದ ಸ್ಟೇಟ್ ಬ್ಯಾಂಕ್" (ಈಗಿನ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ)ನ್ನು ರಾಜ್ಯದ ಕೇಂದ್ರ ಬ್ಯಾಂಕನ್ನಾಗಿ ಸ್ಥಾಪಿಸಿದನು. ಸ್ವಂತ ರೈಲ್ವೆ ಇಲಾಖೆಯನ್ನು ಸಹ ಹೊಂದಿದ್ದು, ಸ್ವಂಸ್ಥಾನದ ಜನರಿಗೆ ಸ್ವಂತ ರೈಲ್ವೆ ಸಾರಿಗೆ ವ್ಯವಸ್ಥೆ ಮಾಡಿದ್ದನು. ಸಂಸ್ಥಾನದ ರಕ್ಷಣೆಗಾಗಿ ಮಿಲಿಟರಿ ವ್ಯವಸ್ಥೆಯನ್ನು ಕೂಡ ಹೊಂದಿದ್ದನು. ಈ ಕಾರಣಕ್ಕಾಗಿ ಪ್ರತ್ಯೇಕ ದೇಶವಾಗಿ ಉಳಿಯಬೇಕೆಂಬ ಬಯಕೆ ಅವನದಾಗಿತ್ತು.

ರಾಜ್ಯಗಳ ಪುನರ್ವಿಂಗಡನೆ : ೧೯೫೩ರಲ್ಲಿ ಕೊಪ್ಪಳದ ಪ್ರಥಮ ಲೋಕಸಭಾ ಸದಸ್ಯರಾದ ಡಾ. ಶಿವಮೂರ್ತಿಸ್ವಾಮಿ ಅಳವಂಡಿಯವರು ರಾಜ್ಯಗಳನ್ನು ಭಾಷೆಗಳ

ಆಧಾರದ ಮೇಲೆ ವಿಂಗಡನೆ ಮಾಡಬೇಕೆಂದು ಪ್ರಪ್ರಥಮ ಬಾರಿಗೆ ಲೋಕಸಭೆಯಲ್ಲಿ ಒತ್ತಾಯಿಸಿದರು, ಈ ಹಿನ್ನಲೆಯಲ್ಲಿ ಕೇಂದ್ರ ಸರಕಾರವು ಆಡಳಿತಾತ್ಮಕ ದೃಷ್ಟಿಯಿಂದ ಪ್ರಥಮ ರಾಜ್ಯ ಪುನರ್ವಿಂಗಡಣಾ ಆಯೋಗವನ್ನು (SRC) ನ್ಯಾ.ಡಾ.ಫಜಲ್ ಅಲಿಯವರ ನೇತೃತ್ವದಲ್ಲಿ ರಚಿಸಿತು. ನ್ಯಾ.ಡಾ. ಫಜಲ್‌ಅಲಿಯವರು ತಮ್ಮ ವರದಿಯನ್ನು ಸಲ್ಲಿಸುತ್ತಾ ಹೈದ್ರಾಬಾದ ರಾಜ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿ, ಬೇರೆ ರಾಜ್ಯಗಳಲ್ಲಿ ವಿಲೀನಗೊಳಿಸುವ ಶಿಫಾರಸ್ಸನ್ನು ಮಾಡುತ್ತಾ, ಹೈದ್ರಾಬಾದ ಕರ್ನಾಟಕ ದೇಶದಲ್ಲೇ ಅತ್ಯಂತ ಹಿಂದುಳಿದ ಪ್ರದೇಶ, ಮೈಸೂರು ರಾಜ್ಯ ದೇಶದಲ್ಲೇ ಅತ್ಯಂತ ಮುಂದುವರೆದ ಪ್ರದೇಶ, ಅವೆರಡರಲ್ಲಿ ೧೦೦ ವರ್ಷಗಳಷ್ಟು ಅಭಿವೃದ್ಧಿಯಲ್ಲಿ ವ್ಯತ್ಯಾಸವಿದೆ ಹಾಗಾಗಿ ಆ ಪ್ರದೇಶವನ್ನು ಹತ್ತು ವರ್ಷಗಳ ಕಾಲ ಪ್ರತ್ಯೇಕವಾಗಿ ಇಟ್ಟು ಅಭಿವೃದ್ಧಿಪಡಿಸಿ ಆನಂತರ ಅದನ್ನು ಮೈಸೂರು ರಾಜ್ಯಕ್ಕೆ ಸೇರಿಸಲು ಸಲಹೆಯನ್ನು ಕೇಂದ್ರ ಸರಕಾರಕ್ಕೆ ಮಾಡಿತು. ಆದರೆ ಅಂದಿನ ಪ್ರಧಾನಿ ಪಂಡಿತ್ ಜವಹಾರಲಾಲ ನೆಹರುರವರು ಆ ಸಲಹೆಯನ್ನು ತಿರಸ್ಕರಿಸುತ್ತ ಮೈಸೂರು ರಾಜ್ಯದವರಿಗೆ ಅಭಿವೃದ್ಧಿಯ ಕುರಿತು ಆಳವಾದ ಅನುಭವ ಹಾಗೂ ಕಾಳಜಿ ಇದೆ, ಇದು ಅವರ ಜವಾಬ್ದಾರಿ ಆ ಪ್ರದೇಶವನ್ನು ಅವರೇ ಅಭಿವೃದ್ಧಿ ಮಾಡುತ್ತಾರೆ ಎಂಬ ಅಪಾರವಾದ ವಿಶ್ವಾಸದೊಂದಿಗೆ ಹೈದ್ರಾಬಾದ – ಕರ್ನಾಟಕ ಪ್ರದೇಶವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಿದರು. ಹೈದ್ರಾಬಾದ–ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ಮೈಸೂರು ರಾಜ್ಯವೇ ಮಾಡುತ್ತದೆ ಎಂದು ಹೇಳಲಾಗಿತ್ತು ಮತ್ತು ಇದನ್ನು ಈ ಭಾಗದ ಜನ ನಂಬಿದ್ದು ಇತಿಹಾಸ. ಆದರೆ ೧೯೫೬ ರಿಂದ ಇಲ್ಲಿಯವರೆಗೆ ಮೈಸೂರು/ ಕರ್ನಾಟಕ ರಾಜ್ಯವನ್ನಾಳಿದ ಎಲ್ಲ ಸರಕಾರಗಳು ಈ ಭಾಗಕ್ಕೆ ಅಭಿವೃದ್ಧಿ ವಿಷಯದಲ್ಲಿ ಭಾರಿ ತಾರತಮ್ಯ ಮಾಡಿರುವುದು ಕಂಡುಬರುತ್ತದೆ.

ನವೆಂಬರ್ ೧, ೧೯೫೬ ರಂದು ಹಲವಾರು ಹೋರಾಟಗಾರರ ಫಲವಾಗಿ ಮುಂಬೈ ರಾಜ್ಯದ ಬಿಜಾಪುರ, ಬೆಳಗಾವಿ, ಕಾರವಾರ, ಮದ್ರಾಸ್ ರಾಜ್ಯದ ಮಂಗಳೂರು ಮತ್ತು ಬಳ್ಳಾರಿ, ಕೇರಳದ ಮಡಿಕೇರಿ, ಹೈದ್ರಾಬಾದ ರಾಜ್ಯದ ಬೀದರ, ಅವಿಭಜಿತ ಗುಲ್ಬರ್ಗಾ ಮತ್ತು ಅವಿಭಜಿತ ರಾಯಚೂರ ಜಿಲ್ಲೆಗಳನ್ನು ಸೇರಿಸಿಕೊಂಡು ಅಖಂಡ ಮೈಸೂರು ರಾಜ್ಯ ಉದಯವಾಯಿತು.

ಹೈದ್ರಾಬಾದ ರಾಜ್ಯವು ಭಾಷೆಯ ವೈವಿಧ್ಯಮಯದಿಂದ ಕೂಡಿದ ಪ್ರದೇಶವಾಗಿದ್ದು ಒಟ್ಟಾರೆಯಾಗಿ ನಾಲ್ಕು ಪ್ರಮುಖ ಭಾಷೆ ಮಾತನಾಡುವ

ಜನ ಈ ರಾಜ್ಯದಲ್ಲಿದ್ದು. ತೆಲುಗು ಮಾತನಾಡುವ ಈಗಿನ ತೆಲಂಗಾಣ, ಮರಾಠಿ ಮಾತನಾಡುವ ಮರಾಠವಾಡ, ಕನ್ನಡ ಮಾತನಾಡುವ ಈಗಿನ ಹೈದ್ರಾಬಾದ ಕರ್ನಾಟಕ ಮತ್ತು ಈ ಎಲ್ಲ ಪ್ರದೇಶಗಳಲ್ಲಿ ಉರ್ದುಮಾತನಾಡುವ ಜನ ಬೆರೆತುಹೋಗಿದ್ದರು. ಒಟ್ಟು ೧೬ ಜಿಲ್ಲೆಗಳನ್ನು ಹೊಂದಿದ್ದ ಈ ರಾಜ್ಯವು ಕನ್ನಡ ಮಾತನಾಡುವ ಮೂರು ಜಿಲ್ಲೆಗಳಾದ ಬೀದರ, ಅವಿಭಜಿತ ಗುಲ್ಬರ್ಗಾ ಮತ್ತು ಅವಿಭಜಿತ ರಾಯಚೂರ, ತೆಲುಗು ಮಾತನಾಡುವ ಎಂಟು ಜಿಲ್ಲೆಗಳಾದ ಮಹಿಬೂಬನಗರ, ಹೈದ್ರಾಬಾದ, ಮೇಡಕ್, ಕರೀಮನಗರ, ಖಮ್ಮಮ್, ರಂಗಾರೆಡ್ಡಿ, ಆದಿಲಾಬಾದ್, ವಾರಂಗಲ್ ಹಾಗೂ ಮರಾಠಿ ಮಾತನಾಡುವ ಐದು ಜಿಲ್ಲೆಗಳಾದ ಭೀಡ್, ಔರಂಗಾಬಾದ, ನಾಂದೇಡ್, ಲಾತೂರ್ ಹಾಗೂ ಉಸ್ಮಾನಾಬಾದ್. ರಾಜ್ಯಗಳ ಪುನರ್ವಿಂಗಡಣೆಯಾದಾಗ ಹೈದ್ರಾಬಾದ ರಾಜ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿ ತೆಲಂಗಾಣವನ್ನು ಆಂಧ್ರಪ್ರದೇಶಕ್ಕೆ, ಮರಾಠವಾಡವನ್ನು ಮಹಾರಾಷ್ಟ್ರಕ್ಕೆ ಹಾಗೂ ಹೈದ್ರಾಬಾದ ಕರ್ನಾಟಕವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು.

ನಿಜಾಮನ ಆಡಳಿತದಲ್ಲಿ ಹೈದ್ರಾಬಾದ ಸಂಸ್ಥಾನದ ಬಹುತೇಕ ಸರಕಾರಿ ಹುದ್ದೆಗಳಿಗೆ ನೇಮಕಗೊಳ್ಳುವವರು ಹಾಗೂ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣಕ್ಕೆ ಅತೀ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆಯುವವರು ಉತ್ತರ ಭಾರತದವರಾಗಿದ್ದರು. ಇದನ್ನು ಮನಗಂಡ ಸಂಸ್ಥಾನದ ನಿಜಾಮ ಮೀರ್ ಉಸ್ಮಾನ ಅಲಿ ಖಾನ ೧೯೧೯ರಲ್ಲಿ ಒಂದು ಫರ್ಮಾನ್ (ಸರಕಾರಿ ಆದೇಶ) ಹೊರಡಿಸಿ "ಮುಲ್ಕಿ" ಕಾನೂನನ್ನು ಜಾರಿಗೆ ತಂದನು. ಮುಲ್ಕಿ ಎಂದರೆ ಉರ್ದು ಶಬ್ದ, ಇದರರ್ಥ ದೇಶೀಯ ಅಥವಾ ಸ್ಥಳೀಯ ಎಂದರ್ಥ. ಯಾರು ಈ ಸಂಸ್ಥಾನದಲ್ಲಿ ೧೫ ವರ್ಷಗಳು ವಾಸವಾಗಿರುತ್ತಾರೊ ಅವರಿಗೆ ಮುಲ್ಕಿ ಎಂದು ಪರಿಗಣಿಸಲಾಗುತ್ತಿತ್ತು. ಮುಲ್ಕಿ ಕಾನೂನು ಎಂದರೆ, ಹೈದ್ರಾಬಾದ ಸಂಸ್ಥಾನದ ಎಲ್ಲ ಸರಕಾರಿ ಹುದ್ದೆಗಳಲ್ಲಿ ಹಾಗೂ ಉನ್ನತ ವ್ಯಾಸಂಗದಲ್ಲಿ ಸ್ಥಳೀಯರಿಗೆ ಶೇ.೮೫ ರಷ್ಟು ಹುದ್ದೆಗಳನ್ನು ಮೀಸಲಿಡುವುದು. ಈ ಕಾನೂನು ನವೆಂಬರ್ ೧, ೧೯೫೬ರವರೆಗೆ ಹೈದ್ರಾಬಾದ ರಾಜ್ಯದಲ್ಲಿ ಜಾರಿಯಲ್ಲಿತ್ತು. ಅದಾದ ನಂತರ ಆಂಧ್ರಪ್ರದೇಶದ ತೆಲಂಗಾಣದಲ್ಲಿ ಇಂದಿಗೂ ಜಾರಿಯಲ್ಲಿದೆ ಹಾಗೂ ಮರಾಠವಾಡಲ್ಲಿ ಇದರ ಸವಲತ್ತನ್ನು ೩೭೧ನೇ ಕಲಂ ಅಡಿಯಲ್ಲಿ ನೀಡಲಾಯಿತು. ಆದರೆ ಅದೇ ಸಂಸ್ಥಾನದ, ಅದೇ ರಾಜ್ಯದ ಮತ್ತೊಂದು ಭಾಗವಾಗಿದ್ದ ಹೈದ್ರಾಬಾದ – ಕರ್ನಾಟಕಕ್ಕೆ ಮುಲ್ಕಿ ಕಾನೂನಿನ ಸವಲತ್ತು ನೀಡದೇ ವಂಚಿಸಲಾಯಿತು.

ತೆಲಂಗಾಣ ಪ್ರದೇಶವನ್ನು ಆಂಧ್ರಪ್ರದೇಶಕ್ಕೆ ಸೇರಿಸುವಾಗ ಹೈದ್ರಾಬಾದ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಡಾ.ಬಿ.ರಾಮಕೃಷ್ಣರಾವ್ ಹಾಗೂ ಆಂಧ್ರಪ್ರದೇಶ ಮುಖ್ಯ ಮಂತ್ರಿಗಳಾದ ಶ್ರಿ ಬಿ.ಗೋಪಾಲ್ ರೆಡ್ಡಿ ಇವರು ಜಂಟಿಯಾಗಿ "ಜಂಟಲ್ ಮ್ಯಾನ್ ಅಗ್ರಿಮೆಂಟ್"ಗೆ ಸಹಿ ಮಾಡಿದರು. ಇದರಲ್ಲಿ ಮುಖ್ಯವಾಗಿ ಮುಲ್ಕಿ ಕಾನೂನು ಮುಂದುವರೆಸಬೇಕು, ತೆಲಂಗಾಣ ಪ್ರಾದೇಶಿಕ ಸ್ಥಾಯಿ ಸಮಿತಿ ರಚನೆ ಮಾಡಬೇಕು, ತೆಲಂಗಾಣಕ್ಕೆ ಸಂಬಂಧಿಸಿದ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಈ ಸಮಿತಿಯ ಮುಖಾಂತರವೇ ಮಾಡಬೇಕು, ಉರ್ದು ಭಾಷೆಗೆ ಈಗಿರುವ ಸ್ಥಾನಮಾನವನ್ನು ಐದು ವರ್ಷಗಳವರೆಗೆ ಮುಂದುವರೆಸಬೇಕು, ರಾಜ್ಯ ಸಚಿವ ಸಂಪುಟದಲ್ಲಿ ಶೇ ೪೦ ರಷ್ಟು ಸಚಿವರು ತೆಲಂಗಾಣದವರಿರಬೇಕು, ಆಂಧ್ರದವರು ಮುಖ್ಯಮಂತ್ರಿಯಾದರೆ ತೆಲಂಗಾಣದವರೊಬ್ಬರು ಉಪಮುಖ್ಯಮಂತ್ರಿಯಾಗಬೇಕು ಅಥವಾ ತೆಲಂಗಾಣದವರು ಮುಖ್ಯಮಂತ್ರಿಯಾದರೆ ಆಂಧ್ರದವರು ಉಪ ಮುಖ್ಯಮಂತ್ರಿಯಾಗಬೇಕೆಂದು "ಜಂಟಲ್ ಮ್ಯಾನ್ ಅಗ್ರಿಮೆಂಟ್" ರೂಪದಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು. ಕೆಲವೇ ವರ್ಷಗಳಲ್ಲಿ "ಜಂಟಲ್ ಮ್ಯಾನ್ ಅಗ್ರಿಮೆಂಟ್" ಅನುಷ್ಠಾನದಲ್ಲಿ ಉಲ್ಲಂಘನೆಯಾಗಿದೆ ಎಂದು ತೆಲಂಗಾಣ ಪ್ರಾಂತ್ಯದಲ್ಲಿ ಪ್ರತ್ಯೇಕ ರಾಜ್ಯದ ಕೂಗೆದ್ದಿತ್ತು.

ಮುಲ್ಕಿ ಕಾನೂನಿನ ಸವಲತ್ತು ೧೯೫೭ರಲ್ಲಿ ಕೇಂದ್ರ ಸರಕಾರ ಸಂವಿಧಾನದ ೩೭೧ನೇ ಕಲಂ ಉಪಬಂಧ (೧)ರ ಅಡಿಯಲ್ಲಿ ತೆಲಂಗಾಣಕ್ಕೆ ನೀಡಿತು. "ಜಂಟಲ್ ಮ್ಯಾನ್ ಅಗ್ರಿಮೆಂಟ್" ಉಲ್ಲಂಘನೆಯ ಕಾರಣದಿಂದ ತೆಲಂಗಾಣದಲ್ಲಿ ಪ್ರತ್ಯೇಕ ರಾಜ್ಯದ ಕೂಗು ಅರವತ್ತರ ದಶಕದಿಂದಲೇ ಪ್ರಾರಂಭವಾಯಿತು. ೧೯೬೯ರಲ್ಲಿ ಆಂಧ್ರದ ಸಿ. ಚೆನ್ನಾರೆಡ್ಡಿ ನೇತೃತ್ವದಲ್ಲಿ ತೆಲಂಗಾಣಕ್ಕೆ ನೀಡಿದ ವಿಶೇಷ ಸ್ಥಾನಮಾನ ಸಮಗೂ ನೀಡಬೇಕು ಎಂದು "ಜೈ ಆಂಧ್ರ" ಎಂದು ಅತೀ ಉಗ್ರ ಹೋರಾಟ ನಡೆದು ಕೇಂದ್ರ ಸರಕಾರದ ಕಚೇರಿಗಳನ್ನು, ರಾಜ್ಯ ಸರಕಾರದ ಕಚೇರಿಗಳನ್ನು ಧ್ವಂಸಗೊಳಿಸಿ, ಕಾನೂನಿನ ಸುವ್ಯವಸ್ಥೆಯ ಪ್ರಶ್ನೆ ಎದುರಾಗಿ ಜನರ ಜೀವನ ದುಸ್ತರವಾಗಿತ್ತು. ಈ ಹೋರಾಟಕ್ಕೆ ಮಣಿದ ಕೇಂದ್ರ ಸಕಾರ ೧೯೭೩ರಲ್ಲಿ ಸಂವಿಧಾನದ ೩೭೧ ನೇ ಕಲಂ ಗೆ ತಿದ್ದುಪಡಿ ಮಾಡಿ, ಸುವಿಧಾನದ ೩೭೧ನೇ ಕಲಂಗೆ "ಡಿ" ಉಪಬಂಧವನ್ನು ಸೇರಿಸಿ ಮುಲ್ಕಿ ಕಾನೂನಿನ ಸವಲತ್ತನ್ನು ಇಡೀ ಆಂಧ್ರಪ್ರದೇಶಕ್ಕೆ ವಿಸ್ತರಿಸಲಾಯಿತು ಮತ್ತು ಸಂವಿಧಾನದ ೩೭೧ನೇ ಕಲಂಗೆ "ಇ" ಉಪಬಂಧವನ್ನು ಸೇರಿಸಿ ತೆಲಂಗಾಣದಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಯಿತು. ಇದರ ಜೊತೆಗೆ

ತೆಲಂಗಾಣಕ್ಕೆ "ಸಿಕ್ಸ್ ಪಾಯಿಂಟ್ ಫಾರ್ಮುಲಾ" ಎಂದು ಮತ್ತೊಂದು ಒಪ್ಪಂದ ಮಾಡಿದರು. ಈ ಒಪ್ಪಂದವು ಕೂಡ ಅನುಷ್ಠಾನದಲ್ಲಿ ಉಲ್ಲಂಘನೆಯಾಯಿತು. ಈ ಎರಡು ಕಾರಣಕ್ಕಾಗಿ ಇಂದು ಪ್ರತ್ಯೇಕ ರಾಜ್ಯವೇ ಇದಕ್ಕೆಲ್ಲ ಪರಿಹಾರ ಎನ್ನುವ ಮಟ್ಟಕ್ಕೆ ಬಂದು ನಿಂತಿದೆ.

ಆದರೆ ಅದೇ ರಾಜ್ಯದ ಮತ್ತೊಂದು ಪ್ರದೇಶವಾದ ಹೈದ್ರಾಬಾದ – ಕರ್ನಾಟಕದಲ್ಲಿ ಮುಲ್ಕಿ ಕಾನೂನು ಮುಂದುವರೆಸುವ ಬಗ್ಗೆ ಹಾಗೂ ಈ ಭಾಗದ ಅಭಿವೃದ್ಧಿಯ ಕಡೆಗೆ ಯಾವೊಬ್ಬ ಮುಖಂಡರು, ಜನಪ್ರತಿನಿಧಿಗಳು ಕಾಳಜಿವಹಿಸದೇ ಇರುವುದರಿಂದ, ಈ ಭಾಗದ ಜನರ ಬದುಕು ಹೈರಾಣಾಗಿರುವದು ಸತ್ಯಸಂಗತಿ. ಕಳೆದ ೫೬ ವರ್ಷಗಳಲ್ಲಿ ಈ ಭಾಗದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿ ಮೂಲಭೂತ ಸೌಕರ್ಯಗಳ ಕೊರತೆ ಎದುರಾಗಿದೆ. ಕನಿಷ್ಟ ಮೂಲಭೂತ ಸೌಕರ್ಯಗಳಾದ ಉತ್ತಮ ರಸ್ತೆ, ಸರಕಾರಿ ಸಾರಿಗೆ ವ್ಯವಸ್ಥೆ, ಶೈಕ್ಷಣಿಕ ಕೇಂದ್ರಗಳ ವ್ಯವಸ್ಥೆ, ಶುದ್ಧ ಕುಡಿಯುವ ನೀರು, ಮನೆ, ವಿದ್ಯುತ್, ಇತ್ಯಾದಿಗಳನ್ನು ನೀಡುವಲ್ಲಿ ನಮ್ಮನ್ನಾಳಿದ ಸರಕಾರಗಳು ವಿಫಲವಾಗಿವೆ. ಇಲ್ಲಿ ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಜನರ ಜೀವನ ಉತ್ತಮಗೊಳಿಸುವ ಕೆಲಸ ನಮ್ಮನ್ನಾಳಿದ ಯಾವ ರಾಜ ಮಹಾರಾಜರು ಮತ್ತು ಪ್ರಜಾಪ್ರಭುತ್ವ ಸರಕಾರಗಳು ಮಾಡಲಿಲ್ಲ ಎಂಬುದೇ ಸೋಜಿಗದ ವಿಷಯ.

ನೈಸರ್ಗಿಕ ಸಂಪನ್ಮೂಲಗಳು

ಹೈದ್ರಾಬಾದ – ಕರ್ನಾಟಕದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಸಾಕಷ್ಟಿದೆ.

೧. ದೇಶದಲ್ಲಿರುವ ಏಕೈಕ ಚಿನ್ನ ಉತ್ಪಾದಿಸುವ ಗಣಿ ಹಟ್ಟಿ ಚಿನ್ನದ ಗಣಿ ಇರುವುದು ಹೈದ್ರಾಬಾದ – ಕರ್ನಾಟಕದ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಹಟ್ಟಿಯಲ್ಲಿ. ಈ ಗಣಿಯಿಂದ ವರ್ಷಕ್ಕೆ ೪೦೦೦ ಕಿ.ಗ್ರಾಂ. ಬಂಗಾರ ಉತ್ಪಾದಿಸಲಾಗುತ್ತದೆ.

೨. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಣ್ಣದ ಕಲ್ಲಿನ ಅದಿರು ಇರುವುದರಿಂದ, ಈ ಜಿಲ್ಲೆಯಲ್ಲಿ ಹತ್ತಾರು ಸಿಮೆಂಟು ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಇಲ್ಲಿ ಉತ್ಪಾದಿಸಲಾದ ಸಿಮೆಂಟು ರಾಜ್ಯದ, ದೇಶದ ಹಲವಾರು ನಗರಗಳಿಗೆ ಸರಬರಾಜಾಗುತ್ತದೆ.

೩. ರಾಯಚೂರು ಜಿಲ್ಲೆ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಗ್ರಾನೈಟ್ ಕಲ್ಲಿನ ಗಣಿಗಳಿವೆ, ಇದನ್ನು ದೇಶ ವಿದೇಶಗಳಿಗೆ ಕೂಡ ರಪ್ತು ಮಾಡಲಾಗುತ್ತದೆ.

೪. ತುಂಗೆ-ಭದ್ರೆ, ಕೃಷ್ಣೆ (ದೇಶದಲ್ಲಿಯೇ ನಾಲ್ಕನೇಯ ಅತಿದೊಡ್ಡ ನದಿ ಎಂದು ಹೆಸರು ಪಡೆದಿದೆ), ಭೀಮಾ, ಕಾರಂಜಾ, ಉಮರ್ಜಾ, ಕಾಗೀನಾ, ಬಾರಿ, ಬೆಣ್ಣೆತೋರಾ, ಮುಲ್ಲಾಮಾರಿ, ಮಾಂಜ್ರಾ, ಇತ್ಯಾದಿ ಹೀಗೆ ಸಾಕಷ್ಟು ಜಲರಾಶಿಯನ್ನು ಹೊಂದಿದೆ.

೫. ಇತ್ತೀಚೆಗೆ ಯಾದಗೀರ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದಲ್ಲಿ ಯುರೇನಿಯಮ್ ನಿಕ್ಷೇಪ ಪತ್ತೆಯಾಗಿದ್ದು, ಈಗಾಗಲೇ ಗಣಿಗಾರಿಕೆ ಕೆಲಸ ಪ್ರಾರಂಭವಾಗಿದೆ. ಇದು ವಿರಳವಾಗಿ ಸಿಗುವ ಅದಿರು.

೬. ಈ ಭಾಗದ ಭೂಮಿ ಫಲವತ್ತತೆಗೆ ಹೆಸರಾಗಿದೆ. ವಿಶೇಷವಾದ ಬೆಳೆಗಳನ್ನು ಬೆಳೆಯುತ್ತಾರೆ, ಬೀದರ ಜಿಲ್ಲೆಯಲ್ಲಿ ಉದ್ದಿನ ಬೆಳೆ ಹೆಚ್ಚಾಗಿ ಬೆಳೆಯಲಾಗುತ್ತದೆ.

೭. ರಾಜ್ಯದಲ್ಲೇ ಅತೀ ಹೆಚ್ಚು ತೊಗರಿ ಬೆಳೆಯನ್ನು ಬೆಳೆಯುವುದು ಗುಲ್ಬರ್ಗಾ ಜಿಲ್ಲೆಯಲ್ಲಿ.

೮. ಭತ್ತದ ಕಣಜವೆಂದೆ ಪ್ರಸಿದ್ಧಿ ಪಡೆದ ಕೊಪ್ಪಳ ಜಿಲ್ಲೆಯ ಗಂಗಾವತಿ, ರಾಯಚೂರು ಜಿಲ್ಲೆಯ ಸಿಂಧನೂರು, ಮಾನವಿ, ರಾಯಚೂರು ತಾಲ್ಲೂಕುಗಳಲ್ಲಿ ಅತ್ಯುತ್ತಮವಾದ ಭತ್ತವನ್ನು ಬೆಳೆಯಲಾಗುತ್ತದೆ. ಇಲ್ಲಿಯ ಸೋನಾಮಸೂರಿ ಅಕ್ಕಿಯನ್ನು ದೇಶ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

೯. ಕೊಪ್ಪಳ ಜಿಲ್ಲೆಯ ಕುಷ್ಟಗಿ, ರಾಯಚೂರು ಜಿಲ್ಲೆಯ ಸಿಂಧನೂರು, ಲಿಂಗಸೂಗೂರು ತಾಲ್ಲೂಕಿನಲ್ಲಿ ಬೆಳೆಯುವ ದಾಳಿಂಬೆ ಹಣ್ಣು ದೇಶ, ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

೧೦. ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ, ಚಿತ್ತಾಪುರ, ಸೇಡಂ ತಾಲ್ಲೂಕುಗಳಲ್ಲಿ ಹಾಸೂಕಲ್ಲುಗಳ (ಶಾಬಾದ ಬಂಡೆ) ಗಣಿಗಳಿವೆ.

ಶೈಕ್ಷಣಿಕ ಸಮಸ್ಯೆಗಳು:

ಸ್ವಾತಂತ್ರ್ಯಪೂರ್ವದಲ್ಲಿ ಇಡೀ ಹೈದ್ರಾಬಾದ-ಕರ್ನಾಟಕದಲ್ಲಿ ಕೇವಲ ಮೂರೇ ಮೂರು ಹೈಸ್ಕೂಲುಗಳಿದ್ದವು ಮತ್ತು ಶಿಕ್ಷಣವು ಕಡ್ಡಾಯವಾಗಿ ಉರ್ದು ಮಾಧ್ಯಮದಲ್ಲೇ ಪಡೆಯಬೇಕಾಗಿತ್ತು ಎಂದರೆ ಸಮಸ್ಯೆಯ ಗಂಭೀರತೆಯನ್ನು ಅರ್ಥಮಾಡಿಕೊಳ್ಳಬಹುದು. ತೀರ ಇತ್ತೀಚಿನವರೆಗೆ ಅಂದರೆ ೧೯೯೦ ರ ವರೆಗೆ ತಾಲ್ಲೂಕಿಗೆ ಎರಡು-ಮೂರು ಪ್ರೌಢಶಾಲೆಗಳಿದ್ದವು ಮತ್ತು ಇಂದಿನವರೆಗೂ

ಕೂಡ ಎಷ್ಟೋ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ. ಇಂದಿಗೂ ಈ ಭಾಗದ ಬಹಳಷ್ಟು ಶಾಲಾ/ಕಾಲೇಜುಗಳು, ಶಿಕ್ಷಕರ/ಉಪನ್ಯಾಸಕರ ಕೊರತೆಯನ್ನು ಎದುರಿಸುತ್ತಿವೆ. ಉದಾಹರಣೆಗೆ ೨೦೦೯-೧೦ ನೇ ಸಾಲಿನಲ್ಲಿ ೪೦೦೦ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ನಡೆದಿದ್ದು ಅವುಗಳಲ್ಲಿ ೨೫೦೦ ಹುದ್ದೆಗಳು ಹೈದ್ರಾಬಾದ-ಕರ್ನಾಟಕ ವಿಭಾಗದಲ್ಲಿ ಖಾಲಿ ಇದ್ದವು ಎಂಬುದು ಶಿಕ್ಷಕರ ಕೊರತೆ ಎಷ್ಟಿತ್ತು ಎಂದು ತೋರಿಸುತ್ತೆ. ಯಾಕೆಂದರೆ, ೨೦೦೭-೦೮ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ನಡೆದಿದ್ದು, ೨೦೦೮ರಿಂದ ೨೦೧೦ರ ವರೆಗೆ ನಿವೃತ್ತಿ ವಯಸ್ಸು ೬೦ಕ್ಕೆ ಏರಿಸಿರುವದರಿಂದ ಆ ಸಂದರ್ಭದಲ್ಲಿ ಯಾರೊಬ್ಬರು ನಿವೃತ್ತಿಯಾಗಿರಲಿಲ್ಲ ಹಾಗೂ ಹೊಸ ಸರಕಾರ ಬಂದ ಮೇಲೆ ಯಾವೊಂದು ಹೊಸ ಶಾಲೆಗಳನ್ನು ಪ್ರಾರಂಭಿಸಿರಲಿಲ್ಲ. ಹಾಗಾಗಿ ೨೫೦೦ ಹುದ್ದೆಗಳು ಹೇಗೆ ಖಾಲಿ ಇರಲು ಸಾದ್ಯ. ಇದೇ ಪರಸ್ಥಿತಿ ಈ ಭಾಗದ ಉನ್ನತ ಶಿಕ್ಷಣದ್ದಾಗಿದೆ. ಈ ಭಾಗದ ಉನ್ನತ ಶಿಕ್ಷಣಕ್ಕೆ ಆಶಾಕಿರಣವಾಗಿರುವುದು ಗುಲ್ಬರ್ಗಾ ವಿಶ್ವವಿದ್ಯಾಲಯ. ಆದರೆ, ಇಲ್ಲಿ ಸಮಸ್ಯೆಗಳೇ ಮೂಲ. ಕಳೆದ ೧೫ ವರ್ಷಗಳಿಂದ ಈ ವಿಶ್ವವಿದ್ಯಾಲಯದಲ್ಲಿ ನೇಮಕಾತಿಗಳೇ ನಡೆದಿಲ್ಲದಿರುವುದರಿಂದ, ಎಲ್ಲ ೨೬ ವಿಭಾಗಗಳಲ್ಲಿ ಶೇ ೭೫ರಷ್ಟು ಹುದ್ದೆಗಳು ಖಾಲಿ ಇವೆ. ಉದಾಹರಣೆಗೆ ರಸಾಯನಶಾಸ್ತ್ರ ವಿಭಾಗದಲ್ಲಿ ೨೮ ಜನ ಬೋಧಕರಿರಬೇಕಾಗಿತ್ತು ಅಷ್ಟೂ ಜನ ಬೋಧಕರು ಮೊದಲಿನಿಂದಿದ್ದರು. ಆದರೆ ಅವರೆಲ್ಲರೂ ನಿವೃತ್ತಿಯಾಗಿ ಕಳೆದ ಹತ್ತು ವರ್ಷಗಳಿಂದ ಕೇವಲ ೦೬ ಜನ ಬೋಧಕರಿಂದ ಈ ವಿಭಾಗ ನಡೆಯುತ್ತಿದೆ. ಇಂತಹ ವಿಭಾಗದಲ್ಲಿ ಓದಿರುವ ವಿದ್ಯಾರ್ಥಿಗಳು ಎಲ್ಲ ಸೌಲಭ್ಯ ಪಡೆದಿರುವ ವಿಶ್ವವಿದ್ಯಾಲಯದಿಂದ ಪಾಸಾದ ವಿದ್ಯಾರ್ಥಿಗಳ ಜೊತೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ನೌಕರಿ ಪಡೆಯುವುದು ಕನಸಿನ ಮಾತಾಗಿದೆ. ಇದಕ್ಕೆ ಉದಾಹರಣೆ, ೨೦೦೯ರಲ್ಲಿ ರಾಜ್ಯ ಸರಕಾರ, ಸರಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ನೇರ ನೇಮಕಾತಿ ಮಾಡಲಾಗಿತ್ತು. ಅದರಲ್ಲಿ ೯೦ ರಸಾಯನಶಾಸ್ತ್ರ ಉಪನ್ಯಾಸಕರ ಹುದ್ದೆಗಳಿದ್ದು, ಅವುಗಳಲ್ಲಿ ಈ ವಿಶ್ವವಿದ್ಯಾಲಯದಿಂದ ಆಯ್ಕೆಯಾಗಿದ್ದು ಕೇವಲ ೦೩. ಆದರೆ, ಕರ್ನಾಟಕ ಲೋಕಸೇವಾ ಆಯೋಗ, ವೃಂದ ಮತ್ತು ನೇಮಕಾತಿ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯವರ ಕುತಂತ್ರದಿಂದ ಆ ಹುದ್ದೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ನೀಡುವ ರಸಾಯನಶಾಸ್ತ್ರ ಎಂ.ಎಸ್ಸಿ. ಪ್ರಮಾಣ ಪತ್ರಗಳು ವಿದ್ಯಾರ್ಹತೆಗೆ ಅರ್ಹತೆ ಅಲ್ಲ ಎಂದು ತಿರಸ್ಕರಿಸಲಾಯಿತು. ಆದ್ದರಿಂದ ಅವರ್‍ಯಾರಿಗೂ ಆ ಹುದ್ದೆ ದಕ್ಕಲಿಲ್ಲ. ಆ ನೇಮಕಾತಿಯಲ್ಲಿ ವಂಚಿತನಾದವರಲ್ಲಿ ನಾನೂ ಕೂಡ ಒಬ್ಬ.

೨೦೦೬ರಲ್ಲಿ ರಾಜ್ಯದಲ್ಲಿ ೦೯ ಹೊಸ ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲಾಯಿತು, ಹಾಸನ, ಮಂಡ್ಯದಲ್ಲಿ ಪ್ರಾರಂಭವಾದ ಇಂಜಿನಿಯರಿಂಗ್ ಕಾಲೇಜುಗಳು ಉತ್ತಮ ಹೊಸ ಕಟ್ಟದದೊಂದಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಪಡೆದು ಕಾರ್ಯನಿರ್ವಹಿಸುತ್ತದೆ. ಆದರೆ, ರಾಯಚೂರನಲ್ಲಿ ಮಾತ್ರ ಆ ಸರಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭವಾಗಿ ನಾಲ್ಕು ವರ್ಷಗಳು ಗತಿಸಿದರೂ ಇವತ್ತಿಗೂ ಕೂಡ ಒಂದು ಕಟ್ಟಡ ಇಲ್ಲ, ಯಾವುದೋ ಒಂದು ಹಳೆಯದಾದ ಕಾಲೇಜಿನ ಕಟ್ಟಡದಲ್ಲಿ, ಯಾವ ಮೂಲಭೂತ ಸೌಕರ್ಯವಿಲ್ಲದೇ ನಡೆಸಲಾಗುತ್ತಿದೆ. ಈ ರೀತಿ ಶೈಕ್ಷಣಿಕ ಕೇಂದ್ರಗಳ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಇಲ್ಲಿ ಅನಕ್ಷರತೆ ಮಡುಗಟ್ಟಿದೆ.

ನೀರಾವರಿ ಸಮಸ್ಯೆ:

ಹೈದ್ರಾಬಾದ-ಕರ್ನಾಟಕವು ನದಿಗಳ ಬೀಡು ಎಂದರೆ ಅತೀಶಯೋಕ್ತಿಯಾಗಲಾರದು. ಈ ಭಾಗದಲ್ಲಿ ತುಂಗೆ-ಭದ್ರೆ, ಕೃಷ್ಣೆ, ಭೀಮಾ, ಕಾರಂಜಾ, ಉಮರ್ಜಾ, ಕಾಗೀನಾ, ಬಾರಿ, ಬೆಣ್ಣಿತೋರಾ, ಮುಲ್ಲಾಮಾರಿ, ಮಾಂಜ್ರಾ, ಇತ್ಯಾದಿ ನದಿಗಳು ಹರಿಯುತ್ತವೆ.

ತುಂಗಾ-ಭದ್ರಾ ನದಿ: ಈ ನದಿಗೆ ಹೊಸಪೇಟೆ ಹತ್ತಿರ ಒಂದು ಜಲಾಶಯ ನಿರ್ಮಾಣ ಕಾರ್ಯ ೧೯೪೫ರಲ್ಲಿ ನಿಜಾಮರ ಕಾಲದಲ್ಲಿ ಪ್ರಾರಂಭವಾಗಿ ೧೯೫೩ರಲ್ಲಿ ಪೂರ್ಣಗೊಳಿಸಲಾಗಿದೆ, ಜಲಾಶಯದ ಒಟ್ಟು ನೀರಿನ ಸಾಮಾರ್ಥ್ಯ ೧೩೫ ಟಿ.ಎಮ್.ಸಿ. ಅಡಿ ಇದೆ. ಆದರೆ ಒಟ್ಟಾರೆಯಾಗಿ ಮಳೆಗಾಲ ಮತ್ತು ಸೀಜನಲ್ ಆಗಿ ಲಭ್ಯವಿರುವ ನೀರು ೨೩೫ ಟಿ.ಎಮ್.ಸಿ. ಅಡಿ. ಇದನ್ನು ಸಂಪೂರ್ಣವಾಗಿ ಬಳಸಲು ಇಲ್ಲಿಯವರೆಗೂ ಸಾಧ್ಯವಾಗಲಿಲ್ಲ. ಇಲ್ಲಿನ ಜನರ ದುರ್ದೈವವೆಂದರೆ, ಈ ನದಿಗಳಲ್ಲಿ ಹರಿಯುವ ನೀರು ರೈತರ ಹೊಲಗಳಿಗೆ ತಲುಪದೇ ಇರುವದು ನಮ್ಮ ಸರಕಾರಗಳ ನಿರ್ಲಕ್ಷ್ಯ ಎನ್ನಬಹುದು. ಈ ನದಿಗೆ ಎರಡು ನೀರಾವರಿ ಕಾಲುವೆಗಳನ್ನು ನಿರ್ಮಿಸಿದ್ದು, ಒಂದು ತುಂಗಾ - ಭದ್ರ ಬಲದಂಡೆ ಕಾಲುವೆ, ಇದು ಕರ್ನಾಟಕದ ಬಳ್ಳಾರಿ, ಸಿರಗುಪ್ಪ ಮುಖಾಂತರ ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಈ ಕಾಲುವೆಯಿಂದ ಕರ್ನಾಕಟದಲ್ಲಿ ೩,೦೦,೦೦೦ ಲಕ್ಷ ಎಕರೆ ನೀರಾವರಿಗೊಳಪಡಿಸಲಾಗಿದೆ. ಇನ್ನೊಂದು ತುಂಗಾ-ಭದ್ರಾ ಎಡದಂಡೆ ಕಾಲುವೆ, ಇದು ಸಂಪೂರ್ಣವಾಗಿ ಕರ್ನಾಟಕದಲ್ಲೇ ನಿರ್ಮಿಸಲಾಗಿದೆ. ಈ ಕಾಲುವೆಯ ವ್ಯಾಪ್ತಿ ಕೊಪ್ಪಳ ಜಿಲ್ಲೆಯ ಗಂಗಾವತಿ, ರಾಯಚೂರು ಜಿಲ್ಲೆಯ ಸಿಂಧನೂರು, ಲಿಂಗಸೂಗೂರು, ಮಾನವಿ ಮತ್ತು ರಾಯಚೂರು ತಾಲ್ಲೂಕುಗಳ

೬,೦೦,೦೦೦ ಎಕರೆ ಪ್ರದೇಶ ನೀರಾವರಿಗೊಳಪಟ್ಟಿದೆ. ಎಲ್ಲ ಸರಿಯಾಗಿದ್ದರೆ ೬,೦೦,೦೦೦ ಎಕರೆ ಭೂಮಿ ನೀರಾವರಿ ಬೆಳೆಗಳನ್ನು ಬೆಳೆಯಬಹುದಿತ್ತು. ಆದರೆ ಇಂದಿಗೂ ಕೂಡ ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗದ ೨,೦೦,೦೦೦ ಎಕರೆ ರೈತರ ಭೂಮಿಗೆ ನೀರು ತಲುಪಲೇ ಇಲ್ಲ. ಆ ರೈತರು ನೀರಿಗಾಗಿ ಪ್ರತಿ ದಿನ ಹೋರಾಟ ಮಾಡುವ ಪರಿಸ್ಥಿತಿ, ಫಲಿತಾಂಶ ಮಾತ್ರ ಶೂನ್ಯ. ಈ ಕಾಲುವೆ ರೈತರ ಹೊಲಗಳಿಗೆ ಉಪಯೋಗವಾದದ್ದಕ್ಕಿಂತ ಬೆಳೆಗಳನ್ನು ಹಾಳು ಮಾಡಿದ್ದೆ ಹೆಚ್ಚು, ಯಾಕೆಂದರೆ ವರ್ಷದಲ್ಲಿ ಎರಡು–ಮೂರು ಸಲ ಅದು ಖಂಡಿತವಾಗಿ ಒಡೆದು ಹೋಗುತ್ತದೆ.

ಕೃಷ್ಣಾ ನದಿ: ಕೃಷ್ಣಾ ನದಿ ದೇಶದಲ್ಲೇ ನಾಲ್ಕನೇ ಅತಿ ದೊಡ್ಡ ನದಿ ಎಂದು ಪ್ರಸಿದ್ಧಿ ಪಡೆದ ನದಿ. ಇದು ಹೈದ್ರಾಬಾದ ಕರ್ನಾಟಕದಲ್ಲಿ ಹರಿಯುತ್ತದೆ. ಇದಕ್ಕೆ ಆಲಮಟ್ಟಿಯಲ್ಲಿ ಒಂದು ಜಲಾಶಯ ಹಾಗೂ ನಾರಾಯಣಪುರದಲ್ಲಿ ಮತ್ತೊಂದು ಜಲಾಶಯವನ್ನು ನಿರ್ಮಿಸಲಾಗಿದೆ. ಈ ನದಿಯಡಿ ಕೃಷ್ಣಾ 'ಎ' ಮತ್ತು 'ಬಿ' ಸ್ಕೀಮ್‌ನಲ್ಲಿ ನಮಗೆ ಸಿಕ್ಕಿರುವುದು ೧೭೦ ಟಿ.ಎಮ್.ಸಿ. ಅಡಿ ಆದರೆ ನ್ಯಾಯಬದ್ಧವಾಗಿ ನಮಗೆ ದೊರಕಬೇಕಾಗಿದ್ದು ೨೭೦ ಟಿ.ಎಮ್.ಸಿ. ಅಡಿ. ಇದು ಕಾವೇರಿ ನದಿಯ ಕರ್ನಾಟಕದ ಪಾಲಿನ ಒಟ್ಟು ನೀರು ೪೮ ಟಿ.ಎಮ್.ಸಿ. ಅಡಿಗಿಂತ ಎರಡರಷ್ಟು ಕೈತಪ್ಪಿ ಹೋಯಿತು. ಆಲಮಟ್ಟಿ ಜಲಾಶಯದಿಂದ ಇಲ್ಲಿಯವರೆಗೂ ವಿದ್ಯುತ್ ಮಾತ್ರ ಉತ್ಪಾದಿಸಲಾಗುತ್ತಿದೆ. ಇದರಡಿ ನೀರಾವರಿ ಕಾಲುವೆಗಳನ್ನು ನಿರ್ಮಿಸಿದರೆ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಈ ನದಿಗೆ ಇನ್ನೊಂದು ಜಲಾಶಯ ಯಾದಗಿರಿ ಜಿಲ್ಲೆಯ ನಾರಾಯಣಪುರದ ಹತ್ತಿರ ನಿರ್ಮಿಸಲಾಗಿದೆ. ಇದರ ಸಾಮಾರ್ಥ್ಯ ೩೮ ಟಿ.ಎಮ್.ಸಿ. ಅಡಿ. ಈ ಜಲಾಶಯಕ್ಕೆ ಎರಡು ಕಾಲುವೆಗಳನ್ನು ನಿರ್ಮಿಸಲಾಗಿದೆ, ಕೃಷ್ಣ ಬಲದಂಡೆ ಕಾಲುವೆ, ಇದು ರಾಯಚೂರು ಜಿಲ್ಲೆಯ ಲಿಂಗಸೂಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳ ೩,೫೦,೦೦೦ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಬೇಕಾಗಿತ್ತು. ಬಲದಂಡೆ ಕಾಲುವೆ ನಿರ್ಮಿಸುವಲ್ಲಿ ಆಗಿದೆ ಎನ್ನುವ ತುಂಡು ಗುತ್ತಿಗೆ ಅವ್ಯವಹಾರದಿಂದಾಗಿ ಈ ಕಾಲುವೆ ಕಳಪೆ ಮಟ್ಟದ್ದಾಗಿದ್ದು ಯಾವತ್ತೂ ರೈತರ ಭೂಮಿಗೆ ನೀರು ಒದಗಿಸಲಿಲ್ಲ. ಮತ್ತೊಂದು ಕೃಷ್ಣ ಎಡದಂಡೆ ಕಾಲುವೆ, ಇದು ಯಾದಗಿರಿ ಜಿಲ್ಲೆಯ ಸುರಪುರ ಮತ್ತು ಶಹಾಪೂರ ತಾಲ್ಲೂಕುಗಳಿಗೆ ಮತ್ತು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕುಗಳಿಗೆ ನೀರಾವರಿ ಒದಗಿಸುತ್ತಿದೆ. ಈ ಕಾಲುವೆಯ ಪರಿಸ್ಥಿತಿ ಕೂಡ

ಭಿನ್ನವಾಗಿಲ್ಲ. ಕೃಷ್ಣ ಕೊಳ್ಳದಲ್ಲಿ ಲಭ್ಯವಿರುವ ನೀರನ್ನು ಬಳಸಲು ಸರಕಾರಕ್ಕೆ ಇನ್ನೂ ಕೂಡ ಸಾಧ್ಯವಾಗಿಲ್ಲ.

ಇನ್ನೂ ಬಾಕಿ ಉಳಿದಿರುವ ನೀರಾವರಿ ಯೋಜನೆಗಳು ಹಲವಾರು, ಅವುಗಳಲ್ಲಿ ಮುಖ್ಯವಾದವುಗಳೆಂದರೆ ಭೀಮಾ ಬ್ಯಾರೇಜ ನಿರ್ಮಾಣ, ಕಾರಂಜಾ ಏತ ನೀರಾವರಿ ಯೋಜನೆ, ರಾಂಪುರ ಏತನೀರಾವರಿ ಯೋಜನೆ, ನಂದವಾಡಗಿ ಏತ ನೀರಾವರಿ ಯೋಜನೆ, ಕೊಪ್ಪಳದ ಹೀರೆ ಹಳ್ಳ ಯೋಜನೆ ಮುಂತಾದವು ಹಾಗೆ ನೆನೆಗುದಿಗೆ ಬಿದ್ದಿವೆ. ರಾಜ್ಯ ಸರಕಾರಗಳು ಮನಸ್ಸು ಮಾಡಿದರೆ ಈ ಭಾಗದ ಇಂಚಿಂಚು ಭೂಮಿಯನ್ನು ನೀರಾವರಿಗೊಳಪಡಿಸಬಹುದಾದಷ್ಟು ನೀರು ಇಲ್ಲಿ ಲಭ್ಯವಿದೆ.

ಕರ್ನಾಟಕ ಸರಕಾರ ಮತ್ತು ಈ ರಾಜ್ಯದ ಧೀಮಂತ ಹೋರಾಟಗಾರರು ಕಾವೇರಿ ನದಿಯ ಕೇವಲ ೦೫ ಟಿ.ಎಮ್.ಸಿ. ಅಡಿ ನೀರು ತಮಿಳುನಾಡು ಕೇಳಿದರೆ ಬೀದಿಗಿಳಿದು ಹೋರಾಟ ಮಾಡುತ್ತಾರೆ ಮತ್ತೊಬ್ಬರು ವಿಧಾನಸಭೆಯಿಂದ ಕೆ.ಆರ್.ಎಸ್.ವರೆಗೆ (೭೦ ಕೀ.ಮೀ.) ಪಾದಯಾತ್ರೆ ಮಾಡುತ್ತಾರೆ. ಆದರೆ ಅದೇ ರಾಜ್ಯದ ಮತ್ತೊಂದು ನದಿಗೆ ಸಂಬಂಧಿಸಿದಂತೆ ಕೃಷ್ಣ 'ಬಿ' ತೀರ್ಪಿನಲ್ಲಿ ೧೦೦ ಟಿ.ಎಮ್.ಸಿ. ಅಡಿ ನೀರು ನಷ್ಟ ಆದರೆ ಯಾರೊಬ್ಬರು ಮಾತನಾಡುವುದಿಲ್ಲ ಎನ್ನುವುದೇ ನೋವಿನ ಸಂಗತಿ.

ಮೂಲಭೂತ ಸೌಕರ್ಯಗಳ ಸಮಸ್ಯೆ

ಮೂಲಭೂತ ಸೌಕರ್ಯಗಳ ಸಮಸ್ಯೆ ಹೇಳುವುದೇ ಒಂದು ಸಮಸ್ಯೆಯಾಗಿದೆ.

೧. ಸ್ವಾತಂತ್ರ್ಯ ಬಂದು ೬೫ ವರ್ಷಗಳಾದರೂ ಈ ಭಾಗದ ಹಲವಾರು ಗ್ರಾಮಗಳಿಗೆ ಒಂದು ವಾಹನ ಹೋಗುವ ರಸ್ತೆಯಿಲ್ಲ, ಇಂದಿಗೂ ಆ ಗ್ರಾಮಗಳು ಸಾರಿಗೆ ಬಸ್ಸುಗಳನ್ನೇ ನೋಡಿಲ್ಲ.

೨. ಇಲ್ಲಿ ಸರಕಾರಿ ಆಸ್ಪತ್ರೆಗಳಿದ್ದು ಶೇ ೫೦ ರಷ್ಟು ವೈದ್ಯರಿಲ್ಲ. ಶೇ ೪೯.೯೬ರಷ್ಟು ಹೆರಿಗೆಗಳು ಅಸುರಕ್ಷಿತವೆಂದು ವರದಿಯಾಗಿದೆ.

೩. ರಾಜ್ಯ ಸರಕಾರದ ಯೋಜನಾ ಇಲಾಖೆಯ ವರದಿಯಂತೆ ಉಡುಪಿ ಜಿಲ್ಲೆಯಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಇಡೀ ಹೈದ್ರಾಬಾದ – ಕರ್ನಾಟಕದಲ್ಲಿ ಇರುವುದಕ್ಕಿಂತ ಹೆಚ್ಚು.

೪. ಇಂದಿಗೂ ಈ ಭಾಗದಲ್ಲಿ ಸರಕಾರಕ್ಕೆ ಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗಿಲ್ಲ.

೫. ಹೈದ್ರಾಬಾದ – ಕರ್ನಾಟಕದಲ್ಲಿ ಇರುವುದು ಎರಡೇ ಕಾಲ ಒಂದು ಬೇಸಿಗೆ ಇನ್ನೊಂದು ಅತೀ ಬೇಸಿಗೆ ಕಾಲ. ಹೀಗಿರುವಾಗ ರಾಜ್ಯದಲ್ಲಿ ೪೮೦೦ಮೇ.ವ್ಯಾ. ವಿದ್ಯುತ್ ಉತ್ಪಾದಿಸಲಾಗುತ್ತದೆ, ಅದರಲ್ಲಿ ಹೈದ್ರಾಬಾದ – ಕರ್ನಾಟಕದಲ್ಲೇ ೨೩೦೦ ಮೇ.ವ್ಯಾ. ವಿದ್ಯುತ್ ಉತ್ಪಾದಿಸಲಾಗುತ್ತದೆ. ಆದರೆ ಈ ಭಾಗದಲ್ಲಿ ಯಾವಾಗಲೂ ವಿದ್ಯುತ್ ಇರುವುದಿಲ್ಲ ಯಾಕೆ ಎನ್ನುವುದು ತಿಳಿಯದ ವಿಷಯವಾಗಿದೆ.

೬. ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆ ಈ ಭಾಗದಲ್ಲಿ ಇದ್ದು, ಈ ಸಂಸ್ಥೆಯಲ್ಲಿರುವ ವಾಹನಗಳು ಬೆಂಗಳೂರಿನಲ್ಲಿ ಬಳಸಿ ಇದು ರಸ್ತೆಯ ಮೇಲೆ ನಡೆಸಲು ಯೋಗ್ಯವಲ್ಲ ಎಂದು ತಿರಸ್ಕರಿಸಿದ ಬಸ್ಸುಗಳಿಂದ ತುಂಬಿದ್ದು, ಆ ಬಸ್ಸುಗಳು ಯಾವಾಗ ನಿಗಧಿತ ಸ್ಥಳಗಳಿಗೆ ಮುಟ್ಟುತ್ತವೆ ಎನ್ನುವುದೇ ಗೊತ್ತಾಗದ ಸ್ಥಿತಿಗೆ ಪ್ರಯಾಣಿಕರು ಬಂದಿರುತ್ತಾರೆ ಹಾಗೂ ಅವುಗಳ ಪರಿಸ್ಥಿತಿ ಹೀಗಿರುತ್ತೆ ಬಹಳಷ್ಟು ಸಲ ಹೆರಿಗೆಗಳೇ ಬಸ್ಸುಗಳಲ್ಲಾಗುತ್ತವೆ.

೭. ಇಲ್ಲಿನ ಶಾಲಾ ಕಾಲೇಜುಗಳಲ್ಲಿ ಕನಿಷ್ಟ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ಕುಡಿಯುವ ನೀರು, ಬೆಳಕು, ಒಂದು ಗ್ರಂಥಾಲಯ ಇಲ್ಲದಿರುವುದು.

೮. ಅಂಗನವಾಡಿಗಳಿಂದ ಪೂರೈಕೆಯಾಗುವ ಆಹಾರ ಅಪೌಷ್ಠಿಕತೆಯಿಂದ ಕೂಡಿದ್ದು.

೯. ಶಿಕ್ಷಣ ಸಂಸ್ಥೆಗಳ ಸಂಖ್ಯೆ ಬೇರೆ ವಿಭಾಗಗಳಿಗೆ ಹೋಲಿಸಿದರೆ ಇಂದಿಗೂ ಅತೀ ಕಡಿಮೆ ಇರುವುದು.

ನಿರುದ್ಯೋಗ ಸಮಸ್ಯೆ:

ಈ ಭಾಗದ ರೈತರು, ಕೂಲಿಕಾರ್ಮಿಕರು ಹೊಟ್ಟೆಪಾಡಿಗಾಗಿ ತಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬಂತೆ ಸಹಕುಟುಂಬ ಪರಿವಾರ ಸಮೇತ ಮಹಾನಗರಗಳಿಗೆ ಉದ್ಯೋಗವನ್ನರಸಿ ಗೂಳೆ ಹೋಗುವುದು ಸರ್ವೇ ಸಾಮಾನ್ಯವಾಗಿದೆ. ಅದೇ ರೀತಿ ಶೈಕ್ಷಣಿಕ ಕೇಂದ್ರಗಳ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ಇಲ್ಲಿನ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಾಧ್ಯವಾಗದೇ ಸರಕಾರಿ ಹುದ್ದೆಗಳ ನೇಮಕಾತಿಯಲ್ಲಿ ಭಾರೀ ಸಂಖ್ಯೆಯಲ್ಲಿ ವಂಚಿತರಾಗಿ ಸೋತಿರುವುದು ಸ್ಪಷ್ಟ. ಇದರಿಂದಾಗಿ ಈ ಭಾಗದ ಸರಕಾರಿ ಶಾಲಾ–ಕಾಲೇಜುಗಳಲ್ಲಿ, ಸರಕಾರಿ ಕಛೇರಿಗಳಲ್ಲಿ ಜವಾನರಿಂದ ಹಿಡಿದು ಅಧಿಕಾರಿಗಳವರೆಗೂ ಸರಕಾರಿ ನೌಕರರೆಲ್ಲರೂ ರಾಜ್ಯದ ಬೇರೆ ಭಾಗದವರೇ ಆಗಿರುತ್ತಾರೆ. ರಾಜ್ಯ ಸರಕಾರ ನೇಮಕಾತಿ ಮಾಡಿಕೊಳ್ಳುವ ಸರಕಾರಿ ಹುದ್ದೆಗಳ ಅಂಕಿ ಅಂಶಗಳನ್ನು ನೋಡಿದಾಗ ಆಶ್ಚರ್ಯವಾಗುವ ಸಂಗತಿ ಗೋಚರಿಸುತ್ತದೆ.

i. ಇತ್ತೀಚಿನ ವರ್ಷಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ನೇಮಕವಾದ ಪ್ರಾಥಮಿಕ ಶಾಲಾ ಶಿಕ್ಷಕರ ವಿವರಗಳನ್ನು ಗಮನಿಸಿದಾಗ.

ವರ್ಷ	ಖಾಲಿ ಹುದ್ದೆಗಳ ವಿವರ	ನೇಮಕಾತಿ ಮಾಡಿದ ಹುದ್ದೆಗಳ ವಿವರ	ರಾಯಚೂರು ಜಿಲ್ಲೆಯವರೇ ನೇಮಕವಾದವರ	ಶೇಕಡಾವಾರು (%) ಸಂಖ್ಯೆ
೨೦೦೧–೦೨	೭೯೭	೬೮೨	೧೪೨	೨೦.೮
೨೦೦೩–೦೪	೨೦೫	೨೦೫	೭೯	೩೮.೫
೨೦೦೪–೦೫	೨೧೬	೨೧೬	೩೯	೧೮
೨೦೦೫–೦೬	೨೧೦	೨೧೦	೩೭	೧೭.೬
೨೦೦೬–೦೭	೬೯೬	೬೯೬	೧೫೧	೨೧.೬
೨೦೦೭–೦೮	೧೪೬೩	೧೪೬೩	೧೦೪	೭.೧
೨೦೦೯–೧೦	೧೧೫೪	೧೧೫೪	೭೫	೬.೨
ಒಟ್ಟು	೪೭೪೧	೪೬೨೬	೬೨೭	೧೩.೫೫

ii. ಇತ್ತೀಚಿನ ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ನೇಮಕವಾದ ಪ್ರಾಥಮಿಕ ಶಾಲಾ ಶಿಕ್ಷಕರ ವಿವರಗಳನ್ನು ಗಮನಿಸಿದಾಗ.

ವರ್ಷ	ಖಾಲಿ ಹುದ್ದೆಗಳ ವಿವರ	ನೇಮಕಾತಿ ಮಾಡಿದ ಹುದ್ದೆಗಳ ವಿವರ	ಕೊಪ್ಪಳ ಜಿಲ್ಲೆಯವರೇ ನೇಮಕವಾದವರಸಂಖ್ಯೆ	ಶೇಕಡಾವಾರು (%)
೨೦೦೧–೨೦೧೦	೫೦೨ (ಯಲಬುರ್ಗಾ ತಾಲ್ಲೂಕು)	೫೦೨	೧೧೦	೨೧.೯೧
೨೦೦೯–೧೦	೫೪೪	೫೪೪	೯೪	೧೭.೨೭

iii. ಗುಲಬರ್ಗಾ ವಿಭಾಗದಲ್ಲಿ ೨೦೦೨ರಿಂದ ೨೦೦೯ರ ವರೆಗೆ ನೇಮಕಾತಿ ಮಾಡಲಾದ ಒಟ್ಟು ೬೪೪೩ ಪ್ರೌಢ ಶಾಲಾ ಶಿಕ್ಷಕರಲ್ಲಿ ಕೇವಲ ೩೧೭೨ ಮಾತ್ರ

ಹೈದ್ರಾಬಾದ – ಕನಾಟಕದವರು ಉಳಿದವರೆಲ್ಲರೂ ಬೇರೆ ಭಾಗದಿಂದ ಬಂದು ಇಲ್ಲಿ ಆಯ್ಕೆ ಆದವರು.

ವರ್ಷ	ಖಾಲಿ ಹುದ್ದೆಗಳ ವಿವರ	ನೇಮಕಾತಿ ಮಾಡಿದ ಹುದ್ದೆಗಳು	ಹೈದ್ರಾಬಾದ – ಕರ್ನಾಟಕದವರೇ ನೇಮಕವಾದವರ ಸಂಖ್ಯೆ	ಶೇಕಡಾವಾರು(%)
೨೦೦೧-೦೨	ಸ. ಶಿ. & ದೈ.ಶಿ.	೪೫೧	೬೭	೧೪.೮೫
೨೦೦೩-೦೪	"	೧೨೫೯	೪೯೧	೩೮.೯೯
೨೦೦೪-೦೫	"	೬೪೨	೨೭೬	೪೨.೯೯
೨೦೦೫-೦೬	"	೫೪೯	೨೫೬	೪೬.೬೩
೨೦೦೬-೦೭	"	೧೫೨೨	೯೮೪	೬೪.೬೫
೨೦೦೭-೦೮	"	೧೦೪೬	೬೨೬	೫೯.೮೪
೨೦೦೭-೦೮	ವಿಶೇಷ ಶಿಕ್ಷಕರು	೨೦೪	೬೯	೩೩.೮೨
೨೦೦೯-೧೦	ಸ.ಶಿ & ದೈ.ಶಿ.	೭೨೦	೩೭೬	೫೨.೨೨
೨೦೦೯-೧೦	ಸಂಗೀತ ಶಿಕ್ಷಕರು	೫೦	೨೭	೫೪.೦೦
	ಒಟ್ಟು	೬೪೪೩	೩೧೭೨	೪೯.೨೩

ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ಶಿಫಾರಸ್‌ನ್ನು ಅನುಸರಿಸಿದರೆ ಪ್ರೌಢಶಾಲಾ ಸಹ ಶಿಕ್ಷಕರ ವಿಭಾಗ ಮಟ್ಟದ ನೇಮಕಾತಿಗಳಲ್ಲಿ ಕನಿಷ್ಠ ೫೧೫೪ ಹುದ್ದೆಗಳಲ್ಲಿ ಹೈದ್ರಾಬಾದ – ಕರ್ನಾಟಕದ ಅಭ್ಯರ್ಥಿಗಳು ನೇಮಕವಾಗಬೇಕಾಗಿತ್ತು.

iv. ರಾಜ್ಯ ಸರಕಾರ ೧೯೮೭ ರಿಂದ ೧೯೯೯ರವರೆಗೆ ಸರಕಾರಿ ಹುದ್ದೆಗಳಿಗೆ ಮಾಡಿಕೊಂಡಿರುವ ನೇಮಕಾತಿಗಳಲ್ಲಿ ಭಾರಿ ಅನ್ಯಾಯವಾಗಿರುವದು ಅಂಕಿ ಅಂಶಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಈ ಅವಧಿಯಲ್ಲಿ ೨,೨೨,೪೩೬ ಹುದ್ದೆಗಳಿಗೆ ನೇಮಕಾತಿ ನಡೆದಿದ್ದು, ಇದರಲ್ಲಿ ಹೈದ್ರಾಬಾದ – ಕರ್ನಾಟಕದವರು ಆಯ್ಕೆಯಾದವರು ಕೇವಲ ೧೧,೨೧೧ ಮಾತ್ರ. ಆದರೆ ಈ ಭಾಗದ ಜನಸಂಖ್ಯೆಗೆ ಅನುಗುಣವಾಗಿ ೪೨,೬೪೦ ಹುದ್ದೆಗಳಿಗೆ ನೇಮಕವಾಗಬೇಕಾಗಿತ್ತು.

v. ಕರ್ನಾಟಕ ಲೋಕಸೇವಾ ಆಯೋಗ ೨೦೦೧ ರಿಂದ ೨೦೧೦ರ ವರೆಗೆ ನಡೆಸಿರುವ ಗೆಜೆಟೆಡ್, ನಾನ್ ಗೆಜೆಟೆಡ್ ಹುದ್ದೆಗಳ ನೇಮಕಾತಿಗಳಲ್ಲಿಯೂ ಭಾರೀ ಅನ್ಯಾಯವಾಗಿದೆ. ಈ ಅವಧಿಯಲ್ಲಿ ೨೦,೯೧೭ ಹುದ್ದೆಗಳಿಗೆ ನೇಮಕಾತಿ ನಡೆದಿದ್ದು ಅವುಗಳಲ್ಲಿ ಹೈದ್ರಾಬಾದ – ಕರ್ನಾಟಕದವರು ಆಯ್ಕೆಯಾದವರು ಕೇವಲ ೧,೫೮೯ ಮಾತ್ರ. ಆದರೆ ಈ ಭಾಗದ ಜನಸಂಖ್ಯೆಗೆ ಅನುಗುಣವಾಗಿ ೪,೦೦೯ ಹುದ್ದೆಗಳಿಗೆ ನೇಮಕವಾಗಬೇಕಾಗಿತ್ತು.

ಇದರಿಂದ ಈ ಭಾಗದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವದು ಕಳವಳಕಾರಿ ವಿಷಯವಾಗಿದೆ. ಈ ಭಾಗದ ನಿರುದ್ಯೋಗ ಸಮಸ್ಯೆ ನಿವಾರಿಸಲು ಒಂದೇ ಒಂದು ಪರಿಹಾರ ಎಂದರೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡುವ ಮೂಲಕ ಮುಲ್ಕಿ ಕಾನೂನು ಜಾರಿಮಾಡಿ ಸ್ಥಳೀಯ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ವಿಶೇಷ ಮೀಸಲಾತಿ ನೀಡುವ ಅವಶ್ಯಕತೆ ಇರುತ್ತದೆ.

ಹೈದ್ರಾಬಾದ – ಕರ್ನಾಟಕ ಭಾಗವೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಾಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶ ಎಂದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೆ ಪೂರಕವಾಗಿ ಈ ಹಿಂದೆ ಸರಕಾರ ನೇಮಿಸಿದ ಹಲವಾರು ಸಮಿತಿಗಳು ವರದಿ ನೀಡಿವೆ. ೧೯೮೦ರಲ್ಲಿ ಮಾನ್ಯ ಶ್ರೀ ಗುಂಡುರಾವ್ ಅವರ ಸರಕಾರ ನೇಮಿಸಿದ ಶ್ರೀ ಎನ್.ಧರ್ಮಸಿಂಗ್ ಸಮಿತಿಯು ಹೈದ್ರಾಬಾದ – ಕರ್ನಾಟಕ ಪ್ರದೇಶದ ಅಭಿವೃದ್ಧಿಯಲ್ಲಿನ ಅಸಮತೋಲನವನ್ನು ಅಧ್ಯಯನಮಾಡಿ ವರದಿಯನ್ನು ಸಲ್ಲಿಸಿ, ಹೈದ್ರಾಬಾದ – ಕರ್ನಾಟಕ ಎಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿದ್ದು ಇದನ್ನು ತೀವ್ರಗತಿಯಲ್ಲಿ ಅಭಿವೃದ್ಧಿ ಪಡಿಸುವದು ಅವಶ್ಯಕತೆ ಇದೆ ಎಂದು ಶಿಫಾರಸ್ಸು ಮಾಡಿತು. ಇದರ ಜೊತೆಗೆ ಈ ಭಾಗದಲ್ಲಿ ಒಂದು ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕು ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ಈ ಮಂಡಳಿಗೆ ವಿಶೇಷ ಅನುದಾನ ನೀಡಬೇಕು ಎಂದು ಶಿಫಾರಸ್ಸು ಮಾಡಿತು. ೧೯೯೨ರಲ್ಲಿ ಶ್ರೀ ಎನ್.ಧರ್ಮಸಿಂಗ್ ಸಮಿತಿಯ ಶಿಫಾರಸ್ಸಿನಂತೆ ಹೈದ್ರಾಬಾದ – ಕರ್ನಾಟಕ ಅಭಿವೃದ್ಧಿ ಮಂಡಳಿ (HKDB) ಯನ್ನು ಸ್ಥಾಪಿಸಿ, ಗುಲ್ಬರ್ಗಾದಲ್ಲಿ ಕೇಂದ್ರ ಕಚೇರಿ ಮಾಡಲಾಯಿತು. ಈ ಮಂಡಳಿಗೆ ವರ್ಷಕ್ಕೆ ೩೦ ರಿಂದ ೫೦ ಕೋಟಿಯಷ್ಟು ಅನುದಾನ ನೀಡಲಾಯಿತು. HKDB ಈ ೧೯ ವರ್ಷಗಳಲ್ಲಿ ಮಾಡಿರುವ ಕೆಲಸವೆಂದರೆ ಹಳ್ಳಿಗಳಲ್ಲಿ ಅಗಸಿ ಕಟ್ಟೆಗಳನ್ನು ಕಟ್ಟಿ ಗ್ರಾಮೀಣ ಜನರಿಗೆ ಕುಳಿತು ಹರಟೆ ಹೊಡೆಯಲು ಜಾಗ ಕಲ್ಪಿಸಿರುವುದು. ಆದರೆ, ಜನರಿಂದ ತಿರಸ್ಕರಿಸಲ್ಪಟ್ಟ ರಾಜಕಾರಣಿಗಳಿಗೆ ಇದು ಒಂದು ಬಿಳಿ

ಆನೆಯಾಯಿತು. ಇದಕ್ಕೆ ಒಬ್ಬರು ಅಧ್ಯಕ್ಷರು ಅವರಿಗೆ ಒಂದು ಗೂಟದ ಕಾರು, ಹೀಗೆ ಈ ಭಾಗದ ಜನರ ಹಣ ರಾಜಕಾರಣಿಗಳ ಪಾಲಾಯಿತು.

ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿ:

೨೦೦೦ರಲ್ಲಿ ಮಾನ್ಯ ಶ್ರೀ ಎಸ್.ಎಮ್.ಕೃಷ್ಣ ನೇತೃತ್ವದ ಸರಕಾರವು ಇಡೀ ರಾಜ್ಯದ ಹಿಂದುಳಿವಿಕೆಯನ್ನು ಅಧ್ಯಯನ ಮಾಡಲು ನೇಮಿಸಿದ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ರಾಜ್ಯದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಪ್ರಾದೇಶಿಕ ಅಸಮತೋಲನ ಕುರಿತು ಆಳವಾಗಿ ಅಧ್ಯಯನ ಮಾಡಿ ೨೦೦೨ರಲ್ಲಿ ಒಂದು ವರದಿಯನ್ನು ಸಲ್ಲಿಸಿತು. ಡಾ.ಡಿ.ಎಂ.ನಂಜುಂಡಪ್ಪನವರು ಸಲ್ಲಿಸಿರುವ ವರದಿಯಲ್ಲಿ ಹೈದ್ರಾಬಾದ – ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಮೈಸೂರು ಕರ್ನಾಟಕ ಮತ್ತು ಮುಂಬಯಿ ಕರ್ನಾಟಕಕ್ಕೆ ಹೋಲಿಸಿದಾಗ ನೂರು ವರ್ಷದಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ಸಲ್ಲಿಸಿರುವ ವರದಿಯು ರಾಜಕೀಯ ಪಕ್ಷಗಳಿಗೆ ಚುನಾವಣೆ ಸಮಯದಲ್ಲಿ ಹೈದ್ರಾಬಾದ – ಕರ್ನಾಟಕ ಪ್ರದೇಶದ ಜನರಿಗೆ ವಂಚಿಸುವ ಒಂದು ಚುನಾವಣಾ ವಿಷಯವಾಯಿತೇ ವಿನಃ ಆ ವರದಿಯನ್ನು ಸಂಪೂರ್ಣವಾಗಿ ಜಾರಿ ತರುವ ಮನಸ್ಸು ಸುಮಾರು ೨೦೦೨ ರಿಂದ ಇಲ್ಲಿಯವರೆಗೆ ಬಂದ ಯಾವ ಸರಕಾರಗಳು ಮಾಡಲಿಲ್ಲ.

ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ಸಲ್ಲಿಸಿರುವ ವರದಿಯಲ್ಲಿ ರಾಜ್ಯದಲ್ಲಿರುವ ಎಲ್ಲ ೧೭೫ ತಾಲ್ಲೂಕುಗಳನ್ನು ಅಭಿವೃದ್ಧಿ ದೃಷ್ಟಿಯಿಂದ ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ.

೧. ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು,
೨. ಹಿಂದುಳಿದ ತಾಲ್ಲೂಕುಗಳು,
೩. ಅತೀ ಹಿಂದುಳಿದ ತಾಲ್ಲೂಕುಗಳು ಮತ್ತು
೪. ಅತ್ಯಂತ ಹಿಂದುಳಿದ ತಾಲ್ಲೂಕುಗಳು

ಎಂದು ಗುರುತಿಸಲಾಗಿದೆ. ರಾಜ್ಯದಲ್ಲಿ ೬೧ ತಾಲ್ಲೂಕುಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಮತ್ತು ೧೧೪ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು ಎಂದೂ ತಿಳಿಸಿತು. ಆ ೧೧೪ ಹಿಂದುಳಿದ ತಾಲ್ಲೂಕುಗಳಲ್ಲಿ ೩೫ ಹಿಂದುಳಿದ ತಾಲ್ಲೂಕುಗಳು, ೪೦ ಅತೀ ಹಿಂದುಳಿದ ತಾಲ್ಲೂಕುಗಳು ಹಾಗೂ ೩೯ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದು ವಿಶ್ಲೇಷಣೆ ನೀಡಲಾಗಿದೆ.

ಅತ್ಯಂತ ಹಿಂದುಳಿದ ತಾಲ್ಲೂಕುಗಳು ಎಂದರೆ ಆ ತಾಲ್ಲೂಕುಗಳಲ್ಲಿ ಕನಿಷ್ಟ ಮೂಲಭೂತ ಸೌಲಭ್ಯ ದೊರೆಯಲಾರದವು ಎಂದರ್ಥ.

ಹೈದ್ರಾಬಾದ - ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳ ೩೧ ತಾಲ್ಲೂಕುಗಳಲ್ಲಿ ಕೇವಲ ಮೂರು ತಾಲ್ಲೂಕುಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಮತ್ತು ಉಳಿದ ೨೮ ತಾಲ್ಲೂಕುಗಳು ಹಿಂದುಳಿದವು ಎಂದಿದೆ. ಹೈದ್ರಾಬಾದ -ಕರ್ನಾಟಕದ ಶೇಕಡ ೯೧.೧೭ ರಷ್ಟು ತಾಲ್ಲೂಕುಗಳು ಹಿಂದುಳಿದಿವೆ ಎಂದು ಸ್ಪಷ್ಟವಾಗುತ್ತದೆ. ರಾಜ್ಯದ ೩೯ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪೈಕಿ ೨೧ ತಾಲ್ಲೂಕುಗಳು ಹೈದ್ರಾಬಾದ - ಕರ್ನಾಟಕ ಪ್ರದೇಶದಲ್ಲಿವೆ ಎನ್ನುವುದೇ ಅತೀ ಸೋಜಿಗದ ವಿಷಯುವಾಗಿದೆ. ಡಾ.ಡಿ.ಎಂ.ನಂಜುಂಡಪ್ಪನವರ ವರದಿಯು ರಾಜ್ಯದಲ್ಲಿ ವಿಭಾಗವಾರು ಒಟ್ಟಾರೆಯಾಗಿ ಅಭಿವೃದ್ಧಿ ಹೊಂದಿದ (ಯಾವುದೇ ಹಿಂದುಳಿದ ತಾಲ್ಲೂಕುಗಳು ಇಲ್ಲದ) ಮೂರು ಜಿಲ್ಲೆಗಳನ್ನು ಗುರುತಿಸಿದ್ದು, ಆ ಮೂರು ಜಿಲ್ಲೆಗಳು ಮೈಸೂರು ಭಾಗದಲ್ಲಿವೆ. ಅದೇ ರೀತಿ ಒಟ್ಟಾರೆಯಾಗಿ ಅಭಿವೃದ್ಧಿ ಹೊಂದಿರದ (ಯಾವುದೇ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಇಲ್ಲದ) ಮೂರು ಜಿಲ್ಲೆಗಳನ್ನು ಗುರುತಿಸಿದ್ದು, ಆ ಮೂರು ಜಿಲ್ಲೆಗಳು (ಅವಿಭಜಿತ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ) ಹೈದ್ರಾಬಾದ-ಕರ್ನಾಟಕದಲ್ಲಿವೆ ಎಂಬುದು ಈ ಭಾಗದ ಜನರಿಗೆ ಚಿಂತೆಗೀಡುಮಾಡಿದೆ. ಡಾ.ಡಿ.ಎಂ.ನಂಜುಂಡಪ್ಪನವರ ವರದಿಯ ಪ್ರಕಾರ ರಾಜ್ಯದಲ್ಲಿರುವ ಎಲ್ಲ ೧೧೪ ಹಿಂದುಳಿದ ತಾಲ್ಲೂಕುಗಳನ್ನು ವಿಂಗಡಿಸಿದ ಪರಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ರಾಜ್ಯದಲ್ಲಿ ಹಿಂದುಳಿದಿರುವ ೧೧೪ ತಾಲ್ಲೂಕುಗಳ ವರ್ಗೀಕೃತ ವಿಭಾಗವಾರು ಅಂಕಿ ಅಂಶಗಳು ಈ ಮುಂದಿನಂತಿವೆ

ವಿಭಾಗಗಳು	ಅತ್ಯಂತ ಹಿಂದುಳಿದ ತಾಲ್ಲೂಕುಗಳು	ಅತಿ ಹಿಂದುಳಿದ ತಾಲ್ಲೂಕುಗಳು	ಹಿಂದುಳಿದ ತಾಲ್ಲೂಕುಗಳು	ಒಟ್ಟು ಹಿಂದುಳಿದ ತಾಲ್ಲೂಕುಗಳು
ಗುಲ್ಬರ್ಗಾ	೨೧	೦೫	೦೨	೨೮
ಬೆಳಗಾಂ	೦೫	೧೨	೧೪	೩೧
ಬೆಂಗಳೂರು	೧೧	೧೩	೦೯	೩೩
ಮೈಸೂರು	೦೨	೧೦	೩೧	೨೨
ಒಟ್ಟು	೩೯	೪೦	೩೫	೧೧೪

ಈ ಎಲ್ಲ ಕಾರಣಗಳಿಂದಾಗಿ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಹಿಂದುಳಿದವುಗಳೆಂದು ಗುರುತಿಸಲಾದ ೧೧೪ ತಾಲ್ಲೂಕುಗಳಲ್ಲಿರುವ ಅಸಮತೋಲನಗಳಲ್ಲಿನ ಹಿಂಬಾಕಿಗಳನ್ನು ಸರಿದೂಗಿಸುವ ಸಲುವಾಗಿ ಒಟ್ಟು ೩೧,೦೦೦ ಕೋಟಿ ರೂ.ಗಳ ಅಭಿವೃದ್ಧಿ ಯೋಜನೆಗೆ ೨೦೦೩ ರಿಂದ ೨೦೧೧ರ ವರೆಗೆ ಎಂಟು ವರ್ಷಗಳ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚಿಸಿತು. ಇದರಲ್ಲಿ ೧೫,೦೦೦ ಕೋಟಿ ರೂ. ಸರಕಾರದ ವಾರ್ಷಿಕ ಬಜೆಟ್ ಮುಖಾಂತರ ಹಾಗೂ ಇನ್ನುಳಿದ ೧೬,೦೦೦ ಕೋಟಿ ರೂ.ಗಳ ಒಂದು ನಿವ್ವಳ ಹೆಚ್ಚುವರಿ ಬಜೆಟ್ ಒದಗಿಸುವಂತೆ ಶಿಫಾರಸ್ಸು ಮಾಡಿತು.

ಅಂದಿನ ಶ್ರೀ ಎಸ್.ಎಮ್.ಕೃಷ್ಣ ಸರಕಾರ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿ ಜಾರಿಮಾಡುವಲ್ಲಿ ವಿಫಲವಾಯಿತು. ಮುಂದೆ ಶ್ರೀ ಎನ್.ಧರ್ಮಸಿಂಗ್ ಸರಕಾರ ಕೂಡ ಇದನ್ನು ನಿರ್ಲಕ್ಷಿಸಿತು. ೨೦೦೭ ರಲ್ಲಿ ಶ್ರೀ ಎಚ್.ಡಿ.ಕುಮಾರಸ್ವಾಮಿಯವರ ಸರಕಾರ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿಯನ್ನು ಜಾರಿ ಮಾಡಿತು. ಮುಂದೆ ಈ ವರದಿಯನ್ನು ಜಾರಿ ಮಾಡಲು ಶ್ರೀ ಬಿ.ಎಸ್.ಯಡಿಯೂರಪ್ಪ ಸರಕಾರ ಅದಕ್ಕೆ ಒಂದು ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿ ಅನುಷ್ಠಾನ ಸಮಿತಿ ರಚಿಸಿದರು. ಆ ಸಮಿತಿಯು ೪ ವರ್ಷಗಳಲ್ಲಿ ೯,೧೬೧ ಕೋಟಿ ರೂ. ಲಭ್ಯವಿದ್ದ ಅನುದಾನದಲ್ಲಿ ಕೇವಲ ೩,೯೭೭ ಕೋ.ರೂ.ಗಳನ್ನು ಬಳಸಿತು. ಅನುದಾನವನ್ನು ಪರಿಣಾಮಕಾರಿಯಾಗಿ ಬಳಸದೇ ಇರುವುದರಿಂದ ಯಾವುದೇ ಅಭಿವೃದ್ಧಿಕಾರ್ಯಗಳು ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ಇತರೆ ಶಿಫಾರಸ್ಸುಗಳು:

ಸಾರ್ವಜನಿಕ ಸೇವೆಗಳು, ಕ್ರೀಡೆ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿನ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಪ್ರದೇಶಗಳ ನಡುವೆ ಅತ್ಯಧಿಕ ಅಸಮತೆ ಇರುವುದರಿಂದ ಸಮಿತಿಯು ಅಂತಹ ಅಸಮತೋಲನಗಳನ್ನು ಪರಿಹರಿಸಲು ಈ ಕೆಳಗಿನ ಶಿಫಾರಸ್ಸು ಮಾಡಿದೆ.

೧. ವಿವಿಧ ಸಾರ್ವಜನಿಕ ಉದ್ಯಮಗಳು/ನಿಗಮ ಮಂಡಳಿಗಳು, ಕರ್ನಾಟಕ ಲೋಕಸೇವಾ ಆಯೋಗ, ರಾಜ್ಯ ಯೋಜನಾ ಮಂಡಳಿ, ವಿಶ್ವವಿದ್ಯಾಲಯಗಳ ಉಪಕುಲಪತಿಗಳು, ಸರಕಾರವು ಕಾಲಕಾಲಕ್ಕೆ ರಚಿಸುವ ವಿವಿಧ ಆಯೋಗಗಳು, ಸಮಿತಿಗಳು, ಕಾರ್ಯಪಡೆಗಳಲ್ಲಿನ ನೇಮಕಾತಿಗಳಲ್ಲಿ ಉತ್ತರ ಕರ್ನಾಟಕಕ್ಕೆ ಶೇ ೫೦ರಷ್ಟು ಪ್ರಾತಿನಿಧ್ಯ ಕೊಡಬೇಕೆಂದು ಶಿಫಾರಸ್ಸು ಮಾಡಿದೆ.

೨. ರಾಜ್ಯ ಸರಕಾರದ ಸಚಿವ ಸಂಪುಟದಲ್ಲೂ ಉತ್ತರ ಕರ್ನಾಟಕಕ್ಕೆ ಶೇ ೫೦ರಷ್ಟು ಪ್ರಾತಿನಿಧ್ಯ ನೀಡಬೇಕು.

೩. ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಗಳಲ್ಲಿ ಮತ್ತು ಕುಶಲಕರ್ಮಿಗಳಿಗೆ ನೀಡುವಲ್ಲಿ ಮತ್ತು ಮಾಸಿಕ ಗೌರವಧನ ನೀಡುವಲ್ಲಿ ಶೇ ೫೦ ರಷ್ಟು ಮೀಸಲಾತಿ ನೀಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿದೆ.

೪. 'ಸಿ' ಗ್ರೂಪಿನ ಕೆಲವು ವರ್ಗಗಳಲ್ಲಿ (ಎಂದರೆ ಎರಡನೆ ದರ್ಜೆ ಸಹಾಯಕರು, ಮೊದಲನೆ ದರ್ಜೆ ಸಹಾಯಕರು, ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಇತರೆ ಇಲಾಖೆಗಳಲ್ಲಿನ ಅದಕ್ಕೆ ಸಮನಾದ ಹುದ್ದೆಗಳ) ಶೇ ೮೦ರಷ್ಟು ಮೀಸಲಾತಿ ಮತ್ತು ಪ್ರತಿ ಜಿಲ್ಲೆಯಲ್ಲಿ ಆಯಾ ಸ್ಥಳಗಳಿಗೆ 'ಡಿ' ಗ್ರೂಪಿನಲ್ಲಿ ಶೇ ೧೦೦ರಷ್ಟು ಹುದ್ದೆಗಳಲ್ಲಿ ಮೀಸಲಾತಿ ನೀಡಬೇಕೆಂದು ಸಮಿತಿ ಶಿಫಾರಸ್ಸು ಮಾಡಿದೆ. ಅದೆ ರೀತಿ 'ಸಿ' ಗ್ರೂಪಿನ ಹೈಯರ್ ಕೇಡರುಗಳಾದ ಪ್ರೌಢಶಾಲಾ ಶಿಕ್ಷಕರು, ಮೋಟಾರು ವಾಹನಗಳ ಇನ್ಸ್‌ಪೆಕ್ಟರುಗಳು, ವಾಣಿಜ್ಯ ತೆರಿಗೆ ಇನ್ಸ್‌ಪೆಕ್ಟರುಗಳು, ಸಬ್‌ರಿಜಿಸ್ಟ್ರಾರಗಳು ಮುಂತಾದ ಹುದ್ದೆಗಳ ನೇಮಕಾತಿಯಲ್ಲಿ ಶೇ ೭೦ರಷ್ಟು ಮೀಸಲಾತಿಯನ್ನು ವಿಭಾಗಮಟ್ಟದಲ್ಲಿ ಸೇರಿದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲು ಸಮಿತಿಯು ಸೂಚಿಸಿತು. 'ಬಿ' ಗ್ರೂಪ್ ಹುದ್ದೆಗಳನ್ನು ವಿಭಾಗ ಮಟ್ಟದಲ್ಲಿ ಶೇ ೬೦ರಷ್ಟು ಮೀಸಲಿಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತ, ಈ ಮೀಸಲಾತಿಯನ್ನು **ಜಾರಿಗೆ ತರಲು ಆಂಧ್ರಪ್ರದೇಶದಲ್ಲಿ ಮಾಡಿದಂತೆ ಸಂವಿಧಾನದ ೩೭೧ನೇ ಅನುಚ್ಛೇದಕ್ಕೆ ತಿದ್ದುಪಡಿ ತರಬೇಕೆಂದು ಶಿಫಾರಸ್ಸು ಮಾಡಿದೆ.**

ಆದರೆ ಸರಕಾರ ಒಂದು ಕಡೆ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ನೀಡಿದ ವರದಿಯನ್ನು ಜಾರಿಗೊಳಿಸಿದೆ ಎನ್ನುತ್ತದೆ, ಅದರಲ್ಲಿ ಈ ಮೇಲಿನ ಶಿಫಾರಸ್ಸುಗಳನ್ನು ಮುಚ್ಚಿಟ್ಟು ಈ ಭಾಗದ ಜನರಿಗೆ ಮೋಸ ಮಾಡಿದೆ.

ಹೈದ್ರಾಬಾದ - ಕರ್ನಾಟಕದ ಈ ಎಲ್ಲ ಸಮಸ್ಯೆಗಳಿಗೆ ಏಕೈಕ ಪರಿಹಾರವನ್ನು ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ವರದಿ ನೀಡುವುದಕ್ಕಿಂತ ಮೊದಲೇ ಈ ಭಾಗದ ಹಿರಿಯ ರಾಜಕಾರಿಣಿ ಮಾಜಿ ಸಚಿವರಾದ ಶ್ರೀ ವೈಜನಾಥ ಪಾಟೀಲ ಇವರು ೧೯೯೭ರಲ್ಲೇ ವಿಧಾನ ಸಭೆಯಲ್ಲಿ ಈ ಕುರಿತು ಸದನದ ಗಮನ ಸೆಳೆದಿದ್ದರು. ಮಾನ್ಯಶ್ರೀ ವೈಜನಾಥ ಪಾಟೀಲರು ಇದಕ್ಕಾಗಿ ತಾವು ಸಚಿವರಾಗಿದ್ದಾಗಲೇ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಿಗೆ ಭೇಟಿಕೊಟ್ಟು ಅಧ್ಯಯನ ಮಾಡಿ, ತೆಲಂಗಾಣ ಮತ್ತು ಮರಾಠವಾಡಾ ಪ್ರಾಂತ್ಯಗಳಿಗೆ ನೀಡಲಾದ ಸಂವಿಧಾನದ ೩೭೧ನೇ ಕಲಂ ಅಡಿಯ ಮೀಸಲಾತಿ

ಹೈದ್ರಾಬಾದ ಕರ್ನಾಟಕಕ್ಕೂ ಅನ್ವಯಿಸುತ್ತದೆ ಹಾಗಾಗಿ ಸಂವಿಧಾನದ ೩೭೧ನೇ ಅನುಚ್ಛೇಧಕ್ಕೆ ತಿದ್ದುಪಡಿ ತರಬೇಕೆಂದು ಒತ್ತಾಯ ಮಾಡಿದರು. ಇದನ್ನೆ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಸ್ಪಷ್ಟವಾಗಿ ಶಿಫಾರಸ್ಸು ಮಾಡಿದೆ.

ಸಂವಿಧಾನದ ೩೭೧ ನೇ ಕಲಂ: ಸಂವಿಧಾನ ರಚನಾ ಸಂದರ್ಭದಲ್ಲಿ "ಯಾವುದೇ ರಾಜ್ಯದಲ್ಲಿ ಒಂದು ಪ್ರದೇಶ ಸಮೃದ್ಧವಾಗಿದ್ದು, ಮತ್ತೊಂದು ತೀರ ಹಿಂದುಳಿದು ಅಲ್ಲಿನ ಜನ ಹತ್ತು ಹಲವು ಸೌಲಭ್ಯಗಳಿಂದ ವಂಚಿತವಾಗಬಾರದು ಎಂಬ ಉದ್ದೇಶದಿಂದ ಅತೀಯಾದ ಅಸಮಾನತೆ ನಿವಾರಣೆಗೆ ವಿಶೇಷ ಸವಲತ್ತು ನೀಡಲು ಸಂವಿಧಾನದ ೩೭೧ ನೇ ಕಲಂನ ಅಡಿಯಲ್ಲಿ ಅವಕಾಶ ನೀಡಲಾಗಿದೆ.

ಈ ದೇಶದ ಯಾವುದೇ ಒಂದು ಪ್ರದೇಶವನ್ನು ೩೭೧ ನೇ ಕಲಂನಡಿ ಸೇರಿಸಿದಾಗ ಆ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಲ್ಲಿ ಯಾವುದೇ ವಿಶೇಷ ಕಾನೂನು, ಸವಲತ್ತು, ಅನುದಾನ ನೀಡಿದರೆ, ಅದನ್ನು ಈ ದೇಶದ ಯಾವುದೇ ನ್ಯಾಯಾಲಯದಲ್ಲಿ (ಸರ್ವೋಚ್ಚ ನ್ಯಾಯಾಲಯ ಹೊರತುಪಡಿಸಿ) ಪ್ರಶ್ನಿಸಲು ಬರುವದಿಲ್ಲ. ಭಾರತದಲ್ಲಿ ಈಗಾಗಲೇ ೩೭೧ನೇ ಕಲಂನ್ನು ಗುಜರಾತ, ಮಹಾರಾಷ್ಟ್ರ, ೧೯೭೩ ರಲ್ಲಿ ಇಡೀ ಆಂದ್ರಪ್ರದೇಶಕ್ಕೆ (ಮೊದಲು ತೆಲಂಗಾಣಕ್ಕೆ ಮಾತ್ರ ನೀಡಲಾಗಿತ್ತು), ಗೋವಾ, ಅಸ್ಸಾಂ, ಮೀಜೊರಾಂ, ನಾಗಾಲ್ಯಾಂಡ, ಸಿಕ್ಕಂ, ಅರುಣಾಚಲ ಪ್ರದೇಶ ಇತ್ಯಾದಿ ರಾಜ್ಯಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ನೀಡಲಾಗಿದೆ. ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಲಂಗಾಣ ಮಾದರಿಯಲ್ಲಿ ೩೭೧ ನೇ ಕಲಂ ತಿದ್ದುಪಡಿ ಮಾಡಬೇಕೆಂದು ಹೇಳಿದೆ.

ಸಂವಿಧಾನದ ೩೭೧ನೇ ಕಲಂನ್ನು ಎರಡು ಉಪಬಂಧಗಳಾಗಿ ವಿಂಗಡಿಸಲಾಗಿದೆ. (೧) ೩೭೧ನೇ ಕಲಂ ಉಪಬಂಧ(೧) ಹಾಗೂ (೨) ೩೭೧ನೇ ಕಲಂ ಉಪಬಂಧ(೨).

ಸಂವಿಧಾನದ ೩೭೧ನೇ ಕಲಂ ತೆಲಂಗಾಣಕ್ಕೆ: ೧೯೫೭ ರಲ್ಲಿ ಪ್ರಥಮ ಬಾರಿಗೆ ಸಂವಿಧಾನದ ೩೭೧ನೇ ಕಲಂ ಗೆ ಉಪಬಂಧ (೧)ನ್ನು ಸೇರಿಸಿ ತೆಲಂಗಾಣವನ್ನು ಈ ಉಪಬಂಧದಲ್ಲಿ ಸೇರಿಸಲಾಯಿತು. ಈ ಉಪಬಂಧದಲ್ಲಿ ತೆಲಂಗಾಣದಲ್ಲಿ ಭೌತಿಕ ಅಭಿವೃದ್ಧಿಯನ್ನು ತೀವ್ರಗೊಳಿಸಬೇಕು ಹಾಗೂ ಸರಕಾರಿ ಉದ್ಯೋಗಗಳಲ್ಲಿ ಮತ್ತು ಉನ್ನತ ವ್ಯಾಸಂಗಗಳಲ್ಲಿ ಸ್ಥಳೀಯರಿಗೆ ಮೀಸಲಾತಿಯನ್ನು 'ಮುಲ್ಕಿ ಕಾನೂನಿನ' ಮುಂದುವರಿಕೆ ರೂಪದಲ್ಲಿ ನೀಡಬೇಕು ಎಂದು ಆದೇಶಿಸಲಾಯಿತು.

ಇದನ್ನು ಪ್ರಶ್ನಿಸಿ ಆಂಧ್ರಪ್ರದೇಶದ ರೆಡ್ಡಿಯವರು ೧೯೬೧ ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದರು. ಆದರೆ ಸುಪ್ರೀಂ ಕೋರ್ಟ್ ಮುಲ್ಕಿ ಕಾನೂನು ಮುಂದುವರೆಸುವುದು ಆ ಪ್ರದೇಶದ ಜನರ ಹಕ್ಕು, ಸಂವಿಧಾನದ ಕಲಂ ೩೫(ಬ) ಹಾಗೂ ಕಲಂ ೩೭೨ ನ್ನು ಉಲ್ಲೇಖಿಸಿ, ಮುಲ್ಕಿ ಕಾನೂನು ಮುಂದುವರೆಸಿರುವುದನ್ನು ಮಾನ್ಯ ಮಾಡಿ ಆದೇಶ ನೀಡಿತು.

ಸಂವಿಧಾನದ ೩೭೧ನೇ ಕಲಂ ಮಹಾರಾಷ್ಟ್ರ ಮತ್ತು ಗುಜರಾತ ರಾಜ್ಯಕ್ಕೆ: ೧೯೬೦ ರಲ್ಲಿ ಸಂವಿಧಾನದ ೩೭೧ನೇ ಕಲಂ ಗೆ ಉಪಬಂಧ (೨)ನ್ನು ಸೇರಿಸಿ ಮಹಾರಾಷ್ಟ್ರದ ವಿದರ್ಭ, ಮರಾಠವಾಡಾ, ಗುಜರಾತ್‌ನ ಕಛ್, ಸೌರಾಷ್ಟ್ರ ಪ್ರದೇಶಗಳನ್ನು ಈ ಉಪಬಂಧದಲ್ಲಿ ಸೇರಿಸಲಾಯಿತು. ಇದರಡಿಯಲ್ಲಿ ಈ ಪ್ರದೇಶಗಳಿಗೆ ಪ್ರತ್ಯೇಕ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲು ಹಾಗೂ ಸರಕಾರಿ ಉದ್ಯೋಗಗಳಲ್ಲಿ ಮತ್ತು ಉನ್ನತ ವ್ಯಾಸಂಗಗಳಲ್ಲಿ ಜನಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ನೀಡಬೇಕು ಎಂದು ಆದೇಶಿಸಲಾಯಿತು.

ಮಹಾರಾಷ್ಟ್ರದಲ್ಲಿ ಮೂರು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಯಿತು. ಒಂದು ವಿಧರ್ಭ ಅಭಿವೃದ್ಧಿ ಮಂಡಳಿ, ಎರಡನೆಯದು ಮರಾಠಾವಾಡಾ ಅಭಿವೃದ್ಧಿ ಮಂಡಳಿ ಹಾಗೂ ಮೂರನೆಯದು ಉಳಿದ ಮಹಾರಾಷ್ಟ್ರ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪನೆ ಮಾಡಲಾಯಿತು, ಆದರೆ ಮೀಸಲಾತಿಯನ್ನು ನೀಡಲು ಮಹಾರಾಷ್ಟ್ರ ರಾಜ್ಯಪಾಲರು ೧೯೯೪ರಲ್ಲಿ ಆದೇಶ ನೀಡಿದರು. ಅಲ್ಲಿನ ರಾಜ್ಯ ಸರಕಾರ ಏಪ್ರಿಲ್‌ನಲ್ಲಿ ಅಧಿಸೂಚನೆ ಹೊರಡಿಸಿ ಇಂಜನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ೧೯೯೭-೯೮ನೇ ಸಾಲಿನಿಂದ ಜಾರಿಯಾಗುವಂತೆ ಮೀಸಲಾತಿಯನ್ನು ನಿಗದಿಪಡಿಸಿದರು. ಇದನ್ನು ಪ್ರಶ್ನಿಸಿ ಮುಂಬಯಿ ಪ್ರಾಂತ್ಯದವರು ಸಂವಿಧಾನದ ಕಲಂ ೧೪ ರ ಉಲ್ಲಂಘನೆಯಾಗಿದೆ ಎಂದು ಮುಂಬಯಿ ಹೈಕೋರ್ಟ್ ಮೆಟ್ಟಿಲೇರಿದರು. ಆಗಸ್ಟ್ ೧೯೯೭ ರಂದು ಮುಂಬಯಿ ಹೈಕೋರ್ಟ್ ಆ ಮೀಸಲಾತಿ ಅಸಿಂಧು ಎಂದು ತೀರ್ಪು ನೀಡಿತು. ಡಿಸೆಂಬರ್ ೧೯೯೭ ರಲ್ಲಿ ಮಹಾರಾಷ್ಟ್ರ ಸರಕಾರ ಮುಂಬಯಿ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತು. ಆ ಮೇಲ್ಮನವಿ ಇವತ್ತಿಗೂ ವಿಚಾರಣೆಗೆ ಬರದೇ ಹಾಗೆ ಉಳಿದಿದೆ.

೧. ಸಂವಿಧಾನದ ೩೭೧ನೇ ಅನುಚ್ಛೇಧ (೧)ನೇ ಉಪಖಂಡ್ 'ಎ' ಕಲಂ ನಾಗಾಲ್ಯಾಂಡ್ ರಾಜ್ಯಕ್ಕೆ: ೧೯೬೨ ರಲ್ಲಿ ನಾಗಾಲ್ಯಾಂಡ್ ರಾಜ್ಯಕ್ಕೆ ಆ ರಾಜ್ಯದ ಜನರ ಸಂಸ್ಕೃತಿ, ಧಾರ್ಮಿಕ ಆಚರಣೆ, ಪದ್ಧತಿಯನ್ನು ಉಳಿಸುವ ದೃಷ್ಟಿಯಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧)ಕ್ಕೆ ತಿದ್ದುಪಡಿ ತಂದು

'೩೭೧ನೇ ಅನುಚ್ಛೇಧ (೧)ನೇ ಉಪಖಂಡ್ ಎ'ಗೆ ನಾಗಾಲ್ಯಾಂಡ್ ರಾಜ್ಯವನ್ನು ಸೇರಿಸಲಾಯಿತು.

೨. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ನೇ ಉಪಖಂಡ್ 'ಬಿ' ಅಸ್ಸಾಂ ರಾಜ್ಯಕ್ಕೆ: ೧೯೬೨ ರಲ್ಲಿ ಅಸ್ಸಾಂ ರಾಜ್ಯಕ್ಕೆ ಆ ರಾಜ್ಯದ ಜನರ ಸಂಸ್ಕೃತಿ, ಧಾರ್ಮಿಕ ಆಚರಣೆ, ಪದ್ಧತಿಯನ್ನು ಉಳಿಸುವ ದೃಷ್ಟಿಯಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧)ಕ್ಕೆ ತಿದ್ದುಪಡಿ ತಂದು '೩೭೧ನೇ ಅನುಚ್ಛೇಧ (೧)ನೇ ಉಪಖಂಡ್ ಎ'ಗೆ ಅಸ್ಸಾಂ ರಾಜ್ಯವನ್ನು ಸೇರಿಸಲಾಯಿತು.

೩. ಸಂವಿಧಾನದ ೩೭೧ನೇ ಅನುಚ್ಛೇಧ (೧)ಉಪಖಂಡ್ 'ಸಿ' ಉಪಬಂಧ ಮಣಿಪುರ ರಾಜ್ಯಕ್ಕೆ: ೧೯೬೨ ರಲ್ಲಿ ಮಣಿಪುರ ರಾಜ್ಯಕ್ಕೆ ಆ ರಾಜ್ಯದ ಜನರ ಸಂಸ್ಕೃತಿ, ಧಾರ್ಮಿಕ ಆಚರಣೆ, ಪದ್ಧತಿಯನ್ನು ಉಳಿಸುವ ದೃಷ್ಟಿಯಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧)ಕ್ಕೆ ತಿದ್ದುಪಡಿ ತಂದು ೩೭೧ನೇ ಅನುಚ್ಛೇಧ (೧) ಉಪಖಂಡ್ 'ಸಿ' ಗೆ ಮಣಿಪುರ ರಾಜ್ಯವನ್ನು ಸೇರಿಸಲಾಯಿತು.

೪. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ (೧) ನೇ ಉಪಖಂಡ್ 'ಡಿ' ಆಂಧ್ರಪ್ರದೇಶ ರಾಜ್ಯಕ್ಕೆ: ಸೀಮಾಂಧ್ರ ಮತ್ತು ಕೋಸ್ಟಲ್ ಆಂಧ್ರದ ಜನರು ತೆಲಂಗಾಣಕ್ಕೆ ನೀಡಿದ ವಿಶೇಷ ಸವಲತ್ತು ನಮಗೂ ನೀಡಬೇಕೆಂದು ೧೯೬೯ ರಲ್ಲಿ ದೀರ್ಘವಾದ, ಉಗ್ರಸ್ವರೂಪದ ಹೋರಾಟ ಮಾಡಿದರು. ಈ ಹೋರಾಟದ ತೀವ್ರತೆ ಅರಿತ ಕೇಂದ್ರ ಸರಕಾರ ೧೯೭೩ ರಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ (೧) ಕ್ಕೆ ತಿದ್ದುಪಡಿ ಮಾಡಿ ಸಂವಿಧಾನದ ೩೭೧ನೇ ಅನುಚ್ಛೇಧ (೧) ಉಪಖಂಡ 'ಡಿ' ಆಂಧ್ರಪ್ರದೇಶ ರಾಜ್ಯವನ್ನು ಸೇರಿಸಿ ತೆಲಂಗಾಣದ ಸವಲತ್ತನ್ನು ಇಡೀ ಆಂಧ್ರಪ್ರದೇಶ ರಾಜ್ಯಕ್ಕೆ ವಿಸ್ತರಿಸಿದರು.

೫. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ನೇ ಉಪಖಂಡ್ 'ಇ' ಆಂದ್ರಪ್ರದೇಶ ರಾಜ್ಯಕ್ಕೆ: ತೆಲಂಗಾಣ ಭಾಗದ ಜನರ ಭಾವನೆಗಳನ್ನು ಗಮನದಲ್ಲಿಟ್ಟು ಕೇಂದ್ರ ಸರಕಾರ ೧೯೭೩ ರಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ (೧) ಕ್ಕೆ ತಿದ್ದುಪಡಿ ಮಾಡಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ಉಪಖಂಡ 'ಇ' ಉಪಬಂಧಗಳಡಿಯಲ್ಲಿ ತೆಲಂಗಾಣ ಪ್ರದೇಶದಲ್ಲಿ ಒಂದು ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲು ಅವಕಾಶ ಮಾಡಿಕೊಟ್ಟಿತು.

೬. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ (೧) ನೇ ಉಪಖಂಡ್ 'ಎಫ್' ಸಿಕ್ಕಿಂ ರಾಜ್ಯಕ್ಕೆ: ೧೯೭೫ ರಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ಕ್ಕೆ ತಿದ್ದುಪಡಿ ಮಾಡಿ ಸಿಕ್ಕಿಂ ಪ್ರದೇಶಕ್ಕೆ ರಾಜ್ಯದ ಸ್ಥಾನಮಾನ ನೀಡಲು ಸಿಕ್ಕಿಂ

ರಾಜ್ಯವನ್ನು ಸಂವಿಧಾನದ ೩೭೧ನೇ ಅನುಚ್ಛೇಧ (೧) ಉಪಖಂಡ 'ಎಫ್' ಉಪಬಂಧದಲ್ಲಿ ಸೇರಿಸಲಾಯಿತು. ಸಿಕ್ಕಿಂ ಪ್ರದೇಶದಲ್ಲಿ ೧೯೭೪ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಎಲ್ಲ ೩೨ ಸದಸ್ಯರ ವಿಧಾನ ಸಭಾ ಕ್ಷೇತ್ರವನ್ನು ಒಂದು ರಾಜ್ಯದ ಸ್ಥಾನಮಾನ ನೀಡಲು ಘೋಷಿಸಲಾಯಿತು.

೭. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ನೇ ಉಪಖಂಡ್ 'ಜಿ' ಮೀಜೊರಾಂ ರಾಜ್ಯಕ್ಕೆ: ೩೦ನೇ ಜೂನ್ ೧೯೮೬ ರಲ್ಲಿ ಮಿಜೋರಾಂ ರಾಜ್ಯಕ್ಕೆ ಆ ರಾಜ್ಯದ ಜನರ ಸಂಸ್ಕೃತಿ, ಧಾರ್ಮಿಕ ಆಚರಣೆ, ಪದ್ದತಿಯನ್ನು ಉಳಿಸುವ ದೃಷ್ಟಿಯಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ಕ್ಕೆ ತಿದ್ದುಪಡಿ ತಂದು ಸಂವಿಧಾನದ ೩೭೧ನೇ ಅನುಚ್ಛೇಧ (೧) ಉಪಖಂಡ 'ಜಿ' ಉಪಬಂಧದಲ್ಲಿ ಮಿಜೋರಾಂ ರಾಜ್ಯವನ್ನು ಸೇರಿಸಿತು.

೮. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ನೇ ಉಪಖಂಡ್ 'ಎಚ್' ಅರುಣಾಚಲ ಪ್ರದೇಶ ರಾಜ್ಯಕ್ಕೆ: ೧೯೮೬ ರಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ಕ್ಕೆ ತಿದ್ದುಪಡಿ ಮಾಡಿ ಅರುಣಾಚಲ ಪ್ರದೇಶಕ್ಕೆ ರಾಜ್ಯದ ಸ್ಥಾನಮಾನ ನೀಡಲು ಅರುಣಾಚಲ ಪ್ರದೇಶ ರಾಜ್ಯವನ್ನು ಸಂವಿಧಾನದ ೩೭೧ನೇ ಅನುಚ್ಛೇಧ (೧) ಉಪಖಂಡ 'ಎಚ್'ಉಪಬಂಧದಲ್ಲಿ ಸೇರಿಸಲಾಯಿತು. ಅರುಣಾಚಲ ಪ್ರದೇಶದಲ್ಲಿ ೧೯೭೪ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಎಲ್ಲಾ ೩೦ ಸದಸ್ಯರ ವಿಧಾನ ಸಭಾ ಕ್ಷೇತ್ರವನ್ನು ಒಂದು ರಾಜ್ಯದ ಸ್ಥಾನಮಾನ ನೀಡಲು ಘೋಷಿಸಲಾಯಿತು.

೯. ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ನೇ ಉಪಖಂಡ್ 'ಐ' ಗೋವಾ ರಾಜ್ಯಕ್ಕೆ: ೧೯೮೭ ರಲ್ಲಿ ಸಂವಿಧಾನದ ೩೭೧ನೇ ಅನುಚ್ಛೇಧ ಉಪಬಂಧ(೧) ಕ್ಕೆ ತಿದ್ದುಪಡಿ ಮಾಡಿ ಗೋವಾ ರಾಜ್ಯದ ಸ್ಥಾನಮಾನ ನೀಡಲು ಗೋವಾ ರಾಜ್ಯವನ್ನು ಸಂವಿಧಾನದ ೩೭೧ನೇ ಅನುಚ್ಛೇಧ (೧) ಉಪಖಂಡ 'ಎಚ್' ಉಪಬಂಧದಲ್ಲಿ ಸೇರಿಸಲಾಯಿತು. ಸಂವಿಧಾನದಲ್ಲಿ ಏನೇ ಹೇಳಿದರೂ ಗೋವಾ ರಾಜ್ಯದಲ್ಲಿ ಕನಿಷ್ಟ ೩೦ ವಿಧಾನ ಸಭಾ ಸದಸ್ಯರನ್ನು ಒಳಗೊಂಡಿರುವ ರಾಜ್ಯದ ಸ್ಥಾನಮಾನ ನೀಡಲು ಘೋಷಿಸಲಾಯಿತು.

ಹೀಗೆ ದೇಶದ ಹತ್ತು ರಾಜ್ಯಗಳಿಗಾಗಿ ಈಗಾಗಲೇ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಲಾಗಿದ್ದು, ಹೈದ್ರಾಬಾದ – ಕರ್ನಾಟಕ ಪ್ರದೇಶಕ್ಕಾಗಿ ಒಂದು ಸಲ ತಿದ್ದುಪಡಿ ತಂದು ಈ ಪ್ರದೇಶದ ಸರ್ವಾಂಗೀಣ ಅಭಿವೃದ್ದಿಗೆ

ಸಹಕರಿಸುವದು ಅವಶ್ಯವಾಗಿದೆ. ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯಾದರೆ ಹೈದ್ರಾಬಾದ - ಕರ್ನಾಟಕದ ಜನರ ಬಹುದಿನದ ಕನಸು ನನಸಾಗುತ್ತದೆ. ಇದರಿಂದಾಗುವ ಲಾಭಗಳು ಬಹುತೇಕ ಈ ಭಾಗದ ಎಲ್ಲ ಜನರಿಗೆ ತಲುಪುತ್ತದೆ. ಈ ಭಾಗದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು, ಸರಕಾರಿ ನೌಕರಿಗಳಲ್ಲಿ ಹಾಗೂ ಉನ್ನತ ವ್ಯಾಸಂಗಗಳಲ್ಲಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ ದೊರೆಯುತ್ತದೆ.

ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೌಕರಿಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ ೩೭೧ನೇ ಕಲಂ ತೆಲಂಗಾಣ ಮಾದರಿಯಲ್ಲಿ ಜಾರಿಯಾಗುವದು ಅತೀ ಅವಶ್ಯಕವಾಗಿದೆ, ಈ ದಿಕ್ಕಿನಲ್ಲಿ ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಜನಪ್ರತಿನಿಧಿಗಳು ಪ್ರಗತಿಪರ ಚಿಂತಕರು, ಹೋರಾಟಗಾರರು, ರೈತರು, ಕೂಲಿಕಾರ್ಮಿಕರು, ೩೭೧ನೇ ಕಲಂ ತಿದ್ದುಪಡಿ ಮಾಡಲು ಕೇಂದ್ರ ಸರಕಾರದ ಮೇಲೆ ತೀವ್ರತರವಾದ ಒತ್ತಡ ತರಲು ಜನಾಂದೋಲನವನ್ನು ರೂಪಿಸುವ ಅವಶ್ಯಕತೆ ಕಂಡು ಬರುತ್ತದೆ.

ಸಂವಿಧಾನದ ೩೭೧ನೇ ಕಲಂ ಆಂದ್ರಪ್ರದೇಶ ಮಾದರಿಯಲ್ಲಿ ತಿದ್ದುಪಡಿಯಿಂದ ದೊರಕುವ ಸೌಲಭ್ಯಗಳು:

೧. 'ಡಿ' ಗ್ರೂಪ್ ಹುದ್ದೆಗಳಲ್ಲಿ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ಮಟ್ಟದಲ್ಲಿಶೇ೧೦೦ರಷ್ಟು ಸ್ಥಳೀಯರಿಗೆ ಮೀಸಲಾಗುವದು.

೨. "ಸಿ" ಗ್ರೂಪ್ ಹುದ್ದೆಗಳಾದ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಪೋಲಿಸ್ ಕಾನಸ್ಟೆಬಲ್ ಮತ್ತು ಇದೇ ಗ್ರೂಪಿನ ಇತರ ಇಲಾಖೆ ಹುದ್ದೆಗಳಲ್ಲಿ ಅದೇ ಜಿಲ್ಲೆಯವರಿಗೆ ಶೇ% ೮೦ ರಷ್ಟು ಹುದ್ದೆಗಳು ಮೀಸಲಾಗುತ್ತದೆ.

೩. "ಸಿ" ಗ್ರೂಪ್ ಉನ್ನತ ದರ್ಜೆ ಹುದ್ದೆಗಳಾದ ಪ್ರೌಢ ಶಾಲಾ ಶಿಕ್ಷಕರು ಹಾಗೂ ಸಬ್ ಇನ್ಸ್ಪೆಕ್ಟರ್, ಅಬಕಾರಿ ಇನ್ಸ್ಪೆಕ್ಟರ್, ಪ್ರೌಢ ಶಾಲಾ ಮುಖ್ಯಸ್ಥರು, ಸಾರಿಗೆ ಅಧಿಕಾರಿ ಹುದ್ದೆಗಳಲ್ಲಿ ವಿಭಾಗ ಮಟ್ಟದಲ್ಲಿ ಶೇ% ೭೦ ರಷ್ಟು ಹುದ್ದೆಗಳು ಅದೇ ವಿಭಾಗದವರಿಗೆ ಮೀಸಲಾಗುತ್ತದೆ.

೪. "ಬಿ" ಗ್ರೂಪ್ ಹುದ್ದೆಗಳಲ್ಲಿ ವಿಭಾಗ ಮಟ್ಟದಲ್ಲಿ ಶೇ% ೬೦ ರಷ್ಟು ಹುದ್ದೆಗಳು ಅದೇ ವಿಭಾಗದವರಿಗೆ ಮೀಸಲಾಗುತ್ತದೆ.

೫. ವೃತ್ತಿಪರ ಕಾಲೇಜುಗಳಲ್ಲಿ ಶೇ% ೮೫ ರಷ್ಟು ಸೀಟುಗಳು ಆಯಾ ಕಾಲೇಜುಗಳ ವ್ಯಾಪ್ತಿಯ ಸ್ಥಳೀಯರಿಗೆ ಮೀಸಲಾಗುತ್ತವೆ.

೬. ವಿಶ್ವವಿದ್ಯಾಲಯಗಳಲ್ಲಿ ಆ ವಿಶ್ವವಿದ್ಯಾಲಯದ ವ್ಯಾಪ್ತಿಯ ಅಡಿಯಲ್ಲಿ ಬರುವ ಸ್ಥಳೀಯರಿಗೆ ಶೇ ೮೫ರಷ್ಟು ಸೀಟುಗಳು ಮೀಸಲಾಗುತ್ತವೆ.

೭. ರಾಜ್ಯ ಮಟ್ಟದ ಇಲಾಖೆ ಅಥವಾ ಸಂಸ್ಥೆಗಳಲ್ಲಿ ಜಿಲ್ಲೆಯ ಜನಸಂಖ್ಯಾವಾರು ಮೀಸಲಾತಿ ದೊರೆಯುವುದು. ಉದಾಹರಣೆಗೆ, ವಿಧಾನಸಭೆ ಸಚಿವಾಲಯ, ವಿಧಾನ ಪರಿಷತ್ ಸಚಿವಾಲಯ, ಉಚ್ಚ ನ್ಯಾಯಾಲಯ, ಕೆ.ಪಿ.ಎಸ್.ಸಿ., ರಾಜ್ಯಮಟ್ಟದ ಯಾವುದೇ ಇಲಾಖೆ, ಬಿ.ಡಿ.ಎ., ಬಿ.ಬಿ.ಎಮ್.ಪಿ., ವಿ.ಟಿ.ಯು., ರಾಜೀವ ಗಾಂಧೀ ಆರೋಗ್ಯ ವಿಶ್ವವಿದ್ಯಾಲಯ, ಇತ್ಯಾದಿ ಇಲಾಖೆಗಳಲ್ಲಿ ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ದೊರಕುವುದು.

೮. ಇವೆಲ್ಲವುಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ರಾಜ್ಯದಲ್ಲಿ ಒಂದು ನ್ಯಾಯಾಧಿಕರಣವನ್ನು ಸ್ಥಾಪಿಸಲಾಗುವದು.

೯. ಇದರ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ರಾಜ್ಯಪಾಲರದ್ದಾಗಿದೆ.

ರಾಜ್ಯದ ಮೂಲಭೂತ ಸೌಕರ್ಯಗಳ ಒಂದು ಚಿತ್ರಣ ಹಾಗೂ ಪ್ರಾದೇಶಿಕ ಅಸಮತೋಲನ

*****

೧. ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಕಾರ್ಖಾನೆಗಳಲ್ಲಿ ವಿಭಾಗವಾರು ಪಾಲು

ವಿಭಾಗಗಳು	ರಾಜ್ಯದ ಒಟ್ಟು ಕಾರ್ಖಾನೆಗಳಲ್ಲಿ ವಿಭಾಗವಾರು ಪಾಲು
ಬೆಂಗಳೂರು	೪೯.೩%
ಮೈಸೂರು	೨೩.೩%
ಬೆಳಗಾವಿ	೧೮.೨%
ಗುಲ್ಬರ್ಗಾ	೯.೨%

೨. ಕರ್ನಾಟಕ ರಾಜ್ಯದಲ್ಲಿರುವ ಕೈಗಾರಿಕಾ ಕಾರ್ಮಿಕರಲ್ಲಿ ವಿಭಾಗವಾರು ಪಾಲು

ವಿಭಾಗಗಳು	ರಾಜ್ಯದ ಕೈಗಾರಿಕಾ ಕಾರ್ಮಿಕರಲ್ಲಿವಿಭಾಗವಾರು ಪಾಲು
ಬೆಂಗಳೂರು	೪೩.೬೩%
ಮೈಸೂರು	೨೭.೫%
ಬೆಳಗಾವಿ	೨೦.೦೫%
ಗುಲ್ಬರ್ಗಾ	೮.೦%

೩. ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಕೃಷಿ ಕಾರ್ಮಿಕರ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪಾಲು

ವಿಭಾಗಗಳು	ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ಕೃಷಿ ಕಾರ್ಮಿಕರ ಪಾಲು
ಬೆಂಗಳೂರು	೪.೬೪%
ಮೈಸೂರು	೨.೯೮%
ಬೆಳಗಾವಿ	೭.೪೨%
ಗುಲ್ಬರ್ಗಾ	೭.೫೧%

೪. ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ

ವಿಭಾಗಗಳು	ಪ್ರಾಥಮಿಕ ಶಾಲೆಗಳ ಸಂಖ್ಯೆ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ
ಬೆಂಗಳೂರು	೧೨೫.೨
ಮೈಸೂರು	೧೧೦.೩
ಬೆಳಗಾವಿ	೯೯.೫
ಗುಲ್ಬರ್ಗಾ	೭೯.೨೫

೫. ಕರ್ನಾಟಕದಲ್ಲಿ ಶಾಲೆಗೆ ಹೋಗದ ಮಕ್ಕಳು (೬-೧೪ ವರ್ಷದೊಳಗಿನ) ಶೇಖಡಾವಾರು

ವಿಭಾಗ	ಶಾಲೆಗೆ ಹೋಗದ ಮಕ್ಕಳು (೬- ೧೪ ವರ್ಷದೊಳಗಿನ)
ಬೆಂಗಳೂರು	೫.೫೮೫%
ಮೈಸೂರು	೫.೪೫%
ಬೆಳಗಾವಿ	೧೦.೫೬%
ಗುಲ್ಬರ್ಗಾ	೨೦.೮೨%

೬. ರಾಜ್ಯದಲ್ಲಿ ಶಾಲಾ ದಾಖಲಾತಿ ಮತ್ತು ಶಾಲೆ ಬಿಟ್ಟ ಮಕ್ಕಳು ವಿಭಾಗವಾರು(೨೦೦೯-೧೦)

ವಿಭಾಗ	ಶಾಲಾ ದಾಖಲಾತಿ ವಿವರ		ಶಾಲೆ ಬಿಟ್ಟ ಮಕ್ಕಳ ಸಂಖ್ಯೆ	ಶೇಕಡಾವಾರು ಶಾಲೆ ಬಿಟ್ಟ ಮಕ್ಕಳು
	ಒಂದನೇ ತರಗತಿಗೆ	ಹತ್ತನೇ ತರಗತಿಗೆ		
ಬೆಂಗಳೂರು	೩,೫೧,೬೩೯	೨,೭೧,೮೭೬	೭೯,೭೬೩	೨೨.೬೮
ಮೈಸೂರು	೧,೮೮,೨೨೪	೧,೬೮,೪೩೩	೧೯,೮೧೧	೧೦.೫೨
ಬೆಳಗಾವಿ	೨,೯೭,೮೩೮	೧,೯೩,೧೬೮	೧,೦೪,೬೭೦	೩೫.೧೪
ಗುಲ್ಬರ್ಗಾ	೨,೬೯,೫೯೪	೧,೧೪,೪೧೨	೧,೫೫,೧೮೨	೫೭.೫೬

೭. ಕರ್ನಾಟಕದಲ್ಲಿ ಸಾಕ್ಷರತೆ ಪ್ರಮಾಣ ೨೦೦೧ರ ಜನಗಣತಿ

ವಿಭಾಗಗಳು	ಸಾಕ್ಷರತೆ ಪ್ರಮಾಣ ೨೦೦೧ರ ಜನಗಣತಿ		ಒಟ್ಟು ಸಾಕ್ಷರತೆ
	ಗಂಡು	ಹೆಣ್ಣು	
ಬೆಂಗಳೂರು	೮೦.೫೬	೬೪.೭೮	೭೨.೬೭
ಮೈಸೂರು	೭೭.೦೨	೬೧.೬೪	೬೯.೩೩
ಬೆಳಗಾವಿ	೭೬.೩೦	೫೪.೦೬	೬೫.೧೮
ಗುಲ್ಬರ್ಗಾ	೬೬.೫೧	೪೧.೯೨	೫೪.೨೧
	ಕರ್ನಾಟಕ ರಾಜ್ಯದ ಸಾಕ್ಷರತೆ		೬೭.೦೪

೮. ಕರ್ನಾಟಕದಲ್ಲಿರುವ ಬೇರೆ ಬೇರೆ ವಿಧದ ರಸ್ತೆಗಳ ವಿವರ (ಕೀ.ಮೀ.ನಲ್ಲಿ)

ವಿಭಾಗ	ರಾಷ್ಟ್ರೀಯ ಹೆದ್ದಾರಿ	ರಾಜ್ಯ ಹೆದ್ದಾರಿ	ಪ್ರಮುಖ ಜಿಲ್ಲಾ ರಸ್ತೆಗಳೂ	ಇತರೆ ಜಿಲ್ಲಾ ರಸ್ತೆಗಳೂ	ಗ್ರಾಮೀಣ ರಸ್ತೆಗಳು	ಟಿಡಿಪಿ ರಸ್ತೆಗಳು	ನೀರಾವರಿ ರಸ್ತೆಗಳು	ಅರಣ್ಯ ಇಲಾಖೆ ರಸ	ಒಟ್ಟು
ಬೆಂಗಳೂರು	೧೨೨೩	೨೬೧೯	೮೦೩೫	೬೨೫	೧೦೯೫೦	೧೧೧೭೦	೩೦೯೦	೩೩೮	೩೮೦೫೦
ಮೈಸೂರು	೯೧೧	೨೪೧೮	೮೫೪೯	೫೬೦	೧೪೦೭೦	೫೬೪೬	೨೨೭೨	೧೬೨೪	೩೮೭೪೦
ಬೆಳಗಾವಿ	೧೦೦೮	೨೮೩೬	೭೫೯೦	೧೯೦	೧೨೭೭೯	೭೬೦೨	೧೬೮೪	೫೯೬	೩೪೦೮೬
ಗುಲ್ಬರ್ಗಾ	೩೮೧	೨೧೪೮	೪೫೮೩	೨೫೯	೭೨೧೦	೩೯೬೩	೨೩೭೧	೨೪	೨೦೯೩೯

೯. ಜಿಲ್ಲಾ ಪಂಚಾಯತ್ ಹಾಗೂ ಮುನಿಸಿಪಾಲಿಟಿ ಅಡಿಯಲ್ಲಿ ಬರುವ ರಸ್ತೆಗಳು (ಕೀ.ಮೀ.ನಲ್ಲಿ)

ವಿಭಾಗ	ಜಿಲ್ಲಾ ಪಂಚಾಯತ್ ರಸ್ತೆಗಳು	ಮುನಿಸಿಪಾಲಿಟಿ ರಸ್ತೆಗಳು
ಬೆಂಗಳೂರು	೭೮೮	೩೨೬೯
ಮೈಸೂರು	೨೭೪೦	೨೪೫೯
ಬೆಳಗಾವಿ	೧೧೩೫	೧೮೨೧
ಗುಲ್ಬರ್ಗಾ	೨	೮೧೭

೧೦. ಕರ್ನಾಟಕದ ವಿವಿಧ ಭಾಗಗಳಲ್ಲಿ ನೂರು ಚದುರ ಕೀಲೋ ಮೀಟರ್ ಗೆ ಒಟ್ಟು ರಸ್ತೆ (ಕೀ.ಮೀ.ಗಳಲ್ಲಿ)

ವಿಭಾಗ	ನೂರು ಚದುರ ಕಿಲೋ ಮೀಟರ್ ಗೆ ಒಟ್ಟು ರಸ್ತೆ
ಬೆಂಗಳೂರು	೭೮.೩೨
ಮೈಸೂರು	೯೪.೦೫
ಬೆಳಗಾವಿ	೬೬.೮೦
ಗುಲ್ಬರ್ಗಾ	೪೯.೮೬

೧೧. ಕರ್ನಾಟಕದಲ್ಲಿ ಒಂದು ಲಕ್ಷ ಜನರಿಗೆ ಇರುವ ಸಾರ್ವಜನಿಕ ಸಾರಿಗೆ ವಾಹನಗಳು

ವಿಭಾಗ	ಒಂದು ಲಕ್ಷ ಜನರಿಗೆ ಇರುವ ವಾಹನಗಳು
ಬೆಂಗಳೂರು	೭೪೪೨
ಮೈಸೂರು	೫೮೪೧
ಬೆಳಗಾವಿ	೫೨೩೨
ಗುಲ್ಬರ್ಗಾ	೨೯೮೬

೧೨. ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಆಸ್ಪತ್ರೆಗಳಲ್ಲಿ ಇರುವ ಮಂಚ್/ ಹಾಸಿಗೆಗಳು

ವಿಭಾಗ	ಒಂದು ಲಕ್ಷ ಜನರಿಗೆ ಇರುವ ಮಂಚ್/ಹಾಸಿಗೆಗಳು
ಬೆಂಗಳೂರು	೭೬.೮
ಮೈಸೂರು	೧೧೭.೮
ಬೆಳಗಾವಿ	೬೯.೫
ಗುಲ್ಬರ್ಗಾ	೬೨.೨೫

೧೩. ಕರ್ನಾಟಕ ರಾಜ್ಯದಲ್ಲಿ ತರಬೇತಿ ಪಡೆದ ಆರೋಗ್ಯ ಸಿಬ್ಬಂದಿಯವರು ಮಾಡಿರದ ಹೆರಿಗೆಗಳ ಶೇಖಡಾವಾರು(ಅಸುರಕ್ಷಿತ)

ವಿಭಾಗ	ಅಸುರಕ್ಷಿತ ಹೆರಿಗೆಗಳು
ಬೆಂಗಳೂರು	೩೧
ಮೈಸೂರು	೨೩.೫೮
ಬೆಳಗಾವಿ	೩೫.೬೦
ಗುಲ್ಬರ್ಗಾ	೪೯.೯೬

೧೪. ಕರ್ನಾಟಕ ರಾಜ್ಯದಲ್ಲಿ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಶೇಖಡಾವಾರು

ವಿಭಾಗ	ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು
ಬೆಂಗಳೂರು	೦.೨೫%
ಮೈಸೂರು	೦.೦೮%
ಬೆಳಗಾವಿ	೦.೩೭%
ಗುಲ್ಬರ್ಗಾ	೧.೪೮%

೧೫. ಕರ್ನಾಟಕ ರಾಜ್ಯದಲ್ಲಿ ಸ್ವಲ್ಪ ಮಟ್ಟಿಗೆ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಶೇಖಡಾವಾರು

ವಿಭಾಗ	ಸ್ವಲ್ಪ ಮಟ್ಟಿಗೆ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು
ಬೆಂಗಳೂರು	೫೦.೦೮%
ಮೈಸೂರು	೫೦.೭೧%
ಬೆಳಗಾವಿ	೫೮.೭೦%
ಗುಲ್ಬರ್ಗಾ	೬೬.೮೮%

೧೬. ರಾಜ್ಯದಲ್ಲಿರುವ ಒಟ್ಟು ಪ.ಜಾ./ಪ.ಪಂ. ಜನಸಂಖ್ಯೆಯಲ್ಲಿ ಪ್ರತಿ ವಿಭಾಗಗಳ ಪಾಲು (೨೦೦೧ರ ಜನಗಣತಿ)

ವಿಭಾಗ	ಪ.ಜಾ./ಪ.ಪಂ. ಜನಸಂಖ್ಯೆಯಲ್ಲಿ ಪ್ರತಿ ವಿಭಾಗಗಳ ಪಾಲು
ಬೆಂಗಳೂರು	೨೭.೬೧%
ಮೈಸೂರು	೨೦.೫೬%
ಬೆಳಗಾವಿ	೧೭.೦೫%
ಗುಲ್ಬರ್ಗಾ	೩೧.೮೭%

೧೭. ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಶೇಖಡಾವಾರು

ವಿಭಾಗ	ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಶೇ.
ಬೆಂಗಳೂರು	೩೧.೫೧
ಮೈಸೂರು	೨೫.೯೦
ಬೆಳಗಾವಿ	೩೩.೮೬
ಗುಲ್ಬರ್ಗಾ	೪೦.೭೧

೧೮. ರಾಜ್ಯದಲ್ಲಿರು ಬ್ಯಾಂಕ್ ಶಾಖೆಗಳಿಗಿರುವ ಸರಾಸರಿ ಜನಸಂಖ್ಯೆ

ವಿಭಾಗ	ಬ್ಯಾಂಕ್ ಶಾಖೆಗಳಿಗಿರುವ ಸರಾಸರಿ ಜನಸಂಖ್ಯೆ
ಬೆಂಗಳೂರು	೧೧೬೦೦
ಮೈಸೂರು	೯೫೦೦
ಬೆಳಗಾವಿ	೧೧೫೦೦
ಗುಲ್ಬರ್ಗಾ	೧೫೭೫೦

೧೯. ೧೯೫೬ರಿಂದ ೨೦೦೧ರ ಅವಧಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇಮಕ ಮಾಡಲಾದ ಅಧ್ಯಕ್ಷರು ಹಾಗೂ ಸದಸ್ಯರು

ವಿಭಾಗ	ಕರ್ನಾಟಕ ಲೋಕಸೇವಾ ಆಯೋಗಕ್ಕೆ ನೇಮಕ ಮಾಡಲಾದ ಅಧ್ಯಕ್ಷರು ಹಾಗೂ ಸದಸ್ಯರು		
	ಅಧ್ಯಕ್ಷರು	ಸದಸ್ಯರು	ಒಟ್ಟು
ಬೆಂಗಳೂರು	೪	೧೯	೨೩
ಮೈಸೂರು	೫	೧೯	೨೪
ಬೆಳಗಾವಿ	೧	೮	೯
ಗುಲ್ಬರ್ಗಾ	೧	೬	೭

೨೦. ೧೯೯೨ ರಿಂದ ೨೦೦೧ರ ಅವಧಿಯಲ್ಲಿ ಕೆ.ಪಿ.ಎಸ್.ಸಿ. ಗೆಜೆಟೆಡ್/ನಾನ್ ಗೆಜೆಟೆಡ್ ಹುದ್ದೆಗಳಿಗೆ ಮಾಡಿದ ನೇಮಕ

ವಿಭಾಗ	ಕೆ.ಪಿ.ಎಸ್.ಸಿ. ಗೆಜೆಟೆಡ್/ನಾನ್ ಗೆಜೆಟೆಡ್ ಹುದ್ದೆಗಳಿಗೆ ಮಾಡಿದ ನೇಮಕ				
	ಗೆಜೆಟೆಡ್	ಶೇ	ನಾನ್ ಗೆಜೆಟೆಡ್	ಶೇ	ಜನ ಸಂಖ್ಯೆ ಶೇ
ಬೆಂಗಳೂರು	೩೭೪೨	೪೭.೩೯	೧೬೨೧	೪೫.೨೫	೩೪.೯೭
ಮೈಸೂರು	೧೯೫೨	೨೪.೭೨	೯೯೩	೨೭.೭೨	೨೨.೩೧
ಬೆಳಗಾವಿ	೧೨೮೨	೧೬.೨೪	೬೮೪	೧೯.೧೦	೨೪.೭೨
ಗುಲ್ಬರ್ಗಾ	೯೨೦	೧೧.೬೫	೨೮೪	೭.೯೩	೧೮.೦೦

೨೧. ರಾಜ್ಯ ಸರಕಾರಿ ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎ & ಬಿ ಸಮೂಹದ ಅಧಿಕಾರಿಗಳ ಜಿಲ್ಲಾವಾರು ಪ್ರಾತಿನಿಧ್ಯ

ವಿಭಾಗ	ಕಾರ್ಯ ನಿರ್ವಹಿಸುತ್ತಿರುವ ಎ & ಬಿ ಸಮೂಹದ ಅಧಿಕಾರಿಗಳ ಜಿಲ್ಲಾವಾರು ಪ್ರಾತಿನಿಧ್ಯ					
	ಎ	ರಾಜ್ಯದ ಒಟ್ಟು ಪಾಲಿನಲ್ಲಿ ಶೇ ಪ್ರಮಾಣ	ಬಿ	ರಾಜ್ಯದ ಒಟ್ಟು ಪಾಲಿನಲ್ಲಿ ಶೇ ಪ್ರಮಾಣ	ಎ & ಬಿ	ರಾಜ್ಯದ ಒಟ್ಟು ಪಾಲಿನಲ್ಲಿ ಶೇ ಪ್ರಮಾಣ
ಬೆಂಗಳೂರು	೨೨೧೩	೪೧.೩೦	೪೯೫೫	೩೭.೩೪	೭೧೬೮	೩೮.೪೮
ಮೈಸೂರು	೧೪೭೩	೨೭.೪೯	೩೭೪೫	೨೮.೨೨	೫೨೧೮	೩೮.೦೧
ಬೆಳಗಾವಿ	೯೯೯	೧೮.೬೪	೨೬೬೮	೨೦.೧೧	೩೬೬೭	೧೯.೬೮
ಗುಲ್ಬರ್ಗಾ	೫೯೩	೧೧.೦೭	೧೮೦೩	೧೩.೫೯	೨೩೯೬	೧೨.೮೬

೨೨. ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಇಲಾಖಾ ಮುಖ್ಯಸ್ಥರು

ವಿಭಾಗ	ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಇಲಾಖಾ ಮುಖ್ಯಸ್ಥರು			
	ವಿಧಾನಸಭೆ ಸಚಿವಾಲಯದ ಅಧಿಕಾರಿಗಳು	ಶೇ ವಿಭಾಗವಾರು	ಇಲಾಖಾ ಮುಖ್ಯಸ್ಥರು	ಶೇ ವಿಭಾಗವಾರು
ಬೆಂಗಳೂರು	೧೦೬	೪೮.೧೮	೨೩	೨೮.೭೫
ಮೈಸೂರು	೫೪	೨೪.೫೫	೨೭	೩೩.೭೫
ಬೆಳಗಾವಿ	೩೬	೧೬.೩೬	೧೯	೨೩.೭೫
ಗುಲ್ಬರ್ಗಾ	೧೨	೫.೪೫	೧೦	೧೨.೫೦

೨೩. ರಾಜ್ಯ ಸರಕಾರಿ ಸೇವೆಯಲ್ಲಿ ಕೆ.ಎ.ಎಸ್. ಅಧಿಕಾರಿಗಳ ಪ್ರಾತಿನಿಧ್ಯ

ವಿಭಾಗ	ಕಾರ್ಯನಿರ್ವಹಿಸುತ್ತಿರುವ ಎ & ಬಿ ಸಮೂಹದ ಅಧಿಕಾರಿಗಳ ಜಿಲ್ಲಾವಾರು ಪ್ರಾತಿನಿಧ್ಯ					
	ಸೆಲೆಕಷನ್ ಗ್ರೇಡ್	ರಾಜ್ಯದ ಒಟ್ಟು ಪಾಲಿನಲ್ಲಿ ಶೇ.ಪ್ರಮಾಣ	ಸೀನಿಯರ್ ಗ್ರೇಡ್	ರಾಜ್ಯದ ಒಟ್ಟು ಪಾಲಿನಲ್ಲಿ ಶೇ ಪ್ರಮಾಣ	ಬಿ ಸಮೂಹ	ರಾಜ್ಯದ ಒಟ್ಟು ಪಾಲಿನಲ್ಲಿ ಶೇ ಪ್ರಮಾಣ
ಬೆಂಗಳೂರು	೨೯	೫೫.೭೭	೧೭೩	೪೫.೦೫	೫೧	೨೬.೫೬
ಮೈಸೂರು	೧೬	೩೦.೭೭	೭೫	೧೯.೫೩	೪೦	೨೦.೮೩
ಬೆಳಗಾವಿ	೫	೯.೬೨	೮೩	೨೧.೬೧	೬೩	೩೨.೮೧
ಗುಲ್ಬರ್ಗಾ	೧	೧.೯೨	೪೨	೧೦.೯೪	೩೪	೧೭.೭೧

೨೪. ಡಾ. ಡಿ.ಎಮ್.ನಂಜುಂಡಪ್ಪನವರ ವರದಿಯ ಅನುಷ್ಠಾನ ಸಮಿತಿ ೨೦೦೭–೦೮ ರಿಂದ ೨೦೦೯–೧೦ನೇ ಸಾಲಿನಲ್ಲಿ ಖರ್ಚು ಮಾಡಿದ ಅನುದಾನದ ವಿವರ.

ವಿಭಾಗಗಳು	ನಿಗದಿಪಡಿಸಿದ ಅನುದಾನ	ಬಿಡುಗಡೆ ಆದ ಅನುದಾನ	ಖರ್ಚು ಮಾಡಿದ ಅನುದಾನ	ಶೇಕಡಾವಾರು ಖರ್ಚು ಮಾಡಿದ ಅನುದಾನ
ಬೆಂಗಳೂರು	೧೨೬೦.೯೪	೯೬೫.೮೦	೧೦೩೫.೮೩	೮೨.೧೫
ಮೈಸೂರು	೭೨೯.೨೪	೫೫೬.೧೪	೫೨೪.೪೫	೭೧.೯೨
ಬೆಳಗಾವಿ	೧೧೭೩.೮೫	೯೩೫.೧೨	೯೭೫.೩೦	೮೩.೦೯
ಗುಲ್ಬರ್ಗಾ	೨೧೫೩.೫೦	೧೪೮೦.೧೪	೧೪೪೩.೧೬	೬೭.೦೧

ಹೈದ್ರಾಬಾದ - ಕರ್ನಾಟಕ ಕಂಡ ಹೋರಾಟದ ಹಾದಿ:

೧೯೮೦ರಲ್ಲಿ ದಿ.ಶ್ರೀ ಗುಂಡುರಾವ್ ಇವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶ್ರೀ ಎನ್.ಧರ್ಮಸಿಂಗ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ, ಹೈದ್ರಾಬಾದ ಕರ್ನಾಟಕ ಹಿಂದುಳಿದಿರುವ ಕುರಿತು ವರದಿ ನೀಡುವಂತೆ ತಿಳಿಸಲಾಗಿತ್ತು. ೧೯೮೩ ರಲ್ಲಿ ಶ್ರೀ ಎನ್.ಧರ್ಮಸಿಂಗ್ ಸಮಿತಿಯು ಸಲ್ಲಿಸಿದ ವರದಿಯಂತೆ ಹೈದ್ರಾಬಾದ - ಕರ್ನಾಟಕದಲ್ಲಿ ಒಂದು ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಂದು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಯಿತು. ಆದರೆ ಅದು ಜಾರಿಗೆ ಬರುವುದಕ್ಕಿಂತ ಮುಂಚೆ ದಿ.ಶ್ರೀ ಗುಂಡುರಾವ್ ಸರಕಾರ ಚುನಾವಣೆಗೆ ಹೋದ ಕಾರಣ ನೆನೆಗುದಿಗೆ ಬಿತ್ತು.

ಮುಂದೆ ಬಂದ ದಿ.ಶ್ರೀ ರಾಮಕೃಷ್ಣ ಹೆಗಡೆ ನೇತೃತ್ವದ ಸರಕಾರ ಹೈದ್ರಾಬಾದ - ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಕಡೆಗೆ ಮನಸ್ಸು ಮಾಡಲಿಲ್ಲ. ಇದನ್ನು ವಿರೋದಿಸಿ ಅಂದಿನ ಸರಕಾರದಲ್ಲಿ ಸಚಿವರಾಗಿದ್ದ ಸನ್ಮಾನ್ಯ ಶ್ರೀ ವೈಜನಾಥ ಪಾಟೀಲರು ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿ ಪ್ರತಿಭಟಿಸಿದರು. ಮುಂದೆ ೧೯೯೨ ರಲ್ಲಿ ಈ ಭಾಗಕ್ಕೆ ಹೈದ್ರಾಬಾದ - ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಲಾಯಿತು. ಇದೇ ಸಂದರ್ಭದಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಹೋರಾಡಲು ಹಿರಿಯ ರಾಜಕಾರಣಿಯು ಮಾಜಿ ಸಚಿವರಾದ ದಿ.ವಿಶ್ವನಾಥ ರೆಡ್ಡಿ ಮುದ್ನಾಳ ಇವರು ಹೈದ್ರಾಬಾದ - ಕರ್ನಾಟಕ ಅಭಿವೃದ್ಧಿ ಹೋರಾಟ ಸಮಿತಿ ರಚಿಸಿದರು. ಇದೇ ಮುಂದೆ ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯಾಗಿ ಪರಿವರ್ತನೆ ಯಾಯಿತು.

ದಿ.ಶ್ರೀ ಜೆ.ಎಚ್.ಪಟೇಲ್ ಸರಕಾರದಲ್ಲಿ ಸಚಿವರಾಗಿದ್ದ ಶ್ರೀ ವೈಜನಾಥ ಪಾಟೀಲರು, ೧೯೯೬ ರಲ್ಲಿ ೧೯೪೮ ಕ್ಕಿಂತ ಮೊದಲು ಹೈದ್ರಾಬಾದ ನಿಜಾಮರ ಆಡಳಿತಕ್ಕೆ ಒಳಪಟ್ಟ ತೆಲಂಗಾಣ ಮತ್ತು ಮರಾಠಾವಾಡ ಪ್ರಾಂತ್ಯಗಳಿಗೆ ಬೇಟಿ ನೀಡಿ ಅಲ್ಲಿನ ಪರಸ್ಥಿತಿಗಳನ್ನು ಅಧ್ಯಯನ ಮಾಡಿದರು. ೧೯೫೬ ರವರೆಗೆ ಇದ್ದ ಮುಲ್ಕಿ ಕಾನೂನಿನ ಸವಲತ್ತು ಆ ಪ್ರಾಂತ್ಯಗಳಲ್ಲಿ ಸಂವಿಧಾನದ ೩೭೧ನೇ ಕಲಂ ಅಡಿಯಲ್ಲಿ ನೀಡಿರುವದರಿಂದ, ಅಲ್ಲಿ ಸರಕಾರಿ ಹುದ್ದೆಗಳಲ್ಲಿ ಹಾಗೂ ಉನ್ನತ ವ್ಯಾಸಂಗದಲ್ಲಿ ಅಲ್ಲಿಯ ಜನರಿಗೆ ಪ್ರಾತಿನಿದ್ಯ ಒದಗಿಸಲಾಗಿತ್ತು. ಇದೇ ಸೌಲಭ್ಯ ಹೈದ್ರಾಬಾದ - ಕರ್ನಾಟಕಕ್ಕೆ ಅನ್ವಯಿಸುತ್ತೆ ಅನ್ನುವ ದೃಡವಾದ ವಿಶ್ವಾಸ ಅವರದಾಗಿತ್ತು.

ಶ್ರೀ ವೈಜನಾಥ ಪಾಟೀಲರು, ೧೯೯೭ರಲ್ಲಿ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು

ಸಚಿವರಾಗಿದ್ದುಕೊಂಡೇ ವಿಧಾನಸಭೆಯಲ್ಲಿ ಪ್ರತಿಭಟಿಸಿದರು. ಮುಂದೆ ೧೯೯೯ರಲ್ಲಿ ಈ ವಿಷಯದ ಮೇಲೆ ವಿಧಾನಸಭೆಯಲ್ಲಿ ಖಾಸಗಿ ಮಸೂಧೆಯನ್ನು ಮಂಡಿಸಿದರು. ಆದರೆ ಅದು ಚರ್ಚೆಗೆ ಬರುವುದಕ್ಕಿಂತ ಮುಂಚೆ ದಿ.ಶ್ರೀ ಜೆ.ಎಚ್.ಪಟೇಲ್‌ರು ಸರಕಾರವನ್ನು ವಿಸರ್ಜಿಸಿದರು. ಹೀಗಾಗಿ ಆ ಮಸೂದೆ ಚರ್ಚೆಗೆ ಬಾರದೇ ಹೋಯಿತು.

ಶ್ರೀ ವೈಜನಾಥ ಪಾಟೀಲರು, ೧೯೯೯ರಲ್ಲಿ ಕಾಂಗ್ರೆಸ್ ಅಲೆಯಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಸೋತುಹೋದರು. ಆದರೆ ವಿಧಾನಸಭೆಯ ಹೊರಗೆ ಸಮಕಾಲಿನ ಗೆಳೆಯರೊಂದಿಗೆ ಸೇರಿ ಹೈದ್ರಾಬಾದ – ಕರ್ನಾಟಕ ಹೋರಾಟ ಸಮಿತಿಯ ಹೆಸರಿನಲ್ಲಿ ಹೋರಾಟ ನಡೆಸಿದರು.

ಇದನ್ನು ಮನಗಂಡ ಅಂದಿನ ಸನ್ಮಾನ್ಯ ಶ್ರೀ ಎಸ್.ಎಮ್.ಕೃಷ್ಣ ನೇತೃತ್ವದ ಸರಕಾರ ಸನ್ಮಾನ್ಯ ಶ್ರೀ ದಿ.ಡಾ.ಡಿ.ಎಂ.ನಂಜುಂಡಪ್ಪನವರ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಿ, ಇಡೀ ಕರ್ನಾಟಕದ ಪ್ರಾದೇಶಿಕ ಅಸಮತೋಲನವನ್ನು ಅಧ್ಯಯನ ಮಾಡಲು ಆದೇಶಿಸಿದರು. ಆ ಸಮಿತಿ ರಚಿಸುವ ಮೂಲಕ ಕೇವಲ ಹೈದ್ರಾಬಾದ – ಕರ್ನಾಟಕ ಹಿಂದುಳಿದಿಲ್ಲ ರಾಜ್ಯದ ಇತರೆ ಭಾಗಗಳು ಹಿಂದುಳಿದಿವೆ ಎಂದು ಸಾರಲು ಮಾನ್ಯ ಮುಖ್ಯಂತ್ರಿಗಳು ಪ್ರಯತ್ನಿಸಿದರು. ಆದರೆ ಜೂನ್ ೨೦೦೨ರಲ್ಲಿ ಶ್ರೀ ದಿ.ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಸುದೀರ್ಘವಾದ ೧೨೦೦ ಪುಟಗಳ ವರದಿಯನ್ನು ಸಲ್ಲಿಸುತ್ತಾ, ಹೈದ್ರಾಬಾದ – ಕರ್ನಾಟಕ ಕೇವಲ ಹಿಂದುಳಿದಿಲ್ಲ, ಅದು ಅತ್ಯಂತ ಹಿಂದುಳಿದ ಪ್ರದೇಶ ಎಂದು ವೈಜ್ಞಾನಿಕ ವರದಿಯನ್ನು ನೀಡಿತು. ಯಾವ ಸರಕಾರ ಸತ್ವ ತಾನೇ ಸಮಿತಿಯನ್ನು ರಚಿಸಿತು, ಅದೇ ಸರಕಾರ ಆ ಸಮಿತಿ ಸಲ್ಲಿಸಿದ ವರದಿ ಒಪ್ಪಿಕೊಳ್ಳಲಿಲ್ಲ ತಿರಸ್ಕರಿಸಲೂ ಇಲ್ಲ. ಹೀಗೆ ಈ ಭಾಗದ ಜನರಿಗೆ ಯಾಮಾರಿಸಲು ಶ್ರೀ ಎಸ್.ಎಮ್.ಕೃಷ್ಣ ನೇತೃತ್ವದ ಸರಕಾರ ಪ್ರಯತ್ನಿಸಿತು.

ಈ ವರದಿಯಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಈ ಭಾಗಕ್ಕೆ ಸರಕಾರಿ ಹುದ್ದೆಗಳ ನೇಮಕಾತಿಯಲ್ಲಿ ಹಾಗೂ ಉನ್ನತ ವ್ಯಾಸಂಗದಲ್ಲಿ ವಿವಿಧ ಹಂತಗಳಲ್ಲಿ ಮೀಸಲಾತಿಯನ್ನು ನೀಡಬೇಕೆಂದು, ಈ ಮೀಸಲಾತಿ ಅನುಷ್ಠಾನಗೊಳಿಸಲು ಹೈದ್ರಾಬಾದ – ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಸಮಿತಿ ಶಿಫಾರಸ್ಸು ಮಾಡಿತು. ಈ ವಿಷಯದಲ್ಲಿಯೂ ಎಸ್.ಎಮ್.ಕೃಷ್ಣ ನೇತೃತ್ವದ ಸರಕಾರ ಮತ್ತೊಮ್ಮೆ ಈ ಭಾಗದ ಜನರಿಗೆ ಯಾಮಾರಿಸಲು ಪ್ರಯತ್ನಿಸಿದಾಗ ಅವರಿಗೆ ಮುಖಭಂಗವಾಯಿತು. ೨೦೦೩ರಲ್ಲಿ ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಡಾ.ಡಿ.ಎಂ.ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಪ್ರಾದೇಶಿಕ ಅಸಮತೋಲನ

ನಿವಾರಣೆಗಾಗಿ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಸಮಿತಿ ಶಿಫಾರಸ್ಸು ಮಾಡಿದೆ, ಹಾಗಾಗಿ ಇದನ್ನು ಪರಿಗಣಿಸಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಪ್ರಸ್ತಾವನೆಯನ್ನು ಕಳಿಸಿತ್ತು. ಈ ಪ್ರಸ್ತಾವನೆಯ ಪ್ರಿಂಟೆಡ್ ಪತ್ರದಲ್ಲಿ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಸರಕಾರ ಮನವಿ ಮಾಡಿದೆ ಎಂದು ಇತ್ತು. ಅದರಲ್ಲಿ ಯಾರೋ ಒಬ್ಬರು ಹೈದ್ರಾಬಾದ - ಕರ್ನಾಟಕಕ್ಕೆ ಹಾಗೂ ಇತರೆ ಹಿಂದುಳಿದ ಜಿಲ್ಲೆಗಳು ಎಂದು ಪೆನ್ನಿನಿಂದ ಬರೆಯಲಾಗಿತ್ತು. ಈ ರೀತಿ ಪ್ರತಿಯೊಂದು ಹಂತದಲ್ಲಿ ಅಚಾತುರ್ಯದ ಕೆಲಸ ಮಾಡಲಾಗಿತ್ತು. ಅಂದಿನ ಎನ್.ಡಿ.ಎ. ಸರಕಾರದ ಗೃಹ ಸಚಿವರಾದ ಶ್ರೀಎಲ್.ಕೆ.ಅಡ್ವಾಣಿಯವರು ಆ ಮನವಿಗೆ ಪ್ರತಿಕ್ರಿಯಿಸುತ್ತ ನೀವು ಕಳಿಸಿದ ಪ್ರಸ್ತಾವನೆ ಪರಿಶೀಲಿಸಲಾಗಿದ್ದು, ೧೯೭೩ರಲ್ಲಿ ಆಂಧ್ರಪ್ರದೇಶದಲ್ಲಿ ಇದ್ದಂಥ ಪರಸ್ಥಿತಿ ಈಗ ಹೈದ್ರಾಬಾದ - ಕರ್ನಾಟಕದಲ್ಲಿಲ್ಲ ಹಾಗಾಗಿ ತಾವು ಕಳಿಸಿದ ಪ್ರಸ್ತಾವನೆ ತಿರಸ್ಕರಿಸಲಾಗಿದೆ ಎಂದು ಉತ್ತರಿಸಿದ್ದರು. ವಿಚಾರ ಮಾಡುವಂತಹ ವಿಷಯ ಏನೆಂದರೆ ೧೯೭೩ರಲ್ಲಿ ಆಂಧ್ರಪ್ರದೇಶದಲ್ಲಿ ಯಾವ ಪರಿಸ್ಥಿತಿ ಇತ್ತು ಎಂಬುದು. ೧೯೬೯ರಲ್ಲಿ ಆಂಧ್ರದ ಸಿ.ಚೆನ್ನಾರೆಡ್ಡಿ ನೇತೃತ್ವದಲ್ಲಿ ತೆಲಂಗಾಣಕ್ಕೆ ನೀಡಿದ ವಿಶೇಷ ಸ್ಥಾನಮಾನ ನಮಗೂ ನೀಡಬೇಕು ಎಂದು "ಜೈ ಆಂಧ್ರ" ಎಂದು ಅತೀ ಉಗ್ರವಾದ ಹೋರಾಟ ನಡೆದು ಕೇಂದ್ರ ಸರಕಾರದ ಕಛೇರಿಗಳನ್ನು, ರಾಜ್ಯ ಸರಕಾರದ ಕಛೇರಿಗಳನ್ನು ಧ್ವಂಸಗೊಳಿಸಿ, ಕಾನೂನು ಸುವ್ಯವಸ್ಥೆಯ ಪ್ರಶ್ನೆ ಎದುರಾಗಿ ಜನರ ಜೀವನ ದುಸ್ತರವಾಗಿತ್ತು. ಈ ಹೋರಾಟಕ್ಕೆ ಮಣಿದ ಕೇಂದ್ರ ಸರಕಾರ ೧೯೭೩ರಲ್ಲಿ ಸಂವಿಧಾನದ ೩೭೧ ನೇ ಕಲಂಗೆ ತಿದ್ದುಪಡಿ ಮಾಡಿ ೩೭೧ನೇ "ಡಿ" ಉಪಬಂಧವನ್ನು ಸೇರಿಸಿ ಮುಲ್ಕಿ ಕಾನೂನಿನ ಸವಲತ್ತನ್ನು ಇಡೀ ಆಂಧ್ರಪ್ರದೇಶಕ್ಕೆ ವಿಸ್ತರಿಸಲಾಯಿತು. ಅಂತಹ ಪರಿಸ್ಥಿತಿ ಈಗ ಹೈದ್ರಾಬಾದ - ಕರ್ನಾಟಕದಲ್ಲಿ ಇಲ್ಲ, ಜನ ಕಾನೂನನ್ನು ಕೈಗೆ ತಗೆದುಕೊಂಡಿಲ್ಲ, ತೆಗೆದುಕೊಂಡ ನಂತರ ನೋಡೋಣ ಎಂದಿತ್ತು ಅವರ ವರಸೆ. ಹಾಗಾಗಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಲು ಸಾಧ್ಯವಿಲ್ಲ ಎಂದರು.

ನಮಗೆ ಮನವರಿಕೆ ಆದ ಒಂದು ವಿಷಯ ಏನೆಂದರೆ, ಶಾಂತಿ, ಅಹಿಂಸೆ ಮಾರ್ಗದಲ್ಲಿ ನಡೆದಿರುವ ನಮ್ಮ ಹೋರಾಟಕ್ಕೆ ಸರಕಾರಗಳು ಕವಡೆ ಕಾಸಿನ ಕಿಮ್ಮತ್ತು ನೀಡುವುದಿಲ್ಲ. ಅದೇನಿದ್ದರೂ ಉಗ್ರ ಸ್ವರೂಪದ ಹಿಂಸಾತ್ಮಕ ಹೋರಾಟ ಮಾಡಬೇಕಾಗಿದೆ ಎಂದು.

ಮತ್ತೊಂದು ಕಡೆ ಶ್ರೀ ವೈಜನಾಥ ಪಾಟೀಲರ ನೇತೃತ್ವದ ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯು ಹಲವಾರು ಹೋರಾಟಗಳನ್ನು ಮಾಡುತ್ತ

ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಮನವಿ ಮಾಡುತ್ತ ಬಂತು. ೨೦೦೧ರಲ್ಲಿ ಈ ರೀತಿಯ ಹೋರಾಟದಿಂದ ಕೇಂದ್ರ ಸರಕಾರ ನಮ್ಮ ಮನವಿಗೆ ಓಗೊಡುವುದಿಲ್ಲ ಎಂದು ಅರಿತ ವೈಜನಾಥ ಪಾಟೀಲರು, ನಾವು ಪ್ರತ್ಯೇಕ ರಾಜ್ಯ ಕೇಳಿದರೆ ಅವರು ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬಹುದು ಎಂದು ಪರಿಗಣಿಸಿ ಅವರು ೨೦೦೧ ನವೆಂಬರ್ ೧ರಂದು ಸಾಂಕೇತಿಕವಾಗಿ ಪ್ರತ್ಯೇಕ ರಾಜ್ಯದ ಧ್ವಜಾರೋಹಣ ಮಾಡಿದರು. ಇದರ ಬೆನ್ನಲ್ಲೇ ರಾಯಚೂರಿನಲ್ಲಿ ಶ್ರೀ ಬಿ. ಬಸವರಾಜಪ್ಪ ವಕೀಲರು, ಮಲ್ಕಪ್ಪ ಪಾಟೀಲ ನೇತೃತ್ವದ ತಂಡ ಪ್ರತ್ಯೇಕ ರಾಜ್ಯದ ಧ್ವಜಾರೋಹಣಕ್ಕೆ ಪ್ರಯತ್ನಿಸಿ ಬಂಧನಕ್ಕೊಳಪಟ್ಟರು, ಬೀದರ, ಕೊಪ್ಪಳದಲ್ಲಿಯು ಇದೇ ರೀತಿಯ ಪ್ರಯತ್ನ ನಡೆಯಿತು.

ಅಲ್ಲಿಂದ ಪ್ರತಿವರ್ಷ ಕರ್ನಾಟಕ ರಾಜ್ಯೋತ್ಸವದ ದಿನದಂದು ಶ್ರೀ ವೈಜನಾಥ ಪಾಟೀಲರ ನೇತೃತ್ವದ ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯು ಕರಾಳ ದಿನವನ್ನು ಆಚರಿಸುತ್ತ ಬಂದಿದೆ. ಇದೇ ವರ್ಷ ಕರಾಳ ದಿನ ಆಚರಣೆಯನ್ನು ಕೇಂದ್ರ ಸರಕಾರ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಲು ಒಪ್ಪಿರುವುದರಿಂದ ಮುಂದೂಡಲಾಯಿತು.

ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯ ನೇತೃತ್ವದಲ್ಲಿ ಈ ಭಾಗದ ಎಲ್ಲ ತಾಲ್ಲೂಕುಗಳಲ್ಲಿ ಗ್ರಾಮಗಳಲ್ಲಿ ಇದರ ಬಗ್ಗೆ ಹೋರಾಟಗಳು ನಡೆದವು. ರಾಯಚೂರಿನ ಶ್ರೀ ಬಿ.ಬಸವರಾಜಪ್ಪ ವಕೀಲರು, ಮಲ್ಕಪ್ಪ ಪಾಟೀಲ, ಲಿಂಗಸೂಗೂರಿನ ಬಸವಂತರಾಯ ಕುರಿ, ಕೊಪ್ಪಳದ ಅಲ್ಲಮಪ್ರಭು ಬೆಟ್ಟದೂರು, ಎಚ್.ಎಸ್.ಪಾಟೀಲ, ಯಾದಗಿರಿಯ ಸುರೇಶ ಸಜ್ಜನ ಮುಂತಾದವರು ಹಲವಾರು ವರ್ಷಗಳಿಂದ ವೈಜನಾಥ ಪಾಟೀಲರ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು ಹೋರಾಟ ಮಾಡುತ್ತ ಬಂದರು.

ಲಿಂಗಸೂಗೂರಿನ ಬಸವಂತರಾಯ ಕುರಿಯವರು ಶಾಲಾ ಕಾಲೇಜುಗಳಿಗೆ ತೆರಳಿ ಉಪನ್ಯಾಸಗಳನ್ನು ನೀಡುತ್ತ ವಿದ್ಯಾರ್ಥಿಗಳಿಗೆ ಹೋರಾಟದ ಕಿಚ್ಚನ್ನು ಹಚ್ಚುವಲ್ಲಿ ಯಶಸ್ವಿಯಾದರು. ವಿದ್ಯಾರ್ಥಿಗಳೊಂದಿಗೆ ಹಲವಾರು ಪ್ರತಿಭಟನೆ, ಬಂದ್ ಅಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಇದೇ ರೀತಿ ರಾಯಚೂರಿನಲ್ಲಿ ನಾನು, ಮಲ್ಕಪ್ಪ ಪಾಟೀಲ್, ಅಂಬಣ್ಣ ಅರೋಲಿ, ಜೆ.ಬಿ.ರಾಜು, ಶಿವಕುಮಾರ ಯಾದವ, ಕೆ.ಪಿ.ಅನೀಲಕುಮಾರ, ಸ್ವಾಮಿ ನಾಯಕ, ಅಶೋಕಕುಮಾರ ಸಿ.ಕೆ.ಜೈನ್ ಮುಂತಾದವರು ಸೇರಿ ೨೦೦೯ರಲ್ಲಿ ರಾಯಚೂರು ಜಿಲ್ಲೆಯ ಸುಮಾರು ಕಾಲೇಜುಗಳಿಗೆ ತೆರಳಿ ಹೈದ್ರಾಬಾದ

– ಕರ್ನಾಟಕದ ಇತಿಹಾಸಕ್ಕೆ ಆದ ಅನ್ಯಾಯ ಮತ್ತು ಪರಿಹಾರ ಕುರಿತು ಸುದೀರ್ಘ ಉಪನ್ಯಾಸಗಳನ್ನು ನೀಡುತ್ತ ಮುಂದಿನ ಹೋರಾಟಕ್ಕೆ ವಿದ್ಯಾರ್ಥಿಗಳನ್ನು ಹುರಿದುಂಬಿಸಿದೆವು. ಆಗಸ್ಟ್ ೪, ೨೦೦೯ರಂದು ನಗರದಲ್ಲಿ ವಿದ್ಯಾರ್ಥಿಗಳೊಂದಿಗೆ ಬೃಹತ್ ಪ್ರತಿಭಟನೆ ಮಾಡಲಾಯಿತು. ಈ ಪ್ರತಿಭಟನೆಯಲ್ಲಿ ಹಿಂದೆಂದೂ ಈ ವಿಷಯಕ್ಕಾಗಿ ಇಷ್ಟೊಂದು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿರಲಾರದಷ್ಟು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನವೆಂಬರ್ ೧, ೨೦೦೯ ರಂದು ರಾಯಚೂರಿನಲ್ಲಿ ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುವ 'ಪತ್ರ ಚಳುವಳಿ' ಹಮ್ಮಿಕೊಂಡಿದ್ದೆವು. ನಗರದ ಪೋಸ್ಟ್ ಆಫೀಸ್ ಹತ್ತಿರ ಒಂದು ಟೆಂಟ್ ಹಾಕಿ ಸಾಯಂಕಾಲದವರೆಗೆ ಸಾವಿರಾರು ಪತ್ರಗಳನ್ನು ಸಾರ್ವಜನಿಕರಿಂದ ಬರೆಯಿಸಲಾಯಿತು. ಆ ಚಳುವಳಿ ಒಳ್ಳೆಯ ಪ್ರತಿಕ್ರಿಯೆಯಿಂದ ಕೂಡಿತ್ತು.

೨೦೧೦ ಜನವರಿ ೨೭ರಂದು ಹಂಪಿಯಲ್ಲಿ ಜರುಗಿದ ಶ್ರೀಕೃಷ್ಣದೇವರಾಯನ ೫೦೦ನೇ ಪಟ್ಟಾಭಿಷೇಕ ಸಮಾರಂಭಕ್ಕೆ ಆಗಮಿಸಿದ ಕೇಂದ್ರ ಗೃಹ ಸಚಿವರಾದ ಮಾನ್ಯ ಪಿ.ಚಿದಂಬರಂ ಅವರನ್ನು ನನ್ನ ನೇತೃತ್ವದ ೩೫ ಜನರ ತಂಡ ಪ್ರತಿಭಟನೆ ಅಥವಾ ಮನವಿ ನೀಡಲು ತಯಾರಾಗಿ, ಎಲ್ಲರು ಒಂದು ಕಪ್ಪು ಧ್ವಜವನ್ನು ತಮ್ಮ ತಮ್ಮಲ್ಲೇ ಇಟ್ಟುಕೊಂಡಿದ್ದೆವು. ೨೬ರ ರಾತ್ರಿ ಈ ಯೋಜನೆಯನ್ನು ನಾವು ಹಮ್ಮಿಕೊಂಡು ಬೆಳಗ್ಗೆ ೫.೩೦ಕ್ಕೆ ರಾಯಚೂರಿನಿಂದ ಹೊರಡಲು ತಯಾರಾಗಿದ್ದೆವು. ಇಡೀ ರಾತ್ರಿ ಈ ಯೋಜನೆ ತಪ್ಪಿಸಲು ಪೋಲಿಸರು ನನ್ನನ್ನು ಹುಡುಕಾಡಿದ್ದರು. ಇದರ ಸುಳಿವರಿತ ನಾನು ಬೇರೆಯವರ ರೂಂನಲ್ಲಿ ಮಲಗಿದ್ದೆ ಮತ್ತು ಬೆಳಗ್ಗೆ ಹನ್ನೊಂದು ಗಂಟೆಗೆ ನಾವು ಹೊಸಪೇಟೆ ಡ್ಯಾಂ ಹತ್ತಿರ ತಲುಪಿದೆವು. ಈ ವಿಷಯವನ್ನು ನಾನು ವೈಜನಾಥ ಪಾಟೀಲರಿಗೆ ತಿಳಿಸಿದ್ದರಿಂದ ಚಿಂಚೋಳಿಯಿಂದ ಒಂದು ತಂಡ ನಮ್ಮ ಜೊತೆಯಾಯಿತು. ನಮಗೆ ಪರಿಚಿತರಿದ್ದ ಒಬ್ಬ ಕಾನ್ಸ್ಟೇಬಲ್ ತನ್ನ ಸ್ವಪ್ರಯತ್ನದಿಂದ ನಮ್ಮನ್ನು ಪಿ.ಚಿದಂಬರಂ ಇವರನ್ನು ಭೇಟಿಯಾಗಲು ಅವಕಾಶ ಕಲ್ಪಿಸಿಕೊಟ್ಟ. ಆದರೆ ಇಬ್ಬರು ಮಾತ್ರ ಭೇಟಿಯಾಗಬಹುದು ಎಂದು ಅಲ್ಲಿಯ ಡಿ.ವೈ.ಎಸ್.ಪಿ.ತಿಳಿಸಿದರು. ನಾನು ಮತ್ತು ಹಿರಿಯ ವಕೀಲರಾದ ಬಿ.ಬಸವರಾಜಪ್ಪ ಹೋಗಲು ಒಪ್ಪಿದೆವು. ಗೃಹ ಸಚಿವರನ್ನು ಭೇಟಿಯಾಗಿ ಮನವಿ ಸಲ್ಲಿಸಿದಾಗ, ಅಲ್ಲೇ ಇದ್ದ ಸಚಿವರಾದ ಶ್ರೀ ಕರುಣಾಕರರೆಡ್ಡಿಯವರು 'ಇಲ್ಲ ಇದು ಬಹಳ ದಿನಗಳ ಬೇಡಿಕೆ, ಹೇಗಾದರೂ ಮಾಡಿ ತಿದ್ದುಪಡಿ ಮಾಡಬೇಕು' ಎಂದು ಗೃಹ ಸಚಿವರಿಗೆ ಮನವರಿಕೆ ಮಾಡಿದರು. ಆದರೆ ಗೃಹ ಸಚಿವರು ನಮ್ಮನ್ನು ಪ್ರತಿಕ್ರಿಯಿಸುತ್ತ 'ಇದು ಇಷ್ಟೊಂದು ಜ್ವಲಂತ ಸಮಸ್ಯೆಯಾಗಿದ್ದರೆ ನಿಮ್ಮ ಭಾಗದ ಜನಪ್ರತಿನಿಧಿಗಳು

ಏನು ಮಾಡುತ್ತಿದ್ದಾರೆ, ಅವರ್‍ಯಾಕೆ ಲೋಕಸಭೆಯಲ್ಲಿ ಪ್ರಶ್ನಿಸುತ್ತಿಲ್ಲ' ಎಂದು ನಮ್ಮನ್ನೇ ಪ್ರಶ್ನಿಸುತ್ತ, 'ನಾನು ಪ್ರಯತ್ನಿಸುತ್ತೇನೆ' ಎಂದು ತಿಳಿಸಿದರು.

ರಾಯಚೂರಿನಲ್ಲಿ ಹಿರಿಯ ನ್ಯಾಯವಾದಿ, ಮಾಜಿ ಶಾಸಕ ಡಿ.ಎಂ.ನಾಗಪ್ಪನವರ ನೇತೃತ್ವದಲ್ಲಿ ಫೆಬ್ರವರಿ ೨೦೧೦ರಲ್ಲಿ ಜಿಲ್ಲಾ ಪಂಚಾಯತ್ ಸಾಮಾನ್ಯ ಮಹಾ ಸಭೆಯ ಮುಂದೆ ಧರಣಿ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಪಂಚಾಯತ್ ರಾಯಚೂರು ವತಿಯಿಂದ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಒಂದು ಸರ್ವಾನುಮತದ ನಿರ್ಣಯವನ್ನು ಮಂಡಿಸಿ ಸರಕಾರಕ್ಕೆ ಕಳಿಸಲಾಯಿತು.

ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ರಾಜು ಕುಳಗೇರಿ ನೇತೃತ್ವದ ಯುವಕರ ತಂಡ ೨೦೦೯ರಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿತ್ತು. ಈ ಧರಣಿ ಸ್ಥಳಕ್ಕೆ ದೇಶದ ಮಾಜಿ ಪ್ರಧಾನಿಗಳಾದ ಶ್ರೀ ಎಚ್.ಡಿ.ದೇವೆಗೌಡರು ಬಂದು ಧರಣಿಯಲ್ಲಿ ಪಾಲ್ಗೊಂಡು 'ಇದಕ್ಕೆ ನಮ್ಮ ಬೆಂಬಲ ಇದೆ. ನಾನು ಲೋಕಸಭೆಯಲ್ಲಿ ಪ್ರಸ್ತಾಪಿಸುತ್ತೇನೆ' ಎಂದು ಹೇಳಿದವರು ಇಂದಿಗೂ ನಾಪತ್ತೆಯಾಗಿರುವುದು ಸೋಜಿಗದ ವಿಷಯ.

೨೦೦೪ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಶ್ರೀ ಎಲ್.ಕೆ.ಅಡ್ವಾಣಿಯವರು ಹುಮನಾಬಾದ ಹೈವೇ ಮುಖಾಂತರ ಹೋಗುವಾಗ ವೈಜನಾಥ ಪಾಟೀಲರ ನೇತೃತ್ವದ ತಂಡ ಅವರನ್ನು ಘೇರಾವ ಹಾಕಿ ಪ್ರತಿಭಟಿಸಿದಾಗ ಇದಕ್ಕೆ ಪ್ರತಿಕ್ರಿಯಿಸುತ್ತ ಈ ಸಲ ನಮ್ಮ ಸರಕಾರ ಬಂದರೆ ಇದನ್ನು ಖಂಡಿತ ನಾನು ಮಾಡುತ್ತೇನೆಂದು ಭರವಸೆ ನೀಡಿದ್ದರು.

ಅದೇ ಸಂದರ್ಭದಲ್ಲಿ ಗುಲ್ಬರ್ಗಾಕ್ಕೆ ಬಂದಿದ್ದ ಕಾಂಗ್ರೆಸ್‌ನ ಯುವರಾಜ ರಾಹುಲ್ ಗಾಂಧಿಯು ಇದೇ ಭರವಸೆ ನೀಡಿದ್ದರು. ಆದರೆ ಅವರದೇ ಸರಕಾರ ಬಂದರೂ ಸಹ ಯಾವುದೇ ಬೆಳವಣಿಗೆ ಆಗಲಿಲ್ಲ. ಶ್ರೀಮತಿ ಸೋನಿಯಾ ಗಾಂಧಿಯವರು ಇದೇ ಭರವಸೆಯನ್ನು ಗುಲ್ಬರ್ಗಾದಲ್ಲಿ ನೀಡಿದ್ದರು. ಅದೂ ಈಡೇರಲಿಲ್ಲ. ಹೀಗೆ ಎಲ್ಲ ರಾಜಕೀಯ ಪಕ್ಷದವರಿಗೆ ಈ ಭಾಗಕ್ಕೆ ಭೇಟಿ ನೀಡಿದಾಗ ಉಚ್ಚರಿಸುವ ಒಂದು ವಿಷಯ ಹೈದ್ರಾಬಾದ - ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ, ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕು ಎಂದಾಗಿ ಹೋಯಿತು. ಅವರ ಮಾತನ್ನು ಕೇಳಿ ಸಂತೋಷಪಟ್ಟ ಈ ಭಾಗದ ಜನರಿಗೆ ಯಾವುದೇ ಲಾಭವಾಗಲಿಲ್ಲ.

ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯು ೨೦೧೦ ಫೆಬ್ರವರಿ ೨೫ ರಂದು ಗುಲ್ಬರ್ಗಾ, ಯಾದಗಿರ, ಬೀದರ ಮತ್ತು ರಾಯಚೂರ ಬಂದ್ ಮಾಡಲು ನಿರ್ಧರಿಸಿತ್ತು. ನಾವು ರಾಯಚೂರಿನಲ್ಲಿ ಹಿರಿಯ ಹೋರಾಟಗಾರರಾದ

ರಾಘವೇಂದ್ರ ಕುಷ್ಟಗಿ ಅವರ ನಾಯಕತ್ವದಲ್ಲಿ ಬಂದ ಮಾಡಲು ಎಲ್ಲ ಶಾಲಾ ಕಾಲೇಜು, ಸಂಘ ಸಂಸ್ಥೆಗಳಲ್ಲಿ ಮನವಿ ಮಾಡುತ್ತ, ತಯಾರಿ ನಡೆಸಿದ್ದೆವು. ೨೫ ರಂದು ಎಲ್ಲ ಕಡೆ ಏಕಕಾಲಕ್ಕೆ ಬಂದ್ ಆಚರಿಸಲಾಯಿತು. ಬಂದ್‌ಗೆ ಎಲ್ಲ ಕಡೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಮಾರ್ಚ್ ೧, ೨೦೧೦ರಂದು ಸಾಯಂಕಾಲ ೫.೦೦ ಗಂಟೆಗೆ ಹೈದ್ರಾಬಾದ - ಕರ್ನಾಟಕದ ಎಲ್ಲ ಶಾಸಕರು, ಮಾಜಿ ಶಾಸಕರು, ಸಂಸದರು, ಸಂಘಟನೆಗಳ ಒಂದು ಸಭೆಯನ್ನು ಈ ಭಾಗದ ಶಾಸಕರಾದ ಶ್ರೀ ಅಮರೇಗೌಡ ಬಯ್ಯಾಪುರ ಹಾಗೂ ಡಾ.ಶರಣ ಪ್ರಕಾಶ ಪಾಟೀಲ್ ಇವರು ಜಂಟಿಯಾಗಿ ಮಾಜಿ ಸಚಿವರಾದ ಶ್ರೀ ವೈಜನಾಥ ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಶಾಸಕರ ಭವನ ಬೆಂಗಳೂರಿನಲ್ಲಿ ಕರೆದಿದ್ದರು. ಈ ಸಭೆಗೆ ಸಚಿವರಾದ ಶ್ರೀ ಶಿವನಗೌಡ ನಾಯಕ, ಶಿವರಾಜ ತಂಗಡಗಿ, ಶಾಸಕರಾದ ಈಶಣ್ಣ ಗುಳಗಣ್ಣ ಹೊರತು ಪಡಿಸಿ ಈ ಭಾಗದ ಉಳಿದ ಎಲ್ಲ ಶಾಸಕರು ಭಾಗವಹಿಸಿದ್ದರು. ಮಾಜಿ ಮುಖ್ಯಮಂತ್ರಿಗಳು, ಸಂಸದರಾದ ಎನ್.ಧರ್ಮಸಿಂಗ್, ಮಾಜಿ ಸಚಿವರಾದ ಭೀಮಣ್ಣ ಖಂಡ್ರೆ ಮುಖಂಡರಾದ ಶ್ರೀ ಶರಣಪ್ಪ ಮೇಟಿ, ಕೊಪ್ಪಳ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಬಸವರಾಜ, ನಾನು, ರಾಘವೇಂದ್ರ ಕುಷ್ಟಗಿ, ಬಸವಂತರಾಯ ಕುರಿ, ಮಲ್ಕಪ್ಪ ಪಾಟೀಲ್, ಅಶೋಕಕುಮಾರ ಸಿ.ಕೆ. ಜೈನ್, ಅಂಬಣ್ಣ ಅರೋಲಿ, ಜೆ.ಬಿ.ರಾಜು, ಲಕ್ಷ್ಮಣ ದಸ್ತಿ, ಶರಣಪ್ಪ ಖಣದಾಳ, ಶರಣು ಬಿ. ಗದ್ದುಗೆ ಮುಂತಾದವರು ಪಾಲ್ಗೊಂಡಿದ್ದರು. ಈ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆದು ಬೆಳಿಗ್ಗೆ ಮುಖ್ಯಮಂತ್ರಿಗಳನ್ನು ಭೇಟಿಯಾಗಬೇಕೆಂದು ತೀರ್ಮಾನಿಸಲಾಗುತಿತ್ತು. ಆದರೆ ಸಭೆಯಲ್ಲಿ ಹಾಜರಿದ್ದ ಔರಾದ ಕ್ಷೇತ್ರದ ಶಾಸಕರು ನಾಳೆ ಇಷ್ಟು ಜನ ಸೇರುವುದು ಕಷ್ಟ ಈಗಲೇ ಭೇಟಿಯಾಗೋಣವೆಂದು, ರಾತ್ರಿ ೮.೩೦ರ ಸಮಯ ಮುಖ್ಯಮಂತ್ರಿಗಳ ಕಛೇರಿಗೆ ಫೋನಾಯಿಸಿ ನಾವು ಭೇಟಿಯಾಗಬೇಕಾಗಿದೆ ಎಂದು ತಿಳಿಸಿದರು. ಅದು ಬಿ.ಬಿ.ಎಮ್.ಪಿ. ಚುನಾವಣೆ ಸಮಯವಾದ್ದರಿಂದ ಮುಖ್ಯಮಂತ್ರಿಗಳನ್ನು ಎರಡು ದಿನಗಳ ಮಟ್ಟಿಗೆ ಭೇಟಿ ಅಸಾಧ್ಯ ಎಂದು ಕಛೇರಿಯ ಅಧಿಕಾರಿ ತಿಳಿಸಿದರು. ಆದರೆ ಆ ಶಾಸಕರು ಈಗಲೇ ಎಲ್ಲರು ಹೋಗೋಣ ನಡೆಯಿರಿ ಎಂದು ಎಲ್ಲರನ್ನು ಕರೆದುಕೊಂಡು ವಿಧಾನಸೌಧ ಮೂರನೇ ಮಹಡಿಯ ಮುಖ್ಯಮಂತ್ರಿಗಳ ಕಛೇರಿಗೆ ತಲುಪಿದೆವು. ಸುಮಾರು ೩೦೦ ಜನರಿದ್ದ ನಮ್ಮನ್ನು ನೋಡಿ ಹೌಹಾರಿದ ಅಧಿಕಾರಿಗಳು ನಮ್ಮನ್ನು ಸಮೀಪದ ಸಭಾಂಗಣಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಧಾವಿಸಿದ ಶ್ರೀ ಬಿ.ಎಸ್.ಯಡಿಯೂರಪ್ಪ, ಸಂಸದರಾದ ಶ್ರೀ ಅನಂತಕುಮಾರ ಸಭೆಯಲ್ಲಿ ಭಾಗವಹಿಸಿದರು. ನಾವೆಲ್ಲರೂ ಸಂವಿಧಾನದ ೩೭೧ನೇ ಕಲಂ

ತಿದ್ದುಪಡಿಯಾಗಬೇಕೆಂದು ವಿಧಾನ ಸಬೆಯ ಎರಡು ಸದನದಲ್ಲಿ ನಿರ್ಣಯ ಅಂಗಿಕರಿಸಿ ಕೇಂದ್ರ ಸರಕಾರಕ್ಕೆ ಕಳುಹಿಸಬೇಕೆಂದು ಒತ್ತಾಯಿಸಿದೆವು. ಇದಕ್ಕೆ ಪ್ರತಿಕ್ರಿಯಿಸುತ್ತಾ ವಿರೋದ ಪಕ್ಷದ ನಾಯಕರನ್ನು ಕೇಳಬೇಕಾಗುತ್ತದೆ, ನಾನೊಬ್ಬನೇ ಏನು ಮಾಡಲು ಆಗುವುದಿಲ್ಲ ಎಂದು ಕೈಚೆಲ್ಲಿದರು. ಅಲ್ಲಿಯೇ ಇದ್ದ ಬೀದರ ಶಾಸಕ ಬಂಡೆಪ್ಪ ಕಾಶಂಪುರವರು ವಿರೋದ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರಿಗೆ, ಅಮರೇಗೌಡ ಬಯ್ಯಾಪುರ ಹಾಗೂ ಡಾ.ಶರಣ ಪ್ರಕಾಶ ಪಾಟೀಲ್‌ರು ಒಪ್ಪಿಸುತ್ತಾರೆ, ಶ್ರೀ ಎಚ್.ಡಿ.ರೇವಣ್ಣ ಇವರನ್ನು ನಾನು ಒಪ್ಪಿಸುತ್ತೇನೆ, ಅದು ನಮ್ಮ ಜವಾಬ್ದಾರಿ, ನಿಮ್ಮ ಒಪ್ಪಿಗೆ ಇದ್ದರೆ ಹೇಳಿ ಎಂದು ಖಾರವಾಗಿ ನುಡಿದರು. ಮುಖ್ಯಮಂತ್ರಿಗಳು ಆಯಿತು ಇದೇ ಅಧಿವೇಶನದಲ್ಲಿ ನಿರ್ಣಯ ಅಂಗೀಕರಿಸೋಣ ಎಂದು ಒಪ್ಪಿದರು.

ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ದಿನಾಂಕ ೧೭ ಮತ್ತು ೧೮ ನೇ ಮಾರ್ಚ ೨೦೧೦ ರಂದು ಕ್ರಮವಾಗಿ ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಿ ಕೇಂದ್ರ ಸರಕಾರಕ್ಕೆ ಕಳಿಸಲಾಯಿತು. ಆದರೆ ಕೇಂದ್ರ ಸರಕಾರ ಅದಕ್ಕೂ ಕ್ಯಾರೆ ಅನ್ನದೇ ಹಾಗೇ ಮೂಲೆಗುಂಪು ಮಾಡಿತು.

೨೦೧೧ ಜನವರಿ ತಿಂಗಳಲ್ಲಿ ರಾಜ್ಯಸಭಾ ಸದಸ್ಯರಾದ ಶ್ರೀ ಕೆ.ಬಿ.ಶಾಣಪ್ಪ ಇವರು ರಾಜ್ಯಸಭೆಯಲ್ಲಿ ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೇಂದು ಒಂದು ಖಾಸಗಿ ಮಸೂದೆ ಮಂಡಿಸಿ ಸುಧೀರ್ಘವಾಗಿ ಮಾತನಾಡಿದರು. ಇದಕ್ಕೆ ಪ್ರತಿಕ್ರಿಯಿಸುತ್ತ ಮಾತನಾಡಿದ ಗೃಹ ಸಚಿವರಾದ ಪಿ.ಚಿದಂಬರಂ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಸಾಧ್ಯವಿಲ್ಲ ಎಂದು ತಿರಸ್ಕರಿಸಿದರು. ಇದಕ್ಕೆ ತೀಕ್ಷಣವಾಗಿ ಪ್ರತಿಕ್ರಿಯಿಸಿದ ಈ ಭಾಗದ ಜನ ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯ ನೇತೃತ್ವದಲ್ಲಿ ಚಿದಂಬರಂ ಪ್ರತಿಕೃತಿ ದಹಿಸಿದರು. ಬೀದರನಲ್ಲಿ ಸಂಸದರಾದ ಧರ್ಮಸಿಂಗ್ ಪ್ರತಿಕೃತಿ ದಹಿಸಿ ಪ್ರತಿಭಟಿಸಿದರು. ಈ ಪ್ರತಿಭಟನೆಗೆ ಪ್ರತಿಕ್ರಿಯಿಸಿದ ಧರ್ಮಸಿಂಗ್ ಮರುದಿನ ಲೋಕಸಭೆಯಲ್ಲಿ ಈ ವಿಷಯನ್ನು ಪ್ರಸ್ತಾಪಿಸುತ್ತ ಪಿ.ಚಿದಂಬರಂ ಉತ್ತರವನ್ನು ಆಕ್ಷೇಪಿಸಿ ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯ ತೀವ್ರತೆಯನ್ನು ಅರಿತ ರಾಜ್ಯದ ಮುಖ್ಯಮಂತ್ರಿಗಳು ಸರ್ವಪಕ್ಷ ನಿಯೋಗ ಒಯ್ಯುತ್ತೇನೆಂದು ಘೋಷಿಸಿದರು. ಕಾಟಾಚಾರಕ್ಕೆ ಹತ್ತು ವಿಷಯಗಳೊಂದಿಗೆ ಕೊನೆಯ ವಿಷಯವಾಗಿ ಹೈದ್ರಾಬಾದ - ಕರ್ನಾಟಕಕ್ಕೆ

ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಮನವಿ ನೀಡಿ ಕೈತೊಳೆದುಕೊಂಡರು.

ನಾನು ಮತ್ತು ರಾಘವೇಂದ್ರ ಕುಷ್ಟಗಿಯವರು ಹೋರಾಟವನ್ನು ಜನರ ಬಳಿಗೆ ಒಯ್ಯಬೇಕು ಎಂದು ತೀರ್ಮಾನಿಸಿ ಒಂದು ಹೊಸ ಯೋಜನೆಯನ್ನು ಮಾಡಿದೆವು. ಅದರ ಮುಖಾಂತರ ಜನರಿಗೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯಿಂದ ಆಗುವ ಲಾಭಗಳ ಕುರಿತು ಅರಿವು ಮೂಡಿಸಿ ಹೋರಾಟಕ್ಕೆ ಪ್ರೇರೇಪಿಸುವುದು ಎಂದಾಗಿತ್ತು. ಅದಕ್ಕಾಗಿ ಕೊಪ್ಪಳದಿಂದ ಗುಲ್ಬರ್ಗಾದವರೆಗೆ ಜನಜಾಗೃತಿ ಜಾಥಾ ಮಾಡಬೇಕೆಂದು ನಿರ್ಧರಿಸಲಾಗಿತ್ತು. ಈ ವಿಷಯವನ್ನು ಗುಲ್ಬರ್ಗಾದಲ್ಲಿ ಕರೆಯಲಾದ ಹೈದ್ರಾಬಾದ – ಕರ್ನಾಟಕ ಹೋರಾಟ ಸಮಿತಿಯ ಸಭೆಯಲ್ಲಿ ಮಂಡಿಸಲಾಯಿತು. ಸಭೆಯು ಒಕ್ಕೊರಲಿನಿಂದ ಒಪ್ಪಿಗೆ ಸೂಚಿಸಿತು. ಅದರ ಯೋಜನೆ ರೂಪಿಸಲು ನನಗೆ ಅವಕಾಶ ನೀಡಲಾಯಿತು. ಮಾನ್ಯ ವೈಜನಾಥ ಪಾಟೀಲರು ಜನಜಾಗೃತಿ ಜಾಥಾದ ಯೋಜನೆಯನ್ನು ರಾಯಚೂರಿನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸಿದರು. ಅದರ ಪ್ರಕಾರ ಜಾಥಾ ಕೊಪ್ಪಳದಿಂದ ಎಪ್ರಿಲ್ ೨೧ರಂದು ಪ್ರಾರಂಭವಾಗಬೇಕು ಹತ್ತು ದಿನಗಳ ಕಾಲ ಈ ಭಾಗದ ಎಲ್ಲ ತಾಲ್ಲೂಕುಗಳ ಮತ್ತು ಹೋಬಳಿಗಳ ಮುಖಾಂತರ ಸಾಗಿ ಕೊನೆಗೆ ಗುಲ್ಬರ್ಗಾದಲ್ಲಿ ೩೦ನೇ ಏಪ್ರಿಲ್‌ಗೆ ಸಮಾರೋಪಗೊಳ್ಳಬೇಕು ಎಂದು ನಿರ್ಧರಿಸಲಾಗಿತ್ತು. ಇದರ ಸಿದ್ಧತೆಯನ್ನು ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ನಾನು ಮತ್ತು ರಾಘವೇಂದ್ರ ಕುಷ್ಟಗಿಯವರು ವಹಿಸಿದೆವು. ಯಾದಗಿರ, ಬೀದರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸ್ವತ ತಾವೇ ಮಾಡುತ್ತೇನೆಂದು ವೈಜನಾಥ ಪಾಟೀಲರು ತಯಾರಾದರು.

ಒಂದು ತಿಂಗಳ ಕಾಲ ಹಗಲು ರಾತ್ರಿ ನಾನು ಮತ್ತು ರಾಘವೇಂದ್ರ ಕುಷ್ಟಗಿಯವರು ಪ್ರತಿ ತಾಲ್ಲೂಕು ಮತ್ತು ಹೋಬಳಿಗಳಿಗೆ ಎಲ್ಲಿ ಜನಜಾಗೃತಿ ಸಭೆಗಳನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಗಿತ್ತು ಅಲ್ಲಿಗೆ ಕನಿಷ್ಟ ಎರಡು ಬಾರಿ ಭೇಟಿ ನೀಡಿ ಅಲ್ಲಿಯ ಜನಪ್ರತಿನಿಧಿಗಳು, ಹೋರಾಟಗಾರರು, ಹಿರಿಯರು, ಬುದ್ದಿಜೀವಿಗಳು, ಸಂಘ ಸಂಸ್ಥೆಗಳ ಮುಖಂಡರ ಸಭೆ ಮಾಡಿ, ಒಂದು ಜಾಥಾ ಸ್ವಾಗತ ಸಮಿತಿ ಮಾಡಿ, ಅದರ ಜವಾಬ್ದಾರಿಯನ್ನು ಅಲ್ಲಿಯ ಶಾಸಕರಿಗೆ ನೀಡಲಾಗಿತ್ತು. ಹೀಗೆ ನಿರಂತರ ಭೇಟಿ ಮತ್ತು ಸಭೆಗಳ ಮುಖಾಂತರ ಜನಜಾಗೃತಿ ಜಾಥಾಗೆ ಜನರನ್ನು ಎಚ್ಚರಗೊಳಿಸಲಾಗಿತ್ತು.

ಏಪ್ರಿಲ್ ೨೧ನೇ ತಾರೀಖು ಕೊಪ್ಪಳದಿಂದ ಜಾಥಾ ಉದ್ಘಾಟನೆ ಆಗಬೇಕೆಂದು, ಕೊಪ್ಪಳದ ಗವಿಮಠ ಸ್ವಾಮಿಗಳಿಂದಲೇ ಉದ್ಘಾಟನೆ ಆಗಬೇಕೆಂದು

ನಿಶ್ಚಯಿಸಲಾಗಿತ್ತು. ನಗರದ ಸಾರ್ವಜನಿಕ ಮೈದಾನದಲ್ಲಿ ಭವ್ಯವಾದ ವೇದಿಕೆ ಹಾಕಲಾಗಿತ್ತು.

ಶ್ರೀ ವೈಜನಾಥ ಪಾಟೀಲರು, ರಾಘವೇಂದ್ರ ಕುಷ್ಟಗಿಯವರು, ನಾನು, ಬಸವಂತರಾಯ ಕುರಿ ಎಲ್ಲರೂ ೨೦ನೇ ತಾರೀಖು ರಾತ್ರಿನೇ ಅಲ್ಲಿಗೆ ತಲುಪಿದ್ದೆವು. ಮರುದಿನ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಾವಿರಾರು ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಮುಖಂಡರು, ಆಟೋ ಚಾಲಕರು, ಹಮಾಲರು, ಗವಿಮಠದ ಮುಂದೆ ಜಮಾಯಿಸಿದ್ದರು. ಗವಿಮಠ ಸ್ವಾಮಿಗಳು ಜಾಥಾಗೆ ಚಾಲನೆ ನೀಡಿದರು. ಜನಸಾಗರವೇ ಆ ಜಾಥಾದಲ್ಲಿ ಭಾಗವಹಿಸಿತ್ತು. ನಗರದ ಎಲ್ಲ ಆಟೋ ಚಾಲಕರು ತಮ್ಮ ಆಟೋಗಳ ಸಮೇತ ಭಾಗವಹಿಸಿದ್ದು ವಿಶೇಷವಾಗಿತ್ತು. ಮೆರವಣಿಗೆ, ಘೋಷಣೆ ಮೊಳಗಿಸುತ್ತಾ ವೇದಿಕೆಗೆ ಬಂದು ಸೇರಿತು. ವೇದಿಕೆಯಲ್ಲಿ ಹೈದ್ರಾಬಾದ – ಕರ್ನಾಟಕದ ಇತಿಹಾಸ, ಸಮಸ್ಯೆಗಳು, ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡುವ ಮೂಲಕ ಆಗುವ ಲಾಭಗಳ ಕುರಿತು ವೈಜನಾಥ ಪಾಟೀಲರು, ಬಸವಂತರಾಯ ಕುರಿ ಮತ್ತು ನಾನು ಸುದೀರ್ಘವಾಗಿ ಜನರಿಗೆ ತಿಳಿ ಹೇಳಿದೆವು. ರಾಘವೇಂದ್ರ ಕುಷ್ಟಗಿಯವರು ಹೋರಾಟ ಹೇಗಿರಬೇಕು, ನಾವು ಏನು ಮಾಡಬೇಕೆಂದು ಮನ ಮುಟ್ಟುವಂತೆ ಮಾತನಾಡಿದರು. ಗವಿಮಠದ ಸ್ವಾಮಿಗಳು ಈ ಹೋರಾಟಕ್ಕೆ ತಮ್ಮದು ಸದಾ ಬೆಂಬಲವಿರುತ್ತದೆ ಎಂದು ಘೋಷಿಸಿದರು. ಸಂಸದರಾದ ಶ್ರೀ ಶಿವರಾಮೇಗೌಡ, ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ, ಮಾಜಿ ಶಾಸಕರಾದಂತಹ ಸಂಗಣ್ಣ ಕರಡಿ, ಶಾಸಕರಾದ ಅಮರೇಗೌಡ ಬಯ್ಯಾಪುರ, ಶ್ರೀಮತಿ ಲಲಿತಾರಾಣಿ ಶ್ರೀರಂಗದೇವರಾಯಲು, ಕೊಪ್ಪಳ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಎನ್. ಬಿಲಗಾರ, ಮಾಜಿ ಶಾಸಕರಾದ ಬಸವರಾಜ ಹಿಟ್ನಾಳ, ಅಂದಾನಪ್ಪ ಅಗಡಿ, ಭಾಗವಹಿಸಿದ್ದರು. ಸ್ಥಳೀಯ ಯುವಕರಾದ ಮಾಜಿ ನಗರಸಭಾ ಅಧ್ಯಕ್ಷರಾದ ಚಂದ್ರಶೇಖರ ಕವಲೂರು, ಶಿವಕುಮಾರ ಕುಕನೂರು, ಸಂತೋಷ ದೇಶಪಾಂಡೆ, ವೀರೇಶ ಮಹಾಂತಯ್ಯನ್ ಮಠ, ಜಗದೀಶ ಗೌಡ, ರಾಜಾಬಕ್ಷಿ, ಹುಸೇನಬಾಷಾ, ಸಿರಾಜ ಬೀಸನಳ್ಳಿ, ಮುಂತಾದವರು ಬಹಳಷ್ಟು ಆಸಕ್ತಿ ವಹಿಸಿ ಈ ಕಾರ್ಯಕ್ರಮ ನಡೆಸಿದ್ದರು.

ನಮ್ಮ ಜಾಥಾ ಇರಕಲ್ ಗಡ, ಬೇವೂರು ಮುಖಾಂತರ ರಾತ್ರಿ ೭.೦೦ ಗಂಟೆಗೆ ಕುಷ್ಟಗಿ ತಲುಪಿತ್ತು. ಅಲ್ಲಿ ಸಾವಿರಾರು ಜನರೊಂದಿಗೆ ಶಾಸಕರಾದ ಅಮರೇಗೌಡ ಬಯ್ಯಾಪುರ, ಮಾಜಿ ಶಾಸಕರಾದ ಕೆ.ಶರಣಪ್ಪ, ದೊಡ್ಡನಗೌಡ ಪಾಟೀಲ, ಹಸನಸಾಬ ದೋಟಿಹಾಳ, ಬಸನಗೌಡ ಪಾಟೀಲ್ ಜಾಥಾ ಸ್ವಾಗತಿಸಲು

ಸಜ್ಜಾಗಿದ್ದರು. ಭವ್ಯವಾದ ಮೆರವಣಿಗೆ ನಂತರ ಅಲ್ಲಿ ಬೃಹತ್ ಸಭೆ ಏರ್ಪಡಿಸಲಾಗಿತ್ತು, ಸಭೆಯ ನಂತರ ನಾವು ಅಲ್ಲಿಯೇ ವಾಸ್ತವ್ಯ ಮಾಡಿದೆವು.

ಮರುದಿನ ಬೆಳಗ್ಗೆ ಜಾಥಾ ಮಸ್ಕಿಮರ, ತಾವರಗೇರಾ, ಕನಕಗಿರಿ ಗ್ರಾಮಗಳಲ್ಲಿ ಬೃಹತ್ ಸಭೆಗಳನ್ನು ಏರ್ಪಡಿಸುತ್ತ ವಿಷಯವನ್ನು ಜನರಿಗೆ ತಿಳಿಸುವ ಮುಖಾಂತರ ಗಂಗಾವತಿಗೆ ಸಾಯಂಕಾಲ ೫.೦೦ ಗಂಟೆಗೆ ತಲುಪಿದೆವು. ಅಲ್ಲಿಯೂ ಜಾಥಾ ಸ್ವಾಗತಿಸಲು ಹಬ್ಬದ ಸಂಭ್ರಮದ ಜೊತೆಗೆ ಹೋರಾಟದ ಹುರುಪಿನಿಂದ ಜನ ಸೇರಿದ್ದರು. ನಮ್ಮನ್ನು ಈ ಭಾಗದ ಹಿರಿಯ ರಾಜಕಾರಣಿ, ಮಾಜಿ ಸಂಸದರಾದ ಎಚ್.ಜಿ. ರಾಮುಲು, ಸಂಸದರಾದ ಶಿವರಾಮೆಗೌಡ, ಶಾಸಕರಾದ ಪರಣ್ಣ ಮುನವಳ್ಳಿ, ಮಾಜಿ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪ, ಛತ್ರದ ಮರಿಯಪ್ಪ, ಶ್ರೀಮತಿ ಲಲಿತಾರಾಣಿ ಶ್ರೀರಂಗದೇವರಾಯಲು ಮುಂತಾದವರು ಸ್ವಾಗತಿಸಿದರು. ನಗರದ ಪ್ರಮುಖ ಬೀದಿಗಳಲ್ಲಿ ಭವ್ಯವಾದ ಮೆರವಣಿಗೆ ನಂತರ ಸರಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಬೃಹತ್ ಸಭೆ ಏರ್ಪಡಿಸಲಾಗಿತ್ತು, ಗಂಗಾವತಿಯ ಯುವಕರಾದ ಎ.ಕೆ. ಮಹೇಶಕುಮಾರ, ನಾಗರಾಜ, ಅನೀಲ ಮುಂತಾದವರ ಪಡೆ ಬಹಳ ಶ್ರಮ ಪಟ್ಟಿತ್ತು. ಸಭೆಯ ನಂತರ ನಾವು ಅಲ್ಲಿಯೇ ವಾಸ್ತವ್ಯ ಮಾಡಿದೆವು.

ಬೆಳಗ್ಗೆ ೯.೩೦ಗಂಟೆಗೆ ನಾವು ಕಾರಟಗಿಗೆ ಹೋಗಲು ತಯಾರಾಗಿದ್ದೆವು, ಆಗ ಸಮೀಪದ ಮರಕುಂಬಿ ಮಠದ ಶ್ರೀ.ಮ.ನಿ.ಪ್ರ.ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮರಳಿಯವರು ತಮ್ಮ ಮಠಕ್ಕೆ ಭೇಟಿ ನೀಡಬೇಕೆಂದು ಕೋರಿದರು. ನಾವು ತಕ್ಷಣ ಅಲ್ಲಿಗೆ ಹೋದಾಗ, ಸ್ವಾಮಿಗಳು ನಮ್ಮಲ್ಲಿ ವಿದ್ಯಾರ್ಥಿಗಳು ಬಹಳಷ್ಟಿದ್ದಾರೆ ಅವರಿಗೂ ವಿಷಯ ತಿಳಿಸಬೇಕೆಂದು ಒತ್ತಾಯಿಸಿದರು. ಅಲ್ಲಿ ಸುಮಾರು ಒಂದೂವರೆ ತಾಸು ಕಾರ್ಯಕ್ರಮವಾಯಿತು. ನಂತರ ಅಲ್ಲಿಂದ ಬೀಳ್ಕೊಟ್ಟು ಮುಂದೆ ಕಾರಟಗಿಗೆ ಪ್ರಯಾಣ ಬೆಳೆಸುತ್ತಿರುವಾಗ ಮಧ್ಯದಲ್ಲಿ ಸಿದ್ದಾಪುರದ ಜನ ನಡು ರಸ್ತೆಯಲ್ಲಿ ನಮ್ಮನ್ನು ಬೃಹತ್ ಹೂವಿನ ಹಾರದೊಂದಿಗೆ ಸ್ವಾಗತ ಕೋರಲು ನಿಂತು ನಮ್ಮನ್ನೂ ಸಿದ್ದಾಪುರ ಗ್ರಾಮದಲ್ಲಿ ಒಂದು ಸುತ್ತು ಜಾಥಾ ವಾಹನ ಬರಬೇಕೆಂದು ಒತ್ತಾಯಿಸಿದರು. ಅಲ್ಲಿಗೆ ಕಾರಟಗಿ ಜನರ ಸಂಯಮ ಮೀರಿಹೋಗಿ ನಮ್ಮನ್ನು ಕರೆದುಕೊಂಡು ಹೋಗಲು ಸಿದ್ದಾಪುರಕ್ಕೆ ನೂರಾರು ವಾಹನಗಳೊಂದಿಗೆ ಯುವಕರು ಬಂದೆ ಬಿಟ್ಟರು. ಕಾರಟಗಿಗೆ ತಲುಪುವುದರೊಳಗೆ ಮಧ್ಯಾಹ್ನ ೩ ಗಂಟೆ, ಅಲ್ಲಿ ಇಡೀ ಊರಿನ ಜನ ನಮ್ಮನ್ನೂ ಮೆರವಣಿಗೆ ಮೂಲಕ ವೇದಿಕೆಗೆ ಕರೆದುಕೊಂಡು ಹೋದರು. ಕಾರಟಗಿಯ

ಶಿವಶರಣಗೌಡ, ಪ್ರಭು ಉಪನಾಳ, ಶಿವರೆಡ್ಡಿ ನಾಯಕ, ಕೆ.ಪ್ರಕಾಶ, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಅಮರೇಶ ಕುಳಗಿ, ಬಸವರಾಜ ಪಗಡದಿನ್ನಿ, ಪುರುಷೋತ್ತಮ್, ಎಸ್.ಶೇಖರಗೌಡ ಇವರ ಹುಮ್ಮಸ್ಸು ಹೇಳತೀರಲಾರದ್ದು.

ಹೀಗೆ ಜಾಥಾ ಸಾಗುತ್ತ ಸಿಂಧನೂರು, ಮಸ್ಕಿ, ಲಿಂಗಸೂಗೂರು, ಹಟ್ಟಿ ಚಿನ್ನದ ಗಣಿ, ಕವಿತಾಳ, ಸಿರವಾರ, ಮಾನವಿ, ರಾಯಚೂರು, ದೇವದುರ್ಗ, ಸುರಪುರ, ಶಹಾಪುರ, ಯಾದಗೀರ್, ಚಿತ್ತಾಪುರ, ಸೇಡಂ, ಹುಮನಾಬಾದ, ಬಸವಕಲ್ಯಾಣ, ಬೀದರ್ ದಿಂದ ೩೦ನೇ ಎಪ್ರಿಲ್ ೨೦೧೧ ರಂದು ಗುಲ್ಬರ್ಗಾದಲ್ಲಿ ಸಮಾರೋಪ ಸಭೆಯ ನಂತರ ಮುಕ್ತಾಯವಾಯಿತು. ಈ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್, ಶಾಸಕರಾದ ದೊಡ್ಡನಗೌಡ ಪರಿಬೋಳ, ಅಮರೇಗೌಡ ಬಯ್ಯಾಪುರ, ಸಂಗಣ್ಣ ಕರಡಿ ಭಾಗವಹಿಸಿದ್ದರು.

ಜಾಥಾ ಈ ಭಾಗದಲ್ಲಿ ಹೊರಟಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಬೀದರ ಭೇಟಿಯ ಸಮಯದಲ್ಲಿ ಇನ್ನೂ ಹದಿನೈದು ದಿನಗಳಲ್ಲಿ ಕೇಂದ್ರ ಸರಕಾರ ಇದಕ್ಕೆ ನಿರ್ಧಿಷ್ಟ ಸಮಯ ನಿಗದಿ ಮಾಡದೇ ಇದ್ದರೆ ನಾನೇ ಮುಂದಾಗಿ ಹೈದ್ರಾಬಾದ - ಕರ್ನಾಟಕ ಬಂದ್ ಮಾಡುತ್ತೇನೆಂದು ಘೋಷಿದ್ದರು, ಒಂದು ತಿಂಗಳ ನಂತರ ಮಾನ್ಯ ಬಿ.ಎಸ್.ಯಡಿಯೂರಪ್ಪವರು ರಾಯಚೂರಿಗೆ ಭೇಟಿ ಕೊಟ್ಟಾಗ ಬಂದ್ ಮಾಡುವ ವಿಷಯ ಕೇಳಿದರೆ, ಇಲ್ಲ ಇನ್ನೊಂದು ವಾರದಲ್ಲಿ ಗುಲ್ಬರ್ಗಾದಲ್ಲಿ ಧರಣಿ ಕೂಡುತ್ತೇನೆಂದು ಬೊಗಳೆ ಬಿಟ್ಟಿದ್ದರು. ಅದಾದ ಹದಿನೈದು ದಿನಗಳ ನಂತರ ಕೊಪ್ಪಳಕ್ಕೆ ಬಂದ ಬಿ.ಎಸ್.ಯಡಿಯೂರಪ್ಪನವರನ್ನು ಈ ವಿಷಯ ನೆನಪಿಸಿದರೆ, ಈ ಅಧಿವೇಶನ ಮುಗಿದ ಮೇಲೆ ಮತ್ತೊಂದು ಸಲ ಸರ್ವಪಕ್ಷ ನಿಯೋಗ ಕೊಂಡೊಯ್ಯುತ್ತೇನೆಂದು ಹೇಳಿದರು. ಹೀಗೆ ಒಂದು ಸುಳ್ಳು ಮುಚ್ಚಲು ಮತ್ತೊಂದು ಸುಳ್ಳು ಹೇಳುತ್ತಾ ಸಾಗಿದ ಬಿ.ಎಸ್.ಯಡಿಯೂರಪ್ಪ ತನ್ನ ಅಧಿಕಾರ ಕಳೆದುಹೋದರೂ ಯಾವುದು ಮಾಡಲಿಲ್ಲ.

ಇದಕ್ಕೆ ನಾವೇ ಏನಾದರು ಮಾಡಬೇಕೆಂದು ೧೦ ನೇ ಆಗಸ್ಟ್ ೨೦೧೧ರಂದು ದೆಹಲಿಯ ಜಂತರ ಮಂತರನಲ್ಲಿ ಧರಣಿ ಕೂಡಲು ನಿರ್ಧರಿಸಿ, ಎರಡು ತಿಂಗಳು ಮೊದಲಿನಿಂದಲೇ ಹೈದ್ರಾಬಾದ - ಕರ್ನಾಟಕ ಹೋರಾಟ ಸಮಿತಿಯ ಸುಮಾರು ೬೫೦ ಜನ ಹೋರಾಟಗಾರರ ಮುಂಗಡ ಟಿಕೆಟ್ ಬುಕ್ ಮಾಡಿಸಿ ದೆಹಲಿಗೆ ಹೋದೆವು. ನಾವು ಧರಣಿ ಕೂಡುವ ಒಂದು ದಿನ ಮೊದಲೇ ಅಂದರೆ ೯ ನೇ ಆಗಸ್ಟ್ ೨೦೧೧ರಂದು ಕೇಂದ್ರ ಕಾರ್ಮಿಕ ಸಚಿವರಾದ

ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದ ತಂಡ ಗೃಹ ಸಚಿವರನ್ನು ಭೇಟಿ ಮಾಡಿ ಈ ವಿಷಯವನ್ನು ಮನವರಿಕೆ ಮಾಡಿದರು. ಆಗ ಪಿ. ಚಿದಂಬರಂ ಸಂವಿಧಾನದ ೩೭೧ನೇ ಅನುಚ್ಛೇಧಕ್ಕೆ ತಿದ್ದುಪಡಿ ತರಲು ಒಪ್ಪಿಗೆ ಸೂಚಿಸಿ ಇಪ್ಪತ್ತು ದಿನಗಳಲ್ಲಿ ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ಚಳಿಗಾಲದ ಅಧಿವೇಶನದಲ್ಲೇ ಇದನ್ನು ಮಂಡಿಸುತ್ತೇನೆಂದು ಸ್ಪಷ್ಟ ಭರವಸೆ ಕೊಟ್ಟರು. ಆದರೆ ಐದು ತಿಂಗಳಾದರು ಆ ವಿಷಯ ಸಚಿವ ಸಂಪುಟಕ್ಕೆ ಬರಲಿಲ್ಲ ಅಂದರೆ ಇವರೆಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂದು ಅರ್ಥವಾಗುತ್ತದೆ. ಆ ನಿಯೋಗದಲ್ಲಿ ಮಾಜಿ ಮುಖ್ಯಮಂತ್ರಿಗಳು ಸಂಸದರಾದ ಎನ್.ಧರ್ಮಸಿಂಗ್, ಶಿವರಾಮೇಗೌಡ, ಸಣ್ಣ ಪಕೀರಪ್ಪ, ಕೆ.ಬಿ.ಶಾಣಪ್ಪ, ಶಾಸಕರಾದ ಅಮರೇಗೌಡ ಬಯ್ಯಾಪುರ, ಖಮರುಲ್ ಇಸ್ಲಾಂ, ಶಿವರಾಜ ತಂಗಡಗಿ ಈಶ್ವರ್ ಖಂಡ್ರೆ, ಡಾ.ಶರಣಪ್ರಕಾಶ ಪಾಟೀಲ್, ಅಲ್ಲಮ ಪ್ರಭು ಪಾಟೀಲ್, ಮಾಜಿ ಶಾಸಕರಾದ ಬಸನಗೌಡ ಬ್ಯಾಗವಾಟ್, ಲಿಂಗಸೂಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶರಣಪ್ಪ ಮೇಟಿ, ದದ್ದಲ್ ಬಸನಗೌಡ ಮತ್ತು ನಾನು ಇದ್ದೆವು. ನಾನು ಒಬ್ಬನು ಹೊರತುಪಡಿಸಿ ಹೋರಾಟಗಾರರಲ್ಲಿ ಯಾರೊಬ್ಬರು ಆ ನಿಯೋಗದಲ್ಲಿರದಿದ್ದದ್ದು ವಿಶೇಷವಾಗಿತ್ತು.

ಮರುದಿನ ಬೆಳಗ್ಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ಮೆರವಣಿಗೆ ಮೂಲಕ ಘೋಷಣೆಗಳನ್ನು ಕೂಗುತ್ತಾ ಸುಮಾರು ೫ ಕಿ.ಮೀ. ನಡೆದು ಜಂತರ–ಮಂತರ ತಲುಪಿದೆವು. ಧರಣಿ ನಡೆಯುವ ಸ್ಥಳಕ್ಕೆ ನಮ್ಮ ಭಾಗದ ಸಂಸದರಾದ ಶಿವರಾಮೇಗೌಡ, ಸಣ್ಣ ಪಕೀರಪ್ಪ, ಕೆ.ಬಿ.ಶಾಣಪ್ಪ, ಭೇಟಿ ನೀಡಿ ನಮಗೆ ತಮ್ಮ ಬೆಂಬಲ ಸೂಚಿಸಿ ಮಾತನಾಡಿದರು. ಶಾಸಕರಾದ ಶಿವರಾಜ ತಂಗಡಗಿ ಮಾತನಾಡುತ್ತ ನಾವೆಲ್ಲರೂ ರಾಜೀನಾಮೆ ನೀಡಿ ಒತ್ತಾಯ ಮಾಡೋಣವೆಂದು, ನನ್ನ ರಾಜೀನಾಮೆಯನ್ನು ಈಗಲೇ ನೀಡುತ್ತೇನೆಂದು ಸವಾಲು ಹಾಕಿದರು. ಧರಣಿಯು ಮಧ್ಯಾಹ್ನ ೩.೦೦ ಗಂಟೆಯವರೆಗೂ ನಡೆದು, ಪೋಲಿಸರು ನಮ್ಮ ಮನವಿಯನ್ನು ಪ್ರಧಾನ ಮಂತ್ರಿ ಕಛೇರಿಗೆ ನೀಡಲು ಯಾರಾದರೂ ಇಬ್ಬರು ಬರಬೇಕೆಂದು ಕೋರಿದರು. ಆಗ ನಾನು ಮತ್ತು ಇನ್ನೊಬ್ಬರು ಪೋಲಿಸರೊಂದಿಗೆ ಪ್ರಧಾನ ಮಂತ್ರಿ ಕಛೇರಿಗೆ ಹೋಗಿ ಮನವಿಯನ್ನು ನೀಡಿ ಬಂದೆವು. ಧರಣಿಯ ನೇತೃತ್ವವನ್ನು ಮಾಜಿ ಸಚಿವರಾದ ವೈಜನಾಥ ಪಾಟೀಲ್‌ರು ವಹಿಸಿದ್ದರು. ಧರಣಿಯಲ್ಲಿ ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ, ಶಾಸಕರಾದ ಹಾಲಪ್ಪ ಆಚಾರ, ಮನೋಹರ್ ಮಸ್ಕಿ, ಸುನೀಲ್ ವಲ್ಯಾಪುರೆ,

ಪ್ರತಾಪಗೌಡ ಪಾಟೀಲ, ದೊಡ್ಡನಗೌಡ ಪಾಟೀಲ್ ನರೀಬೋಳ, ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್, ಬಿ.ಆರ್.ಪಾಟೀಲ್, ಎಮ್.ವಾಯ್.ಪಾಟೀಲ್, ಹೋರಾಟಗಾರರಾದ ರಾಘವೇಂದ್ರ ಕುಷ್ಟಗಿ, ಡಾ.ವಿಕ್ರಮ ಪಾಟೀಲ್, ಗೌತಮ ವಿ.ಪಾಟೀಲ್, ಮಲ್ಲಪ್ಪ ಪಾಟೀಲ್, ವೀರೆಂದ್ರ ಪಾಟೀಲ್ ಕಾರಟಗಿ, ಸ್ವಾಮಿ ನಾಯಕ, ಈಶಪ್ಪ ಕಲಮಲ, ಪುರುಷೋತ್ತಮ, ಎ.ಕೆ.ಮಹೇಶಕುಮಾರ, ಸಂತೋಷ ದೇಶಪಾಂಡೆ, ಶಿವಕುಮಾರ ಕುಕನೂರು, ಚಂದ್ರಶೇಖರ ಕವಲೂರು, ಜಗದೀಶ ಗೌಡ, ಅನೀಲ ಕುಮಾರ ಬೀದರ, ಪಂಡಿತ್ ಚಿದ್ರಿ, ಇನ್ನೂ ಹಲವಾರು ಮುಖಂಡರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯದ ಒಂದು ಸಮಸ್ಯೆಗೆ ರಾಜ್ಯದಿಂದ ಜನರು ದೂರದ ದೆಹಲಿಗೆ ಧರಣಿ ಕೂಡಲು ಬಂದಾಗ ರಾಜ್ಯದ ಯಾವೊಬ್ಬ ಸಂಸದರು (ಹೈದ್ರಾಬಾದ – ಕರ್ನಾಟಕದ ಸಂಸದರಾದ ಶಿವರಾಮೆಗೌಡ, ಸಣ್ಣ ಪಕೀರಪ್ಪ, ಕೆ.ಬಿ.ಶಾಣಪ್ಪ ಹೊರತು ಪಡಿಸಿ) ಕನಿಷ್ಠ ಸೌಜನ್ಯಕ್ಕಾದರು ಬಂದು ಭೇಟಿ ನೀಡಲಿಲ್ಲ. ಅವರಿಗೆ ನಮ್ಮ ಸಮಸ್ಯೆ ಸಂಬಂಧವೇ ಇಲ್ಲವೇನೋ ಎಂಬಂತೆ ವರ್ತಿಸಿದ್ದು ದುಃಖದ ವಿಷಯವಾಗಿತ್ತು. ಇದಕ್ಕಿಂತ ದುರಂತ ಎಂದರೆ ನಮ್ಮ ಭಾಗದ ಹಿರಿಯ ರಾಜಕಾರಣಿಯು ಈ ಭಾಗದ ಹೆಸರಿನಲ್ಲಿ ಬಹುಭಾಗ ಅಧಿಕಾರ ಕಂಡವರು ಮಾಜಿ ಮುಖ್ಯಮಂತ್ರಿಗಳಾದ ಎನ್.ಧರ್ಮಸಿಂಗ್ ಮತ್ತು ಸಚಿವರಾದ ಮಲ್ಲಿಕಾರ್ಜುನ ಖರ್ಗೆ ಸಹ ಧರಣಿ ಸ್ಥಳಕ್ಕೆ ಬರಲಿಲ್ಲ. ಬಂದು ನಿನ್ನೆ ನಾವು ಕೇಂದ್ರ ಗೃಹ ಸಚಿವರನ್ನು ಭೇಟಿಯಾಗಿದ್ದೇವೆ, ಕೇಂದ್ರ ಸರಕಾರ ತಿದ್ದುಪಡಿ ಮಾಡಲು ಒಪ್ಪಿದ್ದಾರೆ ಆದ್ದರಿಂದ ನೀವು ಧರಣಿ ಕೂಡುವುದು ಅವಶ್ಯವಿಲ್ಲ ಎಂದು ಹೇಳಿದರೆ, ನಮಗೆ ಸಂತೋಷವಾಗುತ್ತಿತ್ತು. ಆದರೆ ಇವರು ನಡೆದುಕೊಂಡ ರೀತಿ ನೋಡಿದರೆ ದುಃಖದ ಜೊತೆಗೆ ಸಿಟ್ಟು ಬರುವಂತಿತ್ತು.

ನಮ್ಮ ಭಾಗದ ಗಂಗಾವತಿಯಲ್ಲಿ ಇತ್ತೀಚಿಗೆ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿಯಾಗಿ ನಡೆಯಿತು. ಆ ಸಮ್ಮೇಳನವನ್ನು ಈ ಭಾಗದ ಜನ ಮನಃಪೂರ್ವಕವಾಗಿ ತನು–ಮನು–ಧನದಿಂದ ನಡೆಸಿಕೊಟ್ಟರು. ಸಮ್ಮೇಳನದಲ್ಲಿ ಚರ್ಚೆಯಾಗುವಂತಹ ವಿಷಯಗಳಲ್ಲಿ ಈ ಭಾಗದ ಜ್ವಲಂತ ಸಮಸ್ಯೆಯಾದ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಒಂದು ಗೋಷ್ಠಿ ನೀಡಲು ಕೋರಲಾಯಿತು. ಅದರಂತೆ ಇವರು ಕೇಳಿದ್ದಾರೆ ಕೊಟ್ಟರಾಯಿತು ಎಂದು ಕಾಟಾಚಾರಕ್ಕೆ ಎಂಬಂತೆ ಅದನ್ನು 'ಕೊಪ್ಪಳ ಜಿಲ್ಲೆ ಒಂದು ಅವಲೋಕನ' ಎಂಬ ಗೋಷ್ಠಿಯಲ್ಲಿ ಸೇರಿಸಿ ಸಮಾನಾಂತರ ವೇದಿಕೆಯಲ್ಲಿ ಅವಕಾಶ

ನೀಡಲಾಯಿತು. ಕೊಪ್ಪಳ, ಯಲಬುರ್ಗಾ, ಗಂಗಾವತಿ, ಕಾರಟಗಿಯ ಗೆಳೆಯರು ನಡೆಯುತ್ತಿರುವ ಸಮ್ಮೇಳನದ ಪ್ರತಿಯೊಂದು ಉಪಸಮಿತಿಗಳಲ್ಲಿ ಪ್ರಮುಖ ಜವಾಬ್ದಾರಿ ಸ್ಥಾನಗಳಲ್ಲಿದ್ದವರು. ಇವರೆಲ್ಲರೂ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಒಂದು ವಿಶೇಷ ಗೋಷ್ಠಿ ಮಾಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಮತ್ತು ರಾಜ್ಯಾಧ್ಯಕ್ಷರಿಗೆ ಮನವಿ ಮಾಡಿದ್ದರು. ಆದರೆ ಅವರ್‍ಯಾರು ಆ ಮನವಿಗೆ ಸ್ಪಂಧಿಸಲಿಲ್ಲ, ಕಾರಣ ರಾಘವೇಂದ್ರ ಕುಷ್ಟಗಿ ಮತ್ತು ನನ್ನ ಮೇಲೆ ಬಹಳಷ್ಟು ಒತ್ತಡವನ್ನು ತಂದು ನಾವು ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ, ನಮ್ಮ ವಿಷಯ ಮುಖ್ಯ ವೇದಿಕೆಯಲ್ಲಿ ಚರ್ಚೆಯಾಗಬೇಕೆಂದು ಒತ್ತಾಯ ಮಾಡಿ ಹೇಳಿದರು. ಆ ಹಿನ್ನಲೆಯಲ್ಲಿ ರಾಘವೇಂದ್ರ ಕುಷ್ಟಗಿ ಮತ್ತು ನಾನು ಡಿಸೆಂಬರ್ ೬ನೇ ತಾರೀಖು ಕೊಪ್ಪಳಕ್ಕೆ ಹೋಗಿ ಅಲ್ಲಿ ಒಂದು ಸಭೆ ಮಾಡಿ ಮುಂದಿನ ಹೋರಾಟದ ಬಗ್ಗೆ ಚರ್ಚಿಸಿದೆವು. ಹೋರಾಟದ ರೂಪವಾಗಿ ೯ನೇ ಡಿಸೆಂಬರ್ ಬೆಳಗ್ಗೆ ಸಮ್ಮೇಳನಾಧ್ಯಕ್ಷರಿಗೆ ಸಾವಿರಾರು ಜನ ಉರುಳು ಸೇವೆ ಮಾಡುವುದರ ಮುಖಾಂತರ ಮನವಿ ಮಾಡುವುದು ಎಂದು ನಿರ್ಧರಿಸಲಾಗಿತ್ತು.

ಆದರೆ, ಕೊಪ್ಪಳ, ಯಲಬುರ್ಗಾ, ಕುಷ್ಟಗಿ ವಕೀಲರ ಸಂಘ, ಕೊಪ್ಪಳ ಪ್ರೌಢಶಾಲಾ ಶಿಕ್ಷಕರ ಸಂಘ, ವಿದ್ಯಾರ್ಥಿ ಸಂಘಟನೆಗಳು ೭ನೇ ತಾರೀಖು ಹೋರಾಟಕ್ಕೆ ದುಮುಕಿ ಜಿಲ್ಲಾಧಿಕಾರಿಗಳ ಮೂಲಕ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಮುಖ್ಯ ವೇದಿಕೆಯಲ್ಲಿ ಚರ್ಚೆಯಾಗಬೇಕೆಂದು ಒತ್ತಾಯ ಮಾಡಿ ಮನವಿ ಸಲ್ಲಿಸಿದರು. ಡಿಸೆಂಬರ್ ೮ನೇ ತಾರೀಖು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರು ಗಂಗಾವತಿಗೆ ಬಂದಾಗ ಅವರನ್ನು ಶಿವಶರಣಗೌಡ ಕಾರಟಗಿ, ಪ್ರಭುಉಪನಾಳ, ಬಸವರಾಜ ಪಗಡದಿನ್ನಿ, ಕೆ.ಪ್ರಕಾಶ ನೇತೃತ್ವದ ಸುಮಾರು ೨೦೦ ಜನರ ತಂಡ ತಮ್ಮ ದ್ವಿಚಕ್ರ ವಾಹನಗಳ ಜೊತೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಆಗ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಶ್ರೀ ನಲ್ಲೂರು ಪ್ರಸಾದ ಅವರು ೧೦ನೇ ತಾರೀಖು ಮಧ್ಯಾಹ್ನ ೩.೩೦ ಗಂಟೆಗೆ ಗೋಷ್ಠಿಯನ್ನು ಮುಖ್ಯ ವೇದಿಕೆಯಲ್ಲಿ ಚರ್ಚೆಗೆ ಅವಕಾಶ ನೀಡುತ್ತೇವೆ ಎಂದು ಭರವಸೆ ಕೊಟ್ಟ ನಂತರ ನಮ್ಮ ತಂಡ ನಿರಾಳವಾಯಿತು. ಆ ಸಮ್ಮೇಳನದಲ್ಲಿ ಹೈದ್ರಾಬಾದ – ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡುವ ಕುರಿತು ಗೋಷ್ಠಿ ಅತ್ಯಂತ ಯಶಸ್ವಿ, ಅರ್ಥಗರ್ಭಿತ ಗೋಷ್ಠಿಯಾಗಿ ಜನಮೆಚ್ಚುಗೆ ಪಡೆಯಿತು.

ಈ ಎಲ್ಲ ಬೆಳವಣಿಗೆಗಳಿಂದ ರೋಸಿಹೋದ ಈ ಭಾಗದ ಹೋರಾಟಗಾರರು ತೀವ್ರ ಹೋರಾಟದ ಯೋಚನೆಯಲ್ಲಿದ್ದಾರೆ. ಪರಿಸ್ಥಿತಿ ಕೈಮೀರಿ

ಹೋಗುವುದಕ್ಕಿಂತ ಮುಂಚೆ ಸರಕಾರ ಎಚ್ಚೆತ್ತುಕೊಂಡು ಹೈದ್ರಾಬಾದ – ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ತೆಲಂಗಾಣದ ಹೋರಾಟವನ್ನು ನೋಡಿದ ಈ ಭಾಗದ ಜನ ಅದನ್ನು ಒಂದು ಮಾದರಿಯಾಗಿ ಪರಿಗಣಿಸುವ ಹಂತದಲ್ಲಿದ್ದಾರೆ. ಅದೇನಾದರೂ ಕಾರ್ಯಗತವಾದರೆ ಹೈದ್ರಾಬಾದ – ಕರ್ನಾಟಕ ಮತ್ತೊಂದು ತೆಲಂಗಾಣವಾಗಿ ಪರಿಣಮಿಸುತ್ತದೆ. ಅದಾಗುವುದಕ್ಕಿಂತ ಮುಂಚೆ ಕೇಂದ್ರ ಸರಕಾರ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಶೀಘ್ರದಲ್ಲಿ ಮಾಡಬೇಕು ಹಾಗೂ ತನ್ನದೇನೂ ಜವಾಬ್ದಾರಿ ಇಲ್ಲ ಎನ್ನುವ ರೀತಿ ನಡೆದುಕೊಳ್ಳುತ್ತಿರುವ ರಾಜ್ಯ ಸರಕಾರ ಈ ವಿಷಯದಲ್ಲಿ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಬೇಕು.

ಗ್ರಂಥಋಣ(References:)

೧. ಸ್ವಾತಂತ್ರ್ಯ ಪೂರ್ವ ಭಾರತದ ಇತಿಹಾಸ.

೨. ಡಾ.ಡಿ.ಎಮ್.ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ಅಂತಿಮ ವರದಿ.

೩. ವಿವಿಧ ಇಲಾಖೆಗಳಿಂದ ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆದ ಮಾಹಿತಿ.

*****



ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ನಡೆದ ಜನಜಾಗೃತಿ ಜಾಥಾದ
ಮೆರವಣಿಗೆಗೆ ತಯಾರು ಮಾಡಿದ ವಾಹನ.




ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ನಡೆದ ಜನಜಾಗೃತಿ ಜಾಥಾದ
ಮೆರವಣಿಗೆಗೆ ತಯಾರು ಮಾಡಿದ ವಾಹನ.



ಕೊಪ್ಪಳದಲ್ಲಿ ನಡೆದ ಜನಜಾಗೃತಿ ಜಾಥಾದ ಮೆರವಣಿಗೆಯಲ್ಲಿ ಭಾಗವಹಿಸಿದ ವಿವಿಧ ಸಂಘಟನೆಗಳು



ಕೊಪ್ಪಳದಲ್ಲಿ ನಡೆದ ಜನಜಾಗೃತಿ ಜಾಥಾದ ಮೆರವಣಿಗೆಯಲ್ಲಿ ಭಾಗವಹಿಸಿದ ನಾನು, ಸುಮಿತಕುಮಾರ, ಅನಿಕೇತ ಅಗಡಿ.




ರಾಯಚೂರಿನಲ್ಲಿ ನಡೆದ ಜನಜಾಗೃತಿ ಜಾಥಾದ ಮೆರವಣಿಗೆಯಲ್ಲಿ ಭಾಗವಹಿಸಿದವರು. ಮಾಜಿ ಸಚಿವ ವೈಜನಾಥ ಪಾಟೀಲ, ಮುಖಂಡರಾದ ನಾಗನಗೌಡ ಹರವಿ, ಬಿ.ತಿಮ್ಮಾರೆಡ್ಡಿ.



ರಾಯಚೂರಿನಲ್ಲಿ ನಡೆದ ಜನಜಾಗೃತಿ ಜಾಥಾದ ಸಮಾರಂಭದಲ್ಲಿ ನಾನು ಮಾತನಾಡುತ್ತಿರುವುದು. ಚಿತ್ರದಲ್ಲಿ ಮುಖಂಡರಾದ ರಾಘವೇಂದ್ರ ಕುಷ್ಟಗಿ, ಶಾಸಕ ಎನ್.ಶಂಕ್ರಪ್ಪ, ಮಾಜಿ ಸಚಿವ ವೈಜನಾಥ ಪಾಟೀಲ, ಶಾಸಕ ಸೈಯದ ಯಾಸೀನ್, ಸಂಸದ ಕೆ.ಬಿ.ಶಾಣಪ್ಪ, ಮಾಜಿ ಶಾಸಕ ಎ.ಪಾಪಾರೆಡ್ಡಿ, ಎ.ವಸಂತಕುಮಾರ, ಡಾ.ಶಿವರಾಜ ಪಾಟೀಲ್.




ಗುಲ್ಬರ್ಗಾದಲ್ಲಿ ನಡೆದ ಜನಜಾಗೃತಿ ಜಾಥಾದ ಮೆರವಣಿಗೆಯಲ್ಲಿ ಭಾಗವಹಿಸಿದವರು. ಮಾಜಿ ಸಚಿವ ವೈಜನಾಥ ಪಾಟೀಲ, ಶಾಸಕರಾದ ಅಮರೇಗೌಡ ಬಯ್ಯಾಪುರ, ಮಾಜಿ ಶಾಸಕರಾದ ಕರಡಿ ಸಂಗಣ್ಣ, ಎಂ.ವೈ.ಪಾಟೀಲ್.




ಗುಲ್ಬರ್ಗಾದಲ್ಲಿ ನಡೆದ ಜನಜಾಗೃತಿ ಜಾಥಾದ ಸಮಾರೋಪ ಸಭೆಯಲ್ಲಿ ಶಾಸಕ ಅಮರೇಗೌಡ ಬಯ್ಯಾಪುರ ಮಾತನಾಡುತ್ತಿರುವದು. ಹಿಂದೆ ಕುಳಿತವರು ಮಾಜಿ ಸಚಿವ ವೈಜನಾಥ ಪಾಟೀಲ, ಶಾಸಕರಾದ ದೊಡ್ಡನಗೌಡ ಪಾಟೀಲ್. ಮಾಜಿ ಶಸಕರಾದ ಕರಡಿ ಸಂಗಣ್ಣ, ಎಂ.ವೈ.ಪಾಟೀಲ್. ರಾಘವೇಂದ್ರ ಕುಷ್ಟಗಿ, ಸುಲಫುಲ ಮಠದ ಸ್ವಾಮಿಗಳು.



ದೆಹಲಿಯಲ್ಲಿ ಧರಣಿ ಕೂಡಲು ತೆರಳುವಾಗ ರಾಯಚೂರಿನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ನಾನು ಮತ್ತು ಚಂದ್ರಶೇಖರ್ ಕವಲೂರು, ಜಗದೀಶ ಗೌಡ, ಈಶಪ್ಪ ಕಲಮಲ, ಸಂತೋಷ ದೇಶಪಾಂಡೇ, ಮಲ್ಕಪ್ಪ ಪಾಟೀಲ್, ವೀರೇಶ ಅತ್ತನೂರು



ದೆಹಲಿಯಲ್ಲಿ ಧರಣಿ ಕೂಡಲು ತೆರಳುವಾಗ ಡಾ.ಅಂಬೇಡ್ಕರ್ ಭವನದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡ ನಾನು, ಬಸವಂತರಾಯ ಕುರಿ, ರಾಘವೇಂದ್ರ ಕುಷ್ಟಗಿ, ಮಲ್ಕಪ್ಪ ಪಾಟೀಲ್, ಈಶಪ್ಪ ಕಲಮಲ, ಸ್ವಾಮಿ ನಾಯಕ



ದೆಹಲಿಯ ಜಂತರ-ಮಂತರನಲ್ಲಿ ಧರಣಿ ಕುಳಿತಿರುವುದು. ಧರಣಿಯಲ್ಲಿ ಪಾಲ್ಗೊಂಡ ಶಾಸಕರಾದ ಮನೋಹರ್ ಮಸ್ಕಿ, ಸುನೀಲ್ ವಲ್ಯಾಪುರೆ, ದೊಡ್ಡನಗೌಡ ಪಾಟೀಲ್, ಹಾಲಪ್ಪ ಆಚಾರ್, ಮಾಜಿ ಸಂಸದರಾದ ಕೆ.ವಿರುಪಾಕ್ಷಪ್ಪ, ಮಾಜಿ ಸಚಿವರಾದ ವೈಜನಾಥ ಪಾಟೀಲ್, ಮಾಜಿ ಶಾಸಕರಾದ ಬಸನಗೌಡ ಬ್ಯಾಗವಾಟ್, ಎಂ.ವೈ. ಪಾಟಿಲ್, ಬಿ.ಆರ್.ಪಾಟೀಲ್, ಸುಲಫುಲ್ ಮಠದ ಸ್ವಾಮಿಗಳು.

ಅಭಿಪ್ರಾಯಗಳು

ನವೆಂಬರ್ ೧. ೧೯೫೬ರಂದು ಹಲವಾರು ಹೋರಾಟಗಾರರ ಫಲವಾಗಿ ಮುಂಬೈ ರಾಜ್ಯದ ಬಿಜಾಪುರ, ಬೆಳಗಾವಿ, ಕಾರವಾರ ಮದ್ರಾಸ್ ರಾಜ್ಯದ ಮಂಗಳೂರು ಮತ್ತು ಬಳ್ಳಾರಿ, ಕೇರಳದ ಮಡಿಕೇರಿ, ಹೈದ್ರಾಬಾದ ರಾಜ್ಯದ ಬೀದರ, ಅವಿಭಜಿತ ಗುಲ್ಬರ್ಗ ಮತ್ತು ಅವಿಭಜಿತ ರಾಯಚೂರು ಜಿಲ್ಲೆಗಳನ್ನು ಸೇರಿಸಿಕೊಂಡು ಅಖಂಡ ಮೈಸೂರು ರಾಜ್ಯ ಉದಯವಾಯಿತು. ಕರ್ನಾಟಕ ಏಕೀಕರಣದ ಉದ್ದೇಶ ಕೂಡ ಸ್ಪಷ್ಟವಾಗಿತ್ತು. ಅಖಂಡ ಕನ್ನಡ ಪ್ರದೇಶ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿ ಹರಿದು ಹೋಗಿದ್ದು ಅಭಿವೃದ್ಧಿಯಲ್ಲಿ ಭಾರಿ ವ್ಯತ್ಯಾಸ ಇರುವುದರಿಂದ, ಈ ಎಲ್ಲ ಪ್ರದೇಶಗಳು ಒಂದೇ ಆಡಳಿತದಲ್ಲಿ ತರುವುದರಿಂದ ಏಕಮುಖವಾಗಿ ಅಭಿವೃದ್ಧಿ ಆಗುತ್ತದೆ ಎನ್ನುವುದು ಏಕೀಕರಣದ ಹೋರಾಟಗಾರರ ಕನಸಿತ್ತು.

ಆದರೆ ರಾಜ್ಯವನ್ನಾಳಿದ ಎಲ್ಲಾ ರಾಜಕೀಯ ಪಕ್ಷಗಳ ಸರಕಾರಗಳು ಎಲ್ಲ ವಿಭಾಗದ ಬೇಕು ಬೇಡಗಳಿಗೆ ಸ್ಪಂದಿಸದೇ ಕೇವಲ ಒಂದು ಪ್ರದೇಶಕ್ಕೆ ಸಿಮೀತವಾಗಿ ಅಭಿವೃದ್ಧಿಗೆ ಗಮನಕೊಟ್ಟು ಉಳಿದ ಪ್ರದೇಶಗಳನ್ನು ಬಹುತೇಕ ನಿರ್ಲಕ್ಷಿಸಲಾಯಿತು. ಇದನ್ನು ಡಾ. ಡಿ.ಎಂ. ನಂಜುಂಡಪ್ಪನವರು ತಮ್ಮ ವರದಿಯಲ್ಲಿ ವಿವರವಾಗಿ ತಿಳಿಸಿದ್ದಾರೆ. ಅದರಲ್ಲೂ ಹೈದ್ರಾಬಾದ – ಕರ್ನಾಟಕದ ೩೧ ತಾಲ್ಲೂಕುಗಳಲ್ಲಿ ೨೮ ತಾಲ್ಲೂಕುಗಳು ಎಲ್ಲ ರೀತಿಯಲ್ಲಿ ಹಿಂದುಳಿದಿದೆ ಎಂದು ಶೀಫಾರಸ್ಸು ಮಾಡಿರುವುದೇ ಸಾಕ್ಷಿಯಾಗಿದೆ.

ಹೈದ್ರಾಬಾದ – ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಸಂವಿಧಾನದ ೩೭೧ನೇ ಕಲಂ ಆಂದ್ರಪ್ರದೇಶ ಮಾದರಿಯಲ್ಲಿ ತಿದ್ದುಪಡಿ ಮಾಡಬೇಕು ಎಂದು ಶಿಫಾರಸ್ಸು ಮಾಡಿರುವುದು ಸಮಂಜಸವಾಗಿದೆ. ಯಾಕೆಂದರೆ, ಇದಕ್ಕೂ ಮೊದಲು ಇದರ ಬಗ್ಗೆ ಈ ಭಾಗದಲ್ಲಿ ಧ್ವನಿ ಎತ್ತಿ ಹೋರಾಟ ಮಾಡುತ್ತ ಬಂದಿರುವ ಮಾನ್ಯ ವೈಜನಾಥ ಪಾಟೀಲ್ ಮತ್ತು ನನ್ನಂತವರಿಗೆ ಶಕ್ತಿ ಬಂದಂತಾಗಿದೆ. ೧೯೯೬ರಿಂದಲೂ ಹಲವಾರು ಜನ ಈ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಹೀಗಾಗಿ ಇಂದು ಹೋರಾಟದ ಶಕ್ತಿಯನ್ನು ಅರ್ಥಮಾಡಿಕೊಂಡಿರುವ ಕೇಂದ್ರ ಸರಕಾರ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡಲು ಒಪ್ಪಿಕೊಂಡಿದೆ.

ಈ ಹೋರಾಟಕ್ಕೆ ಮಾನ್ಯ ವೈಜನಾಥ ಪಾಟೀಲರ ಜೊತೆ ವಿದ್ಯಾಧರ ಗುರುಜಿಯವರು ಹಲವಾರು ಮಠಾಧೀಶರು, ರಾಜಕಾರಣಿಗಳು, ವಿದ್ಯಾರ್ಥಿಗಳು,

ರೈತರು, ಬುದ್ಧಿವಂತರು, ಉಪನ್ಯಾಸಕರು, ಹೋರಾಟಗಾರರು ಬೆನ್ನೆಲುಬಾಗಿ ನಿಂತಿದ್ದಾರೆ.

ವಿಶೇಷವಾಗಿ ಗುಲ್ಬರ್ಗಾದ ಸುಲಫುಲ ಮಠದ ಮಹಾಂತ ಸ್ವಾಮಿಗಳು, ಕೊಪ್ಪಳ ಗವಿಮಠದ ಶ್ರೀ ಮ.ನಿ.ಪ್ರ.ಸ್ವ.ಜ. ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಗಂಗಾವತಿಯ ಕಲ್ಮಠದ ಸ್ವಾಮಿಗಳು, ಹೆಬ್ಬಾಳ ಮಠದ ಸ್ವಾಮಿಗಳು, ಮುರಕುಂಬಿ ಮಠದ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಮಾನವಿ ಕಲ್ಮಠದ ಮಹಾಸ್ವಾಮಿಗಳು ಹೀಗೆ ಮಠಾಧೀಶರೆಲ್ಲರೂ ಈ ಭಾಗದ ಸಮಸ್ಯೆಗಳಿಗೆ ಸ್ಪಂದಿಸಿ ತಾವೂ ಕೂಡ ಹೋರಾಟಗಳಲ್ಲಿ ಭಾಗವಹಿಸಿರುವುದು ಅಭಿನಂದನಾರ್ಹ.

ಹಿರಿಯರಾದಂತಹ ಅಂಯೋದ್ಯ ರಾಮಾಚಾರ್ಯರು, ಛತ್ರದ ಮರಿಯಪ್ಪನವರು, ಹೆಚ್.ಜಿ.ರಾಮುಲು, ಕೆ.ವಿರುಪಾಕ್ಷಪ್ಪನವರು, ಎ. ವೆಂಕಟೇಶ ನಾಯಕರು, ಶ್ರೀಪಾದಪ್ಪ ಅಧಿಕಾರಿಯವರು, ಹಿರಿಯ ರಾಜಕಾರಣಿಗಳಾದ ಅಮರೇಗೌಡ ಬಯ್ಯಾಪುರ, ಡಾ.ಶರಣಪ್ರಕಾಶ ಪಾಟೀಲ್, ಶಿವರಾಮೇಗೌಡ, ಕೆ.ಬಿ.ಶಾಣಪ್ಪ, ಪರಣ್ಣ ಮುನವಳ್ಳಿ, ಶಿವರಾಜ ತಂಗಡಗಿ, ಹಾಲಪ್ಪ ಆಚಾರ, ಸಂಗಣ್ಣ ಕರಡಿ, ವೆಂಕಟರಾವ್ ನಾಡಗೌಡ, ಪ್ರತಾಪಗೌಡ ಪಾಟೀಲ್, ಹಂಪಯ್ಯ ನಾಯಕ ಸೈಯದ ಯಾಸೀನ್, ಕೆ. ಶರಣಪ್ಪ ಹಂಪನಗೌಡ ಬಾದರ್ಲಿ, ಹಸನಸಾಬ ದೋಟಿಹಾಳ, ಬಸನಗೌಡ ಬ್ಯಾಗವಾಟ, ಗಂಗಾಧರ ನಾಯಕ, ಎ.ಪಾಪರೆಡ್ಡಿ, ಬಸವರಾಜ ಪಾಟೀಲ್ ಇಟಗಿ, ಶರಣಪ್ಪ ಮೇಟಿ, ಕರ್ಕಿಹಳ್ಳಿ ಶಿಕ್ಷಣಾಧಿಕಾರಿಗಳು ಮುಂತಾದವರು ತೋರಿಸಿರುವ ಕಾಳಜಿ ಈ ಹೋರಾಟಕ್ಕೆ ಬಲ ಬಂತು.

ಯುವಕರಾದ ರಝಾಕ ಉಸ್ತಾದ, ಶಿವಶರಣಗೌಡ, ಪ್ರಭು ಉಪನಾಳ, ಎ.ಕೆ. ಮಹೇಶಕುಮಾರ, ಚಂದ್ರಶೇಖರ ಕವಲೂರು, ಶಿವಕುಮಾರ ಕುಕನೂರು, ಸಂತೋಷ ದೇಶಪಾಂಡೆ, ಬಸವರಾಜ ಪಗಡದಿನ್ನಿ, ಬಸವರಾಜ ಯರದೋಣಿ, ಶೇಖರಗೌಡ, ಪ್ರಕಾಶ ಕೆ., ಸುಮಿತಕುಮಾರ, ಮಲ್ಕಪ್ಪ ಪಾಟೀಲ್, ಅಶೋಕಕುಮಾರ ಜೈನ, ಬಿ. ತಿಮ್ಮಾರೆಡ್ಡಿ, ಡಾ. ಶಿವರಾಜ ಪಾಟೀಲ್ ಇವರೆಲ್ಲರೂ ಹೋರಾಟಗಳ ನೇತೃತ್ವ ವಹಿಸಿಕೊಂಡು ಮುನ್ನುಗ್ಗುತ್ತಿರುವುದು ಹೋರಾಟದ ತೀವ್ರತೆ ಹೆಚ್ಚಾಗಿದೆ.

ಈಗ ಕೇಂದ್ರ ಸರಕಾರ, ರಾಜ್ಯ ಸರಕಾರ, ಇಲ್ಲಿಯ ಸಂಸದರು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಹೋರಾಟದ ಸ್ವರೂಪ ಬದಲಾಗುವ ಸಾಧ್ಯತೆ ಕಂಡುಬರುತ್ತಿದೆ. ಏನೇ ಆಗಲಿ ಈ ಭಾಗದ ಭವಿಷ್ಯದ ದೃಷ್ಟಿಯಿಂದ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಯಾಗಬೇಕು. ಜೊತೆಗೆ ಡಾ. ಡಿ.ಎಂ. ನಂಜುಂಡಪ್ಪನವರ ವರದಿ ಅಕ್ಷರಶ್ಯ ಜಾರಿಯಾಗಬೇಕು. ಈ ನಿಟ್ಟಿನಲ್ಲಿ ಪಕ್ಷಬೇಧ ಮರೆತು ಎಲ್ಲರೂ ಹೋರಾಟಕ್ಕೆ ಕೈಜೋಡಿಸುವ ಅವಶ್ಯಕತೆ. ಅನಿವಾರ್ಯತೆ ಇದೆ.

ರಾಘವೇಂದ್ರ ಕುಷ್ಟಗಿ– ರಾಯಚೂರು

ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ನಮ್ಮ ಭಾಗ (ಬೀದರ, ಗುಲ್ಬರ್ಗಾ, ಯಾದಗೀರ, ರಾಯಚೂರು ಹಾಗೂ ಕೊಪ್ಪಳ) ಕರ್ನಾಟಕದಲ್ಲಿ ಸೇರ್ಪಡೆಗೊಂಡು ೧೯೫೬ರಲ್ಲಿ ಅಖಂಡ ಕರ್ನಾಟಕದ ಭಾಗವಾಯಿತು. ಆದರೆ ಅಭಿವೃದ್ಧಿ ಆಗಲಿಲ್ಲ. ಕರ್ನಾಟಕದ ಉಳಿದ ಪ್ರದೇಶಗಳಿಗೆ ಹೋಲಿಸಿದಾಗ ನಮ್ಮ ಹೈದ್ರಾಬಾದ – ಕರ್ನಾಟಕ ತೀರಾ ಹಿಂದುಳಿದಿದೆ. ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಇಂಜಿನೀಯರಿಂಗ್, ಮೆಡಿಕಲ್ ಮತ್ತಿತರ ವೃತ್ತಿಪರ ಕಾಲೇಜುಗಳಲ್ಲಿ ಸೀಟುಗಳು ದೊರೆಯುತ್ತಿಲ್ಲ. ನಮ್ಮ ಭಾಗದ ಜನರಿಗೆ ನೌಕರಿಗಳು ಸಿಗುತ್ತಿಲ್ಲ. ಹೀಗಾಗಿ ನಾವು ಅನ್ಯಾಯಕ್ಕೆ ಒಳಗಾಗಿ, ಆರ್ಥಿಕವಾಗಿ ಶೈಕ್ಷಣಿಕವಾಗಿ ಸೊರಗಿದ್ದೇವೆ.

ಈ ಭಾಗದಲ್ಲಿ ಬಾಕಿ ಉಳಿದಿರುವ ನೀರಾವರಿ ಯೋಜನೆಗಳು ಹಲವಾರು, ಅವುಗಳಲ್ಲಿ ಮುಖ್ಯವಾದವುಗಳೆಂದರೆ ಭೀಮಾ ಬ್ಯಾರೇಜ ನಿರ್ಮಾಣ, ಕಾರಂಜಾ ಏತ ನೀರಾವರಿ ಯೋಜನೆ, ರಾಂಪುರ ಏತ ನೀರಾವಾರಿ ಯೋಜನೆ, ನಂದವಾಡಗಿ ಏತ ನೀರಾವರಿ ಯೋಜನೆ, ಹಿರೆ ಹಳ್ಳ ಯೋಜನೆ ಮುಂತಾದವು ಹಾಗೆ ನೆನಗುದಿಗೆ ಬಿದ್ದಿವೆ. ರಾಜ್ಯ ಸರಕಾರಗಳು ಮನಸ್ಸು ಮಾಡಿದರೆ ಈ ಭಾಗದ ಭೂಮಿಯನ್ನು ಸಂಪೂರ್ಣ ನೀರಾವರಿಗೊಳಪಡಿಸಬಹುದಾದಷ್ಟು ನೀರು ಇಲ್ಲಿ ಲಭ್ಯವಿದೆ. ಆದರೆ ಯಾವುದಕ್ಕೂ ಸರಕಾರಗಳೂ ಸರಿಯಾಗಿ ಸ್ಪಂದಿಸದೇ ಇರುವುದು ನಮ್ಮ ದುರ್ದೈವ.

ಇದಕ್ಕೆ ಪೂರಕವಾಗಿ ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ವರದಿಯಿದೆ. ಈ ವರದಿಯನ್ವಯ ರಾಜ್ಯದಲ್ಲಿರುವ ೧೭೫ ತಾಲ್ಲೂಕುಗಳಲ್ಲಿ ೬೧ ತಾಲ್ಲೂಕುಗಳು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಎಂದೂ, ೧೧೪ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳು ಅವುಗಳಲ್ಲಿ ೩೫ ಹಿಂದುಳಿದ ತಾಲ್ಲೂಕುಗಳು, ೪೦ ಅತೀ ಹಿಂದುಳಿದ ತಾಲ್ಲೂಕುಗಳು ಹಾಗೂ ೩೯ ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ವಿಶ್ಲೇಷಣೆ ನೀಡಲಾಗಿದೆ. ರಾಜ್ಯದ ೩೯ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪೈಕಿ ೨೧ ತಾಲ್ಲೂಕುಗಳು ಹೈದ್ರಾಬಾದ – ಕರ್ನಾಟಕ ಪ್ರದೇಶದಲ್ಲಿವೆ ಎನ್ನುವುದೇ ಅತೀ ಸೋಜಿಗದ ವಿಷಯವಾಗಿದೆ.

ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೌಕರಿಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ ೩೭೧ನೇ ಕಲಂ ತೆಲಂಗಾಣ ಮಾದರಿಯಲ್ಲಿ ಜಾರಿಯಾಗುವುದು ಅತೀ

ಅವಶ್ಯಕವಾಗಿದೆ. ಈ ದಿಕ್ಕಿನಲ್ಲಿ ವಿದ್ಯಾರ್ಥಿಗಳು, ಬುದ್ಧಿ ಜೀವಿಗಳು, ಪ್ರಗತಿಪರ ಚಿಂತಕರು, ಹೋರಾಟಗಾರರು, ರೈತರು, ಕೂಲಿಕಾರ್ಮಿಕರು, ಈಗಾಗಲೇ ಹಲವಾರು ಹೋರಾಟಗಳನ್ನು ಮಾಡುತ್ತ ಬಂದರೂ ಯಾವೊಂದು ಸರಕಾರಗಳು ನಮ್ಮ ಮನವಿಗೆ ಓಗೊಟ್ಟಿಲ್ಲ, ನಮ್ಮ ಭಾಗದ ಜನಪ್ರತಿನಿಧಿಗಳು ಈ ಸಮಸ್ಯೆಗೆ ಸರಿಯಾಗಿ ಸ್ಪಂದಿಸದೇ ಇರುವುದು ಕೂಡ ಆಕ್ಷೇಪಾರ್ಹ ನಿಲುವು. ನಮ್ಮ ಭಾಗದ ಬಹುತೇಕ ಜನಪ್ರತಿನಿಧಿಗಳಿಗೆ ನಾವು ಎಷ್ಟು ಅನ್ಯಾಯಕ್ಕೆ ಒಳಪಟ್ಟಿದ್ದೇವೆ ಎನ್ನುವ ಮಾಹಿತಿಯೇ ಇಲ್ಲ, ಸಾಮಾನ್ಯ ಜನರಿಗೆ ಇದರ ಅರಿವು ದೂರಿನ ಮಾತು.

ಇತ್ತೀಚಿಗೆ ಸಾಕಷ್ಟು ಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿರುವುದರಿಂದ, ಜನ ಪ್ರಶ್ನೆ ಮಾಡುವ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಈಗಲಾದರೂ ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಪಕ್ಷಭೇದ ಮರೆತು ಹೈದ್ರಾಬಾದ - ಕರ್ನಾಟಕಕ್ಕೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗಾಗಿ ಒತ್ತಾಯಿಸಿ ಹೋರಾಟಕ್ಕೆ ದುಮುಕುವುದು ಈ ಭಾಗದ ಹಿತದೃಷ್ಟಿಯಿಂದ ಒಳ್ಳೆಯದು. ಈಗಾಗಲೇ ಹತ್ತು ಸಲ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಕಾರಣಗಳಿಗೋಸ್ಕರ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಮಾಡಲಾಗಿದೆ. ಇನ್ನೊಂದು ಸಲ ಹೈದ್ರಬಾದ - ಕರ್ನಾಟಕಕ್ಕಾಗಿ ತಿದ್ದುಪಡಿ ಮಾಡುವುದು ಸಮಸ್ಯೆಯೇನಲ್ಲ.

ಡಾ. ಡಿ.ಎಂ. ನಂಜುಂಡಪ್ಪನವರು ಸಹ ತಮ್ಮ ವರದಿಯಲ್ಲಿ ಸಂವಿಧಾನದ ೩೭೧ನೇ ಕಲಂ ಆಂದ್ರಪ್ರದೇಶ ಮಾದರಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ, ಆದ್ದರಿಂದ ನಮ್ಮ ತಿದ್ದುಪಡಿ ೩೭೧ಡಿ ಕಲಂನ ಅನ್ವಯ ಇರಬೇಕು ಕೇಂದ್ರ ಸರ್ಕಾರ ಈ ಮೊದಲು ವಿಧರ್ಭ ಮಾದರಿಗೆ ಒಪ್ಪಿಕೊಂಡಿದ್ದರೂ ಅದನ್ನು ನಾವು ತಿರಸ್ಕರಿಸಿರುವುದು ಸಮಂಜಸವಾಗಿದೆ. ಯಾಕೆಂದರೆ ವಿಧರ್ಭ ಮಾರಿಯಲ್ಲಿ ಈಗಲೂ ಶಿಕ್ಷಣ ಹಾಗೂ ನೇಮಕಾತಿಗಳಲ್ಲಿ ಮೀಸಲಾತಿ ನೀಡಲು ಬೇರೆ ಭಾಗದ ಜನ ಕೋರ್ಟ್‌ಗೆ ಹೋಗಿರುವುದರಿಂವ ಸಾಧ್ಯವಾಗಿಲ್ಲ. ಇದರ ಅರಿವು ಇರದ ಕೆಲವೊಬ್ಬರು ವಿಧರ್ಭ ಮಾದರಿ ತಿದ್ದುಪಡಿಗೆ ಒಲವು ಹೊಂದಿರುತ್ತಾರೆ. ಅವರು ಈ ವಿಷಯ ಅರಿಯುವುದು ಒಳ್ಳೆಯದು.

ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮಾಡುವ ದಿಕ್ಕಿನಲ್ಲಿ ಗ್ರಾಮ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು, ಜಿಲ್ಲಾ

ಪಂಚಾಯತ್ ಸದಸ್ಯರು, ಎ.ಪಿ.ಎಂ.ಸಿ. ಸದಸ್ಯರು ಶಾಸಕರು, ಸಂಸದರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಹೋರಾಟಗಾರರು, ರೈತರು, ಕೂಲಿಕಾರ್ಮಿಕರು ಮುಂತಾದವರು ಕೇಂದ್ರ ಸರಕಾರದ ಮೇಲೆ ತೀವ್ರತರವಾದ ಒತ್ತಡ ತರಲು ಜನಾಂದೋಲನವನ್ನು ರೂಪಿಸುವ ಅವಶ್ಯಕತೆ ಕಂಡು ಬರುತ್ತದೆ. ಎಲ್ಲರೂ ಭಾಗವಹಿಸುತ್ತಾರೆ ಎನ್ನುವ ವಿಶ್ವಾಸ ಮೂಡುತ್ತಿರುವುದರಿಂದ ನಾವು ಯಶಸ್ಸಾಗುತ್ತೇವೆ ಎಂಬ ನಂಬಿಕೆ ನನ್ನದಾಗಿದೆ. ಕನ್ನಡ ಸಾಹಿತ್ಯ ಪರಿಷತ್ ಈ ನಿಟ್ಟನಲ್ಲಿ ಈ ಭಾಗದ ಸಮಸ್ಯೆಗಳು ಹಾಗೂ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಕುರಿತು ಪುಸ್ತಕ ಹೊರತರುತ್ತಿರುವುದು ಸಂತೋಷದ ವಿಷಯ.

ಅಮರೇಗೌಡ ಪಾಟೀಲ ಬಯ್ಯಾಪುರ

ಅಖಂಡ ಕರ್ನಾಟಕ ಸಮೃದ್ಧಿಯಾಗಲು ಹೈದ್ರಬಾದ ಕರ್ನಾಟಕ ಅಭಿವೃದ್ಧಿಯಾದಾಗ ಮಾತ್ರ. ನಮಗೆ ಸ್ವಾತಂತ್ರ್ಯ ಪೂರ್ವದಲ್ಲಿದ್ದ ಅಭಿವೃದ್ಧಿ ಹಿನ್ನಡೆ ಏಕೀಕರಣದ ನಂತರವೂ ಮುಂದುವರೆದಿರುವುದು ಶೋಚನೀಯ.

ಹೈದ್ರಾಬಾದ - ಕರ್ನಾಟಕ ಆರು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ ಕಲಂ ೩೭೧ ತಿದ್ದುಪಡಿ ಅಗತ್ಯವಿದೆ. ರಾಜ್ಯ ಸರ್ಕಾರ ಡಾ. ನಂಜುಂಡಪ್ಪ ವರದಿಯ ಅನುಷ್ಠಾನಕ್ಕೆ ಸಂಪೂರ್ಣ ಒತ್ತು ನೀಡಬೇಕಾಗಿದೆ. ಜನಪ್ರತಿನಿಧಿಗಳಾದ ನಾವುಗಳು ಪಕ್ಷಾತೀತವಾಗಿ ಒಕ್ಕೂರಲಿನ ಒತ್ತು ನೀಡುವುದು ಅಗತ್ಯವಾಗಿದೆ.

ನಮ್ಮ ಪ್ರದೇಶವು ಅತ್ಯಂತ ಸಂಪದ್ಭರಿತ ನಾಡಾಗಿದ್ದು, ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿರುವ ಪ್ರದೇಶವಾದರೂ ಒಂದು ಶತಮಾನಗಳ ಕಾಲ ಅಭಿವೃದ್ಧಿ, ಶೈಕ್ಷಣಿಕ, ಔದ್ಯೋಗಿಕ, ನೀರಾವರಿ ಸೇರಿದಂತೆ ಎಲ್ಲಾ ರಂಗದಲ್ಲಿ ಹಿಂದುಳಿದಿದ್ದು, ಇದನ್ನು ಸರಿದೂಗಿಸಲು ಕಲಂ ೩೭೧ ಜಾರಿ ಅತ್ಯಗತ್ಯ. ಈ ನಿಟ್ಟಿನಲ್ಲಿ ನಾವು ನೀವೆಲ್ಲರೂ ಹೋರಾಡೋಣ.

ಸಂಗಣ್ಣಕರಡಿ

ಹೈದ್ರಾಬಾದ್ ಕರ್ನಾಟಕ ಭಾಗವು ದೇಶ ಸ್ವತಂತ್ರವಾಗಿ ೬೪ ವರ್ಷಗಳಾದರೂ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯಿಂದ ಮುಕ್ತವಾಗಲು ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ನಾವು ಹಿಂದಿನ ನಾಯಕರುಗಳನ್ನು ದೂಷಿಸುವುದನ್ನು ಹವ್ಯಾಸ ಮಾಡಿಕೊಂಡಿದ್ದೇವೆ ಅದೇ ತರಹ ಮುಂದಿನ ಪೀಳಿಗೆ ನಮ್ಮನ್ನು ಹೊಣೆಗಾರಿಕೆ ಮಾಡುವುದು ತಪ್ಪುವುದಿಲ್ಲ. ಅದಕ್ಕಾಗಿ ನಾವು ನಮ್ಮ ಎಲ್ಲ

ವೈಯಕ್ತಿಕ ಭಿನ್ನಾಭಿಪ್ರಾಯಗಳು, ಪಕ್ಷ, ಮತಭೇದಗಳನ್ನು ಮರೆತು ಈ ಭಾಗದ ಕಡ್ಡಾಯ ಅಭಿವೃದ್ಧಿಗಾಗಿ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿಗೋಸ್ಕರ ವೈಯಕ್ತಿಕ ಪ್ರತಿಷ್ಠೆಗಳನ್ನು ಬದಿಗಿಟ್ಟು, ರಾಜಕೀಯ ನಾಯಕರುಗಳು ತಮ್ಮ ಪಕ್ಷಗಳನ್ನು ಮರೆತು ತೆಲಂಗಾಣದಲ್ಲಿ ಮಾಡುತ್ತಿರುವ ಹೋರಾಟ ನಮಗೆಲ್ಲ ಸ್ಫೂರ್ತಿಯಾಗಬೇಕು.

ಇಲ್ಲಿವರೆಗೆ ನಾವು ನಮ್ಮ ಈ ಭಾಗದ ಭವಿಷ್ಯಕ್ಕಾಗಿ ಬೇಡಿಕೆಗಳನ್ನು ಸಲ್ಲಿಸುತ್ತಾ ಬಂದಿದ್ದೇವೆ. ನಮ್ಮ ಸೌಮ್ಯ ಸ್ವಭಾವದ ಕೋರಿಕೆಗಳಿಗೆ ಬೆಲೆ ಸಿಗುತ್ತಿಲ್ಲವಾದ್ದರಿಂದ ಹೋರಾಟ ಅನಿವಾರ್ಯವಾಗಬೇಕಿದೆ.

ಇಕ್ಬಾಲ್ ಅನ್ಸಾರಿ

ಸಂವಿಧಾನ ರಚನಾ ಸಂದರ್ಭದಲ್ಲಿ ಉಲ್ಲೇಖಿಸಿದಂತೆ ದೇಶದ ಯಾವುದೇ ಒಂದು ಪ್ರದೇಶ ಸಮೃದ್ಧವಾಗಿ ಮತ್ತೊಂದು ಭಾಗ ತೀರಾ ಹಿಂದುಳಿದರೆ ಆ ಭಾಗಕ್ಕೆ ವಿಶೇಷ ಸವಲತ್ತು ನೀಡಲು ಸಂವಿಧಾನ ೩೭೧ನೇ ಕಲಂ ಅಡಿಯಲ್ಲಿ ಅವಕಾಶ ನೀಡಲು ಅವಕಾಶವಿದ್ದು ನಮ್ಮ ಹಕ್ಕನ್ನು ನಾವು ಕೇಳುತ್ತಿದೇವೆ.

ಹೈದ್ರಾಬಾದ್ ಕರ್ನಾಟಕದಂತೆ ದೇಶದ ಆಂಧ್ರಪ್ರದೇಶ, ಗೋವಾ, ಅಸ್ಸಾಂ ಸೇರಿದಂತೆ ಹಲವಾರು ರಾಜ್ಯಗಳಿಗೆ ಈ ಸೌಲಭ್ಯ ನೀಡಿದ್ದು, ಕೇಂದ್ರ ಸರ್ಕಾರ ರಾಜ್ಯದ ಈ ಭಾಗಕ್ಕೂ ಸಂವಿಧಾನ ಬದ್ಧ ಹಕ್ಕು ನೀಡಬೇಕಾಗಿದೆ.

ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೌಕರಿಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ ೩೭೧ನೇ ಕಲಂ ತೆಲಂಗಾಣ ಮಾದರಿಯಲ್ಲಿ ಜಾರಿಯಾಗುವುದು ಅತೀ ಅವಶ್ಯವಾಗಿದೆ. ಈ ದಿಕ್ಕಿನಲ್ಲಿ ವಿದ್ಯಾರ್ಥಿಗಳು ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು, ಹೊರಾಟಗಾರರು, ರೈತರು, ಕೂಲಿಕಾರ್ಮಿಕರು ೩೭೧ನೇ ಕಲಂ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಮೇಲೆ ತೀವ್ರತರವಾದ ಒತ್ತಡ ತರಲು ಜನಾಂದೋಲನವನ್ನು ರೂಪಿಸುವ ಅವಶ್ಯಕತೆ ಇದ್ದು, ಶಾಂತಿಯುತ ಹೋರಾಟದ ಮುಖಾಂತರ ನಮ್ಮ ಹಕ್ಕು ಪಡೆಯಬೇಕಾಗಿದೆ.

ಹಾಲಪ್ಪ ಆಚಾರ್

೩೭೧ನೇ ಕಲಂ ತಿದ್ದುಪಡಿ ನಮ್ಮ ಹಕ್ಕು :

ನಮ್ಮ ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಭಾರತವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು

ಸಮಸ್ತ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ, ವಿಚಾರ, ಅಭಿಪ್ರಾಯಗಳ ಅಭಿವ್ಯಕ್ತಿ, ಧಾರ್ಮಿಕ ನಂಬಿಕೆ ಮತ್ತು ಉಪಾಸನಾ ಸ್ವಾತಂತ್ರ್ಯವನ್ನು, ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯನ್ನು ಒದಗಿಸಿಕೊಡಲು ವ್ಯಕ್ತಿಯ ಗೌರವ ಮತ್ತು ರಾಷ್ಟ್ರದ ಐಕ್ಯತೆಯನ್ನು ಭದ್ರಪಡಿಸುವ ಒಂದು ಬಾಂಧವ್ಯವನ್ನು ಬೆಳೆಸಲು ಶ್ರದ್ಧಾಪೂರ್ವಕವಾಗಿ ದೃಢ ಸಂಕಲ್ಪ ಮಾಡಲಾಗಿದೆ ಎಂದು ಹೇಳಿದೆ. ಅಂದರೆ ಸಮಸ್ತ ಪ್ರಜೆಗಳ ಪರಮಾಧಿಕಾರ, ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಭಾತೃತ್ವಭಾವನೆ ಜಾತ್ಯಾತೀತ ತತ್ವವನ್ನು ಪ್ರತಿಬಿಂಬಿಸಿ ಕಾನೂನಿನ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದೆ.

ಭಾರತದ ಸ್ವಾತಂತ್ರ್ಯ ನಂತರ ಇಡೀ ದೇಶಕ್ಕೆ ಸಂವಿದಾನವನ್ನು ಅಳವಡಿಸಿಕೊಂಡಾಗ ಸಂವಿಧಾನ ಆಶಯದಂತೆ ದೇಶದ ಪ್ರತಿಯೊಂದು ಭಾಗಗಳಿಗೂ ಪ್ರತಿಯೊಬ್ಬ ಪ್ರಜೆಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಯನ್ನು ಒದಗಿಸಬೇಕಾಗಿದ್ದುದು ಸರಕಾರದ ಕರ್ತವ್ಯವಾಗಿದ್ದಿತು. ಇಂತಹ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ವಿಭಿನ್ನ ಭಾಗಗಳ ಅಭಿವೃದ್ಧಿಗೆ ಏಕರೂಪದ ಮಾನದಂಡ ಅವೈಜ್ಞಾನಿಕವೆನಿಸುತ್ತದೆ. ಆಯಾ ಪ್ರದೇಶಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅಭಿವೃದ್ಧಿ ನೀತಿಯನ್ನು ರೂಪಿಸಬೇಕಾಗುತ್ತದೆ. ಏಕೆಂದರೆ ದೇಶಿಯ ಅರಸರ ಆಳ್ವಿಕೆಗೆ ಒಳಪಟ್ಟಿದ್ದ ಅನೇಕ ಪ್ರದೇಶಗಳು ಸಹಜವಾಗಿ ಸಾಂಪ್ರದಾಯಿಕ ನೆಲೆಯ ಆಮೆಗತಿಯ ಬೆಳವಣಿಗೆಯನ್ನು ಹೊಂದಿದ್ದರೆ ಬ್ರಿಟೀಷ್ ಆಳ್ವಿಕೆಗೆ ಒಳಗಾದ ಇಲ್ಲವೇ ಅವರ ಪ್ರಭಾವಕ್ಕೆ ಒಳಗಾದ ದೇಶಿ ಸಂಸ್ಥಾನಗಳು ತೀವ್ರಗತಿಯ ಪ್ರಗತಿಪಥದಲ್ಲಿದ್ದವು. ಉದಾಹರಣೆಗೆ ಒಡೆಯರ ಅರಸರ ಉದಾರ ಹಾಗೂ ಪ್ರಗತಿಪರ ಆಡಳಿತದಿಂದ ಮೈಸೂರು ರಾಜ್ಯ ಅಭಿವೃದ್ಧಿ ದೃಷ್ಟಿಯಿಂದ ದೇಶದಲ್ಲಿಯೇ ಮಾದರಿ ರಾಜ್ಯವೆನಿಸಿತ್ತು. ಇದಕ್ಕೆ ವ್ಯತರಿಕ್ತ ಪರಿಸ್ಥಿತಿ ನಿಜಾಮರ ರಾಜ್ಯವಾದ ಹೈದ್ರಾಬಾದ್‌ನಲ್ಲಿತ್ತು. ಹೀಗೆ ಹಿಂದುಳಿದ ಭಾಗಗಳ ಸಾಮಾಜಿಕ ಹಾಗೂ ಶೈಕ್ಷಣಿಕ ಆರ್ಥಿಕ ಪ್ರಗತಿಯನ್ನುಂಟುಮಾಡುವ ಉದ್ದೇಶದಿಂದ ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿಮಾಡಿ ಕೆಲವೊಂದು ಸವಲತ್ತನ್ನು ಇಂಥ ಪ್ರದೇಶಗಳಿಗೆ ಮಾಡಿ ಕೊಡಲಾಯಿತು.

ಹೈದ್ರಾಬಾದ್ ಕರ್ನಾಟಕಕ್ಕೆ ಪರಮ ಅನ್ಯಾಯ :

ದೇಶದ ಇತರ ಹಿಂದುಳಿದ ದೇಶಿ ಸಂಸ್ಥಾನಗಳ ಪ್ರದೇಶಗಳಿಗೆ ಸಂವಿಧಾನದ ೩೭೧ನೇ ಕಲಂನ್ನು ಅನ್ವಯಿಸಿ ಅವುಗಳ ಅಭಿವೃದ್ಧಿಗೆ ವಿಶೇಷ ಸವಲತ್ತುಗಳನ್ನು

ಕಲ್ಪಿಸಿದ ನಂತರ ೧೯೪೮ರಲ್ಲಿ ವಿಮೋಚನೆಗೊಂಡು ಭಾರತ ದೇಶದಲ್ಲಿ ವಿಲೀನವಾದ ಹೈದ್ರಾಬಾದ್ ರಾಜ್ಯಕ್ಕೂ ಇದನ್ನು ಅನ್ವಯಿಸಬೇಕೆಂಬ ಕೂಗು ಬಲವಾಗಿ ಕೇಳಿ ಬಂತು ಪರಿಣಾಮವಾಗಿ ಆಯಾ ಪ್ರದೇಶಗಳ ರಾಜಕೀಯ ಇಚ್ಛಾಶಕ್ತಿ ಮತ್ತು ಸ್ಥಳೀಯ ಜನರ ದಿಟ್ಟತನದ ಅಗ್ರಹಗಳಿಂದಾಗಿ ಹಿಂದಿನ ಹೈದ್ರಾಬಾದ್ ರಾಜ್ಯದ ಭಾಗಗಳಗಿದ್ದ ಮಹಾರಾಷ್ಟ್ರದ ಮರಾಠವಾಡ ಮತ್ತು ಆಂಧ್ರದ ತೆಲಂಗಾಣ ಪ್ರಾಂತಗಳಿಗೆ ಈ ಸೌಲಭ್ಯವನ್ನು ಕೇಂದ್ರ ಸರ್ಕಾರ ಕಲ್ಪಸಿಕೊಟ್ಟಿತು. ಆದರೆ ಅದೇ ರಾಜ್ಯದ ಒಂದು ಭಾಗವಾಗಿದ್ದ ಕರ್ನಾಟಕದ ಹೈದ್ರಾಬಾದ್ ಕರ್ನಾಟಕಕ್ಕೆ ಮಾತ್ರ ಅದನ್ನು ಅನ್ವಯಿಸದೆ ಪರಮ ಅನ್ಯಾಯವನ್ನು ಮಾಡಲಾಯಿತು. ಇದಕ್ಕೆ ನಮ್ಮ ಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಸ್ಥಳೀಯರಿಂದ ಪ್ರಭಲ ಬೇಡಿಕೆ ಇರಲಿಲ್ಲ ಎಂಬುದು ಸತ್ಯವೆಂದರೂ ಕೇಂದ್ರ ಸರ್ಕಾರದ ಮುತ್ಸದ್ಧಿತನದ ಕೊರತೆ ಮತ್ತು ಜಾಣ ಕುರುಡನ್ನು ಮರೆಯುವಂತಿಲ್ಲ. ಒಂದೇ ರಾಜ್ಯದ ಭಾಗಗಳಾಗಿದ್ದ ಮೂರು ಪ್ರದೇಶಗಳಲ್ಲಿ ಮರಾಠವಾಡ, ತೆಲಂಗಾಣಕ್ಕೆ ಬೆಣ್ಣೆ ಹೈದ್ರಾಬಾದ ಕರ್ನಾಟಕಕ್ಕೆ ಸುಣ್ಣ ಎಂಬ ಕೇಂದ್ರದ ಮಲತಾಯಿ ಧೋರಣೆ ಸ್ಪಷ್ಟವಾಗಿರುವುದು ತಿಳಿಯಸುತ್ತದೆ.

ಹೈದ್ರಾಬಾದ್ ಕನಾಟಕದ ಪರಿಸ್ಥಿತಿ ಮತ್ತು ನಿರೀಕ್ಷೆ :

೧೯೫೬ರಲ್ಲಿ ಕರ್ನಾಟಕ ರಾಜ್ಯ(ಮೈಸೂರು ಹೆಸರಿನಲ್ಲಿ) ಏಕೀಕೃತಗೊಂಡಾಗ ಹೈದ್ರಾಬಾದ್ ಕರ್ನಾಟಕ ಅದರಲ್ಲಿ ವಿಲೀನಗೊಂಡು ಅಭಿವೃದ್ಧಿಯ ಹೊಸ ಕನಸನ್ನು ಕಾಣಲಾರಂಭಿಸಿತು. ಆಗ ಹೊಸರಾಜ್ಯದಲ್ಲಿ ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದ ಪ್ರದೇಶವಾಗಿತ್ತು. ದೀರ್ಘಾವಧಿಯ ಬಹಮನಿ, ಮೊಗಲ್, ನಿಜಾಮಿ ಆಡಳಿತಗಳನ್ನು ಕಂಡ ಈ ಪ್ರದೇಶ ಎಷ್ಟು ಹಿಂದುಳಿದಿತ್ತೆಂದರೆ ಮುಂದುವರೆದ ಹಳೆಯ ಮೈಸೂರು ಪ್ರದೇಶ, ಮುಂಬೈ ಕರ್ನಾಟಕ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಭಾಗಗಳಿಗೆ ಹೋಲಿಸಿದರೆ ಹೈದ್ರಾಬಾದ್ ಕರ್ನಾಟಕ ಜಾಗತಿಕ ಮಟ್ಟದಲ್ಲಿ ಆಫ್ರಿಕಾ ಖಂಡದಂತೆ ಇತ್ತು. ಇಲ್ಲಿ ಪ್ರಜಾಪ್ರಭುತ್ವ ಪರಿಸ್ಥಿತಿ ಶೋಚನೀಯವಾಗಿತ್ತು, ಶೈಕ್ಷಣಿಕ, ಸಾಂಸ್ಕೃತಿಕ ವಾತಾವರಣವೇ ಇರಲಿಲ್ಲ. ಇಂಥ ಸ್ಥಿತಿಯನ್ನು ಹೊತ್ತುಕೊಂಡೆ ಮೈಸೂರು ರಾಜ್ಯದಲ್ಲಿ ವಿಲೀನಗೊಂಡ ಹೈದ್ರಾಬಾದ್ ಕರ್ನಾಟಕ ಸಹಜವಾಗಿ ವಿಶೇಷ ಸೌಲಭ್ಯಕ್ಕೆ ಅರ್ಹವಾಗಿತ್ತು ಮತ್ತು ನೂತನ ರಾಜ್ಯದಲ್ಲಿ ತನ್ನ ಅಭಿವೃದ್ಧಿಯನ್ನು ಸಹಜವಾಗಿ ನಿರೀಕ್ಷಿಸಿತ್ತು ಆದರೆ ಆದದ್ದೇ ಬೇರೆ.

ಪ್ರಾದೇಶಿಕ ಅಸಮಾನತೆಯನ್ನು ಉಳಿಸಿದ ಅಭಿವೃದ್ಧಿ ನೀತಿ :

ಕರ್ನಾಟಕ ಸರಕಾರ ಸಹಜವಾಗಿ ತನ್ನ ಅಭಿವೃದ್ಧಿ ನೀತಿಯನ್ನು ರೂಪಿಸಲಾರಂಭಿಸಿತು. ಆದರೆ ಅದಕ್ಕೆ ಪ್ರಾದೇಶಿಕ ಪರಿಸ್ಥಿತಿಗಳ ಸೂಕ್ಷ್ಮಾವಲೋಕನದ ಕೊರತೆ ಇತ್ತು. ಸರಕಾರ ಉಳಿದ ಪ್ರಾಂತಗಳಂತೆ ಹೈದ್ರಾಬಾದ ಕರ್ನಾಟಕವನ್ನು ಪರಿಗಣಿಸಿ ಅಭಿವೃದ್ಧಿ ನೀತಿಯನ್ನು ರೂಪಿಸಿದ್ದು, ಹೈದ್ರಾಬಾದ್ ಕರ್ನಾಟಕಕ್ಕೆ ಭಾರೀ ಅನ್ಯಾಯವಾಗಲಾರಂಭಿಸಿತು. ಉಳಿದ ಪ್ರದೇಶಗಳು ಅಭಿವೃದ್ಧಿಯ ದೃಷ್ಟಿಯಿಂದ ಅವು ಈಗಾಗಲೇ ನಾಗಾಲೋಟದಲ್ಲಿದ್ದವು. ಅವುಗಳ ನಡುವೆ ಹೈದ್ರಾಬಾದ್ ಕರ್ನಾಟಕ ಜಿಂಕೆಗಳ ಮಧ್ಯ ಓಟಕ್ಕೆ ನಿಂತ ಮೊಲದಂತಾಗಿತ್ತು. ಸರ್ಕಾರದ ಅಭಿವೃದ್ಧಿ ಉಳಿದ ಪ್ರದೇಶಗಳಿಗೆ ೧೦೦+೧ ಆದರೆ ಹೈದ್ರಾಬಾದ್ ಕರ್ನಾಟಕಕ್ಕೆ ೦+೧ ಆಯಿತು. ಅಂದರೆ ರಾಜ್ಯಮಟ್ಟದ ಅಭಿವೃದ್ಧಿ ಯೋಜನೆ ಹೈದ್ರಾಬಾದ್ ಕರ್ನಾಟಕಕ್ಕೆ ರಾಕ್ಷಸನ ಹೊಟ್ಟೆಗೆ ಅರೆಪಾವು ಮಜ್ಜಿಗೆಯಾದಂತೆ ಆಯಿತು. ಇದರಿಂದ ಮುಂದುವರೆದ ಪ್ರದೇಶಗಳು ಮತ್ತಷ್ಟು ಮುಂದುವರಿಯಲಾರಂಭಿಸಿದರೆ ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಉಳಿದ ಪ್ರದೇಶಗಳ ಬೆಳವಣಿಗೆಗೆ ಹೆಜ್ಜೆ ಹಾಕುವ ಬಡಕಲು ಎತ್ತಿನಂತಾಯಿತು.

ಕೇವಲ ಶಿಕ್ಷಣರಂಗವನ್ನಷ್ಟೇ ಇಲ್ಲಿ ಉದಾಹರಣೆಗೆ ತೆಗೆದುಕೊಂಡರೆ ೧೯೬೫ರ ಒಂದು ಸನ್ನಿವೇಶವನ್ನು ಗಮನಿಸೋಣ. ಬೆಂಗಳೂರು ವಿಭಾಗದಲ್ಲಿ ಮೆಡಿಕಲ್ ಕಾಲೇಜುಗಳು ೮ ಮೈಸೂರು ವಿಭಾಗದಲ್ಲಿ ೫, ಬೆಳಗಾವಿ ವಿಭಾಗದಲ್ಲಿ ೪, ಇದ್ದರೆ ಗುಲ್ಬರ್ಗಾ ವಿಭಾಗದಲ್ಲಿ ಕೇವಲ ೨ ಇದ್ದವು. ಇದೇ ರೀತಿ ಪ್ರೌಢಶಾಲೆಗಳು ಬೆಂಗಳೂರು ವಿಭಾಗದಲ್ಲಿ ೨೧೯೦, ಮೈಸೂರು-೧೩೮೧, ಬೆಳಗಾವಿ-೧೩೮೭, ಗುಲ್ಬರ್ಗಾ-೭೬೪ ಮಾತ್ರ ಇದ್ದವು. ಪ್ರಾಥಮಿಕ ಶಾಲೆಗಳು ಬೆಂಗಳೂರು ವಿಭಾಗದಲ್ಲಿ ೧೫,೪೧೩ ಇದ್ದರೆ ಗುಲ್ಬರ್ಗಾ ವಿಭಾಗದಲ್ಲಿ ೬೯೮೬ ಮಾತ್ರ ಇದ್ದವು. ಇಂಜಿನೀಯರಿಂಗ್ ಕಾಲೇಜುಗಳು ಬೆಂಗಳೂರು-೨೫ ಇದ್ದರೆ ಗುಲ್ಬರ್ಗಾ ವಿಭಾಗದಲ್ಲಿ ಕೇವಲ ೬ ಇದ್ದವು ಇದೇ ರೀತಿ ಪ್ರತಿಯೊಂದು ಕ್ಷೇತ್ರದ ತುಲನೆ ಮಾಡಿದರೆ ಹೈದ್ರಾಬಾದ್ ಕರ್ನಾಟಕ ಪರಿಸ್ಥಿತಿ ತೀರಾ ಶೋಚನೀಯವೆನಿಸುತ್ತದೆ.

ಈ ತಾರತಮ್ಯವನ್ನು ಕೊನೆಗಾಣಿಸಿ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷವಾದ ಅಭಿವೃದ್ಧಿ ನೀತಿಯನ್ನು ರಾಜ್ಯ ಸರ್ಕಾರ ರೂಪಿಸಿದ್ದರೆ ಇಂಥ ಪ್ರಾದೇಶಿಕ ಅಸಮಾನತೆ ತಲೆದೋರುತ್ತಿರಲಿಲ್ಲ.

ಗಾಯದ ಮೇಲೆ ಬರೆ :

ಮೊದಲೇ ಎಲ್ಲಾ ರಂಗಗಳಲ್ಲೂ ಹಿಂದುಳಿದಿದ್ದ ಹೈದ್ರಾಬಾದ್ ಕರ್ನಾಟಕ ಮೈಸೂರು ರಾಜ್ಯದಲ್ಲಿ ವಿಲೀನಗೊಂಡ ನಂತರ ವಿಶೇಷ ಆದ್ಯತೆ ಇರಲಿ, ಇತರೆ ಕರ್ನಾಟಕದಿಂದ ಮತ್ತೊಂದು ಸಮಸ್ಯೆಯನ್ನು ಎದುರಿಸಲಾಯಿತು ಯಾವಾಗ ಹೈದ್ರಾಬಾದ್ ಕರ್ನಾಟಕ ಶೈಕ್ಷಣಿಕವಾಗಿ ಹಿಂದುಳಿದಿದೆ ಎಂಬ ಸಂಗತಿ ಉಳಿದ ಭಾಗದವರ ಗಮನಕ್ಕೆ ಬಂತೋ ಅವರು ಈ ಭಾಗದ ಮೇಲೆ ಮುಗಿಬಿದ್ದು ಇಲ್ಲಿಯ ಜನರ ಪಾಲನ್ನು ಕಸಿದುಕೊಳ್ಳುವ ರಣಹದ್ದುಗಳಂತಾದರು. ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು ಎಲ್ಲಾ ಉನ್ನತ ಹುದ್ದೆಗಳ ನೇಮಕಾತಿಗೆ ಮುಗಿಬಿದ್ದು ಸಹಜವಾಗಿ ಸ್ಥಳೀಯರನ್ನು ಹಿಮ್ಮೆಟ್ಟಿಸಿ ಎಲ್ಲಾ ಸರಕಾರಿ ನೌಕರಿಗಳನ್ನು ಕಬಳಿಸಿದರು. ಈ ರೀತಿಯ ದಾಳಿ ಸ್ಥಳೀಯ ಯುವಕರನ್ನು ಕಂಗೆಡಿಸಿ ನಿರುದ್ಯೋಗಿಗಳನ್ನಾಗಿಸಿದೆ. ಅಷ್ಟೇ ಅಲ್ಲ ಪ್ರಾಥಮಿಕ ಶಾಲೆಯ ಶಿಕ್ಷಕರ ಹುದ್ದೆಗಳು ಆಯಾ ಜಿಲ್ಲಾ ಮಟ್ಟದಲ್ಲಿ ನೇಮಕಾತಿ ನಡೆದಾಗ ಹೊರ ಜಿಲ್ಲೆಯವರು ನಕಲಿ ಸ್ಥಳೀಯ ವಿಳಾಸ ನೀಡಿ ಆಯ್ಕೆಗೊಂಡು ಸ್ಥಳೀಯರಿಗೆ ಮೋಸ ಮಾಡಿದ್ದು ಇತಿಹಾಸ. ಹೀಗೆ ಕಳೆದ ೫೬ ವರ್ಷಗಳಿಂದ ಈ ಭಾಗದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ೧೯೮೭ ರಿಂದ ೨೦೦೧ ರ ವರದಿ ಪ್ರಕಾರ ನೇಮಕಾತಿಯಲ್ಲಿ ತೀವ್ರ ವಂಚನೆ ನಡೆದಿದೆ. ೨,೨೨,೪೫೬ ಹುದ್ದೆಗಳಲ್ಲಿ ನಮಗೆ ದಕ್ಕಬೇಕಾಗಿದ್ದು ೪೪ ಸಾವಿರ ಆದರೆ ಸಿಕ್ಕಿರುವುದು ಕೇವಲ ೧೧ ಸಾವಿರ, ಕೊಪ್ಪಳ ಜಿಲ್ಲೆಯಲ್ಲಿ ೬೬೩ ಶಿಕ್ಷಕ ಹುದ್ದೆ ನೇಮಕಾತಿಯಾಗಿದ್ದು ಅದರಲ್ಲಿ ನಮ್ಮವರಿಗೆ ದೊರೆತಿರುವುದು ಕೇವಲ ೧೩೦. ಇನ್ನು ಸರಕಾರಿ ಕಾಲೇಜುಗಳಲ್ಲಿ ಶೇಕಡಾ ೮೦ರಷ್ಟು ಉಪನ್ಯಾಸಕರಿರುವುದು ಬೆಂಗಳೂರು, ಮೈಸೂರು ಭಾಗದಿಂದ ಇದು ಕೇವಲ ಶಿಕ್ಷಣರಂಗವಷ್ಟೇ ಉಳಿದಂತೆ ಎಲ್ಲಾ ಕ್ಷೇತ್ರಗಳ ಕತೆಯೂ ಇದೇ ರೀತಿ ಇದೆ.

ಪರಿಹಾರ :

ಈವರೆಗೆ ಗಮನಿಸಿದಂತೆ ಹೈದ್ರಾಬಾದ್ ಕರ್ನಾಟಕದ ಮೇಲಿನ ಪ್ರಾದೇಶಿಕ ತಾರತಮ್ಯ ನಿವಾರಣೆಗೆ ರಾಜ್ಯ ಸರ್ಕಾರದ ಯಾವುದೇ ಅಭಿವೃದ್ಧಿ ನೀತಿಗಳು ಸಮರ್ಪಕವಾಗುವುದಿಲ್ಲವೆಂದು ಹೇಳಬಹುದು. ಅಂಥ ನೀತಿಗಳಿಂದ ನಮ್ಮ ಅಭಿವೃದ್ಧಿಗೆ ಸಂವಿಧಾನದ ೩೭೧ನೇ ಕಲಂ ತಿದ್ದುಪಡಿ ಮೂಲಕ ವಿಶೇಷ ಸ್ಥಾನಮಾನ ನೀಡುವುದೊಂದೆ ಅಂತಿಮ ಪರಿಹಾರವಾಗಿದೆ. ಇದನ್ನು ಮನಗಂಡ ಹೈದ್ರಾಬಾದ್ ಕರ್ನಾಟಕದ ಕೆಲವು ಮುಖಂಡರು ಈ ನಿಟ್ಟಿನಲ್ಲಿ ಹಲವಾರು

ವರ್ಷಗಳಿಂದ ನಿರಂತರ ಹೋರಾಟ ನಡೆಸಿದ್ದಾರೆ. ಜನಜಾಗೃತಿ ಶಿಬಿರಗಳು ನಡೆದಿವೆ. ಕರಾಳ ದಿನಾಚರಣೆಯನ್ನು ಆಚರಿಸಿದ್ದಾರೆ. ಆದರೂ ಕೇಂದ್ರ ಸರಕಾರ ಈ ಭಾಗದ ಜನರ ಕೂಗನ್ನು ಕೇಳುತ್ತಿಲ್ಲ ಇದು ಖಂಡನೀಯ. ಹಾಗಾಗಿ ಚಳುವಳಿ ತೀವ್ರ ಸ್ವರೂಪವನ್ನು ಪಡೆದುಕೊಳ್ಳುವ ಮೊದಲು ಸರಕಾರ ಎಚ್ಚೆತ್ತು ಹೈದ್ರಾಬಾದ್ ಕರ್ನಾಟಕಕ್ಕೆ ಸಂವಿಧಾನದನ್ವಯ ವಿಶೇಷ ಸ್ಥಾನಮಾನ ನೀಡಿ ಈ ಭಾಗದ ಅಭಿವೃದ್ಧಿಗೆ ಭಾಷ್ಯ ಬರೆಯಬೇಕಾಗಿದೆ.

ಪೂಜ್ಯಶ್ರೀ .ಮ.ನಿ.ಪ್ರ. ಡಾ. ಕೊಟ್ಟೂರು ಮಹಾಸ್ವಾಮಿಗಳು
ಕಲ್ಮಠ, ಗಂಗಾವತಿ

ಹೈದ್ರಾಬಾದ- ಕರ್ನಾಟಕ ಪ್ರದೇಶವು ಸ್ವತಂತ್ರ ಪೂರ್ವದಲ್ಲಿ ಹೈದ್ರಾಬಾದ ರಾಜ್ಯದ ಒಂದು ಭಾಗವಾಗಿತ್ತು. ೧೯೫೬ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದಾಗ ಹೈದ್ರಾಬಾದ್ ರಾಜ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿ, ತೆಲಂಗಾಣವನ್ನು ಆಂಧ್ರ ಪ್ರದೇಶಕ್ಕೆ, ಮರಾಠಾವಾಡವನ್ನು ಮಹಾರಾಷ್ಟ್ರಕ್ಕೆ ಹಾಗೂ ಹೈದ್ರಾಬಾದ್-ಕರ್ನಾಟಕ (ಕೊಪ್ಪಳ. ರಾಯಚೂರು, ಬೀದರ್, ಗುಲ್ಬರ್ಗಾ ಮತ್ತು ಯಾದಗೀರ) ಪ್ರದೇಶವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ನ್ಯಾಯಮೂರ್ತಿ ಫಜಲ್ ಆಲಿಯವರ ನೇತೃತ್ವದ ರಾಜ್ಯ ಪುನರ್ವಿಂಗಡನಾ ಸಮಿತಿಯು, ಹೈದ್ರಾಬಾದ್-ಕರ್ನಾಟಕ ಪ್ರದೇಶವು ಮೈಸೂರು ಕರ್ನಾಟಕ ಮತ್ತು ಮುಂಬಯಿ-ಕರ್ನಾಟಕಕ್ಕೆ ಹೋಲಿಸಿದಾಗ ನೂರು ವರ್ಷದಷ್ಟು ಹಿಂದುಳಿದಿರುವುದರಿಂದ ಇದನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸುವ ಅಗತ್ಯವಿದೆ ಎಂದು ತಿಳಿಸಿದ್ದರು. ಆದರೆ ಮೈಸೂರು ರಾಜ್ಯಕ್ಕೆ ಹೈದ್ರಾಬಾದ್-ಕರ್ನಾಟಕ ಸೇರಿಸಿದ ನಂತರ ೧೯೧೯ರಿಂದ ನಿಜಾಮನ ಹೈದ್ರಾಬಾದ ಸಂಸ್ಥಾನದಲ್ಲಿ ಜಾರಿ ಇದ್ದ 'ಮುಲ್ಕಿ ಕಾನೂನು' (ಸ್ಥಳೀಯರಿಗೆ ವಿಶೇಷ ಸ್ಥಾನಮಾನ) ಸಹ ಇಲ್ಲದಂತಾಯಿತು.

ಸಂವಿಧಾನದ ೩೭೧ನೇ ಕಲಂ : ಸಂವಿಧಾನದ ರಚನಾ ಸಂದರ್ಭದಲ್ಲಿ 'ಯಾವುದೇ ರಾಜ್ಯದಲ್ಲಿ ಒಂದು ಪ್ರದೇಶ ಸಮೃದ್ಧವಾಗಿದ್ದು, ಮತ್ತೊಂದು ಪ್ರದೇಶವು ತೀರ ಹಿಂದುಳಿದು ಅಲ್ಲಿನ ಜನ ಹತ್ತು ಹಲವು ಸೌಲಭ್ಯಗಳಿಂದ ವಂಚಿತವಾಗಬಾರದು ಎನ್ನುವ ಸದುದ್ದೇಶದಿಂದ **ಅತಿಯಾದ ಅಸಮಾನತೆ ನಿವಾರಣೆಗೆ ವಿಶೇಷ ಸವಲತ್ತು ನೀಡಲು** ಸಂವಿಧಾನದ ೩೭೧ನೇ ಕಲಂನ ಅಡಿಯಲ್ಲಿ ಅವಕಾಶ ನೀಡಲಾಗುತ್ತಿದೆ.

ಭಾರತದಲ್ಲಿ ಈಗಾಗಲೇ ೩೭೧ನೇ ಕಲಂನ್ನು ಗುಜರಾತಿನ ಸೌರಾಷ್ಟ್ರ, ಮಹಾರಾಷ್ಟ್ರ, ೧೯೭೩ರಲ್ಲಿ ಇಡೀ ಆಂಧ್ರಪ್ರದೇಶಕ್ಕೆ, ಗೋವಾ, ಅಸ್ಸಾಂ, ಮಿಜೋರಾಂ, ನಾಗಾಲ್ಯಾಂಡ್ ಇತ್ಯಾದಿ ರಾಜ್ಯಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ನೀಡಲಾಗಿದೆ. ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಲಂಗಾಣ ಮಾದರಿಯಲ್ಲಿ ೩೭೧ನೇ ಕಲಂ ತಿದ್ದುಪಡಿಯನ್ನು ಅವಶ್ಯಕವಾಗಿ ಮಾಡಬೇಕೆಂದು ಹೇಳಿದೆ. ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಹಾಗೂ ಉನ್ನತ ಮೀಸಲಾತಿ ನೀಡುವ ಸಂವಿಧಾನದ ೩೯೧ನೇ ಕಲಂ ತೆಲಂಗಾಣ ಮಾದರಿಯಲ್ಲಿ ಜಾರಿಯಾಗುವುದು ಅತೀ ಅವಶ್ಯಕವಾಗಿದೆ.

೧೯೪೮ ಸೆಪ್ಟಂಬರ್ ೧೭ರಂದು ಹೈದ್ರಾಬಾದ್ ಸಂಸ್ಥಾನವು ಭಾರತ ದೇಶದಲ್ಲಿ ವಿಲೀನವಾದ ನಂತರ ೧೯೫೬ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾಯಿತು. ತದನಂತರ ಹೈದ್ರಾಬಾದ್ ಸಂಸ್ಥಾನದ ಭಾಗಗಳಾಗಿದ್ದ, ಮಹಾರಾಷ್ಟ್ರದ ಮರಾಠವಾಡ ಮತ್ತು ಆಂಧ್ರಪ್ರದೇಶದ ತೆಲಂಗಾಣ ಪ್ರಾಂತಗಳಿಗೆ ಈ ೩೭೧ನೇ ಕಲಂನ ಸೌಲಭ್ಯವನ್ನು ಕೇಂದ್ರ ಸರ್ಕಾರ ಕಲ್ಪಿಸಿಕೊಟ್ಟಿತು.

ಆದರೆ, ಈಗಿನ ಕರ್ನಾಟಕ ರಾಜ್ಯದ ಒಂದು ಭಾಗವಾಗಿರುವ ಹೈದ್ರಾಬಾದ್ – ಕರ್ನಾಟಕಕ್ಕೆ ಮಾತ್ರ ಅದನ್ನು ಅನ್ವಯಿಸದೇ ಅನ್ಯಾಯವನ್ನು ಮಾಡಲಾಯಿತು. ಇದಕ್ಕೆ ಅಂದಿನ ಮತ್ತು ನಂತರದ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಮತ್ತು ಸ್ಥಳೀಯರಿಂದ ಪ್ರಬಲ ಬೇಡಿಕೆ ಇರಲಿಲ್ಲ ಎನ್ನುವುದು ಸತ್ಯ. ಆದರೆ ಈಗಿನ ಇಲ್ಲಿನ ಪರಿಸ್ಥಿತಿ ಬದಲಾಗಿದ್ದು, ೩೭೧ನೇ ಕಲಂ ಬಗ್ಗೆ ಜನರಲ್ಲಿ ಜಾಗೃತಿ ಮೂಡಿದೆ. ಜನಪ್ರತಿನಿಧಿಗಳು ಇದಕ್ಕೆ ಸ್ಪಂದಿಸುತ್ತಿದ್ದು, ಕೇಂದ್ರಕ್ಕೆ ಈ ಬಗ್ಗೆ ಒತ್ತಾಸೆಯಿಂದ ತಿಳಿಸುವ ಪ್ರಯತ್ನ ನಡೆದಿದೆ. ಆಗಸ್ಟ್ ೧೦, ೨೦೧೧ರಂದು ದೆಹಲಿಯ ಜಂತರ್-ಮಂತರ್‌ನಲ್ಲಿ ಮಾಜಿ ಸಚಿವರಾದ ಶ್ರೀ ವೈಜನಾಥ ಪಾಟೀಲ ಮತ್ತು ಶ್ರೀ ರಾಘವೇಂದ್ರ ಕುಷ್ಟಗಿಯವರ ನೇತೃತ್ವದಲ್ಲಿ ಈ ಭಾಗದ ಹೋರಾಟಗಾರರು ಮತ್ತು ಸಂಸದರು ಪ್ರತಿಭಟನೆ ಮಾಡಿ, ಕೇಂದ್ರ ಗೃಹ ಸಚಿವ ಶ್ರೀ ಪಿ. ಚಿದಂಬರಂ ರವರೊಂದಿಗೆ ಚರ್ಚಿಸಿದ ಫಲವಾಗಿ, ಈ ಭಾಗಕ್ಕೆ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗೆ ೩೭೧ನೇ ಕಲಂ ತಿದ್ದುಪಡಿ ಮಾಡಿ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡುವಂತೆ ನನ್ನ ಪ್ರಾಮಾಣಿಕ

ಪ್ರಯತ್ನವನ್ನು ಮಾಡುತ್ತೇನೆ ಹಾಗೂ ಇಂತಹ ಒಳ್ಳೆಯ ಸದಾವಕಾಶ ದೊರೆತಿದ್ದಕ್ಕೆ ನನ್ನ ಸಂಪೂರ್ಣ ಸಹಮತವಿದೆ.

ಈ ಹಿಂದೆ ಬೆಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೩೭೧ನೇ ಕಲಂ ತಿದ್ದುಪಡಿಗೆ ನಿರ್ಣಯವನ್ನು ಕೈಗೊಂಡಿದ್ದು ಮತ್ತು ಗಂಗಾವತಿಯಲ್ಲಿ ೨೦೧೧ ಡಿಸೆಂಬರ್‌ದಲ್ಲಿ ಜರುಗಿದ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಶೇಷ ಗೋಷ್ಠಿಯೊಂದಿಗೆ ನಿರ್ಣಯ ಕೈಗೊಂಡಿದ್ದು, ಪ್ರಶಂಸನೀಯ. ಅಲ್ಲದೇ ಹೈದ್ರಾಬಾದ್-ಕರ್ನಾಟಕ ಭಾಗದ ಸಂಪೂರ್ಣ ಮಾಹಿತಿಯನ್ನು ನೀಡುವ ಪುಸ್ತಕವನ್ನು ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಕಾರ್ಯ ಅಭಿನಂದನೀಯ.

ಜೈ ಹಿಂದ್ ಜೈ ಕರ್ನಾಟಕ

ಶಿವರಾಮಗೌಡ

ಹಿಂದಿನ ಹೈದ್ರಾಬಾದ್ ಸಂಸ್ಥಾನದ ಭಾಗವಾಗಿದ್ದ ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ, ಮೊದಲಾದ ಜನತೆ ನೂರಾರು ವರ್ಷಗಳಿಂದ ಅನ್ಯಭಾಷಿಕರ ಆಡಳಿತಕ್ಕೆ ಒಳಪಟ್ಟಿದ್ದರು. ಆಂಗ್ಲ ಉರ್ದು ಭಾಷೆಯೇ ಪ್ರಧಾನವಾಗಿತ್ತು. ಇದರ ಉಪಯೋಗದ ಅವಕಾಶ ಪಡೆಯುವಲ್ಲಿ ಉತ್ತರಭಾರತದ ನಾಗರಿಕರು ಆ ಹುದ್ದೆ ಪಡೆಯುವಲ್ಲಿ ಯಶಸ್ವಿಯಾಗುತ್ತಿರುವುದು ನೋಡಿ ಸ್ಥಳೀಯರಿಗೆ ಅವಕಾಶ ಸಿಗದ ಕಾರಣ ಮುಲ್ಕಿ, ಮುಲ್ಕಿತರ ಚಳುವಳಿಗಳು ತೀವ್ರಗೊಂಡ ಕಾರಣ ಆಗಿನ ಹೈದರಾಬಾದ್ ಸಂಸ್ಥಾನದ ದೊರೆ ಸಯ್ಯದ್ ಮೀರ್ ಉಸ್ಮಾನ್ ಅಲಿಖಾನ್ ಬಹದ್ದೂರ್ ಅವರು ಜನತೆಯ ಬೇಡಿಕೆಗೆ ಮನ್ನಣೆ ನೀಡುವ ಮೂಲಕ ಸ್ಥಳಿಯರಿಗೆ ಶೇಕಡಾ ೮೦ ಪ್ರಕಾರ ನೇಮಕಾತಿ ಆದೇಶ ನೀಡಿದರು.

ಆಂಗ್ಲ ಉರ್ದು ಭಾಷೆಯ ಪ್ರಭಾವವಿದ್ಯಾಗ್ಯೂ ಮೇಲಿನ ಜಿಲ್ಲೆಗಳಲ್ಲಿ ಬೀದರ್ ಜಿಲ್ಲೆಯ ಭಾಲ್ಕಿಯ ಪೂಜ್ಯರಾದ ಶ್ರೀ ಚನ್ನಬಸವೇಶ್ವರ ಮಹಾಸ್ವಾಮಿಗಳು ಅನೇಕ ಕನ್ನಡ ಅಭಿಮಾನಿಗಳು ಕನ್ನಡ ಶಾಲೆಗೆ ಪ್ರೋತ್ಸಾಹ ನೀಡಿದರು. ಅದರ ಪರಿಣಾಮವಾಗಿ ಕನ್ನಡ ಭಾಷೆ, ಜನಸಾಮಾನ್ಯರ ನಿತ್ಯ ಭಾಷೆಯಾಯಿತು. ಆದರೆ ಈ ಪ್ರದೇಶ ಅಭಿವೃದ್ಧಿ ಕಾಣದ ಶೈಕ್ಷಣಿಕ, ನೀರಾವರಿ, ರಸ್ತೆಗಳು ಅಲಕ್ಷಕ್ಕೆ ಗುರಿಯಾಯಿತು. ಆಗ ಜಿಲ್ಲೆಯಲ್ಲಿ ಒಂದರಿಂದ ಎರಡು ಪ್ರೌಢಶಾಲೆಗಳು ಮಾತ್ರ ಇದ್ದವು.

ರಾಜ್ಯಗಳು ಭಾಷಾವಾರು ಪುನರ್ ವಿಂಗಡಣೆಯಾದಗ ಮೇಲಿನ ನಿಯಮವನ್ನು ವರದಿಯಲ್ಲಿ ಸೇರಿಸಲಾಗಿದೆ. ಆ ಪ್ರಕಾರ ಮೇಲಿನ ಜಿಲ್ಲೆಯು ಕನ್ನಡ ಮಾತನಾಡುವ ಜನತೆ ಆಗಿನ ಮೈಸೂರು ರಾಜ್ಯದಲ್ಲಿ ಸೇರಿವರು ಆಗಿನಿಂದ ಈ ವಿಭಾಗದ ಜಿಲ್ಲೆಗಳು ನೂತನ ರಾಜ್ಯದಲ್ಲಿ ಉಳಿದ ಜಿಲ್ಲೆಯಂತೆ ಸರ್ವತೋಮುಖ ಅಭಿವೃದ್ಧಿ ಹೊಂದಬೇಕಾದರೆ ಈ ವಿಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲು ಸಂವಿಧಾನದ ೩೭೧ನೇ ವಿಧಿಯನ್ನು ತಿದ್ದುಪಡಿ ಮಾಡಬೇಕೆಂದು ಮನವಿ ಮಾಡುತ್ತ ಬಂದಿದ್ದಾರೆ. ಆದರೆ ಹಿಂದಿನ ಹೈದ್ರಾಬಾದ್ ಸಂಸ್ಥಾನದಲ್ಲಿದ್ದ ಮರಾಠವಾಡ ಹಾಗೂ ತೆಲಂಗಾಣ ವಿಭಾಗದ ಜಿಲ್ಲೆಗಳಿಗೆ ೧೯೭೩ರಲ್ಲಿ ಸಂವಿಧಾನ ೩೭೧ನೇ ವಿಧಿಯನ್ನು ತಿದ್ದುಪಡಿ ಮಾಡಿದ ಪರಿಣಾಮ ಅಲ್ಲಿಯ ಜನತೆ ಅದರ ಲಾಭ ಪಡೆಯುತ್ತಿದ್ದಾರೆ.

ಈ ಸಂಬಂಧದಲ್ಲಿ ಕನ್ನಡ ರಾಜ್ಯ ಸಾಹಿತ್ಯ ಪರಿಷತ್ತು ಬೆಂಗಳೂರು ಇತ್ತೀಚೆಗೆ ಗಂಗಾವತಿಯಲ್ಲಿ ಡಿಸೆಂಬರ್ ೯,೧೦,೧೧ ೨೦೧೧ರಂದು ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ಈ ಭಾಗದಲ್ಲಿರುವ ಸಮಸ್ಯೆಗಳನ್ನು ಅರಿತು ರಾಜ್ಯದ ಅಭಿವೃದ್ಧಿ ಹೊಂದಿದ ಜಿಲ್ಲೆಗಳ ಮಟ್ಟಕ್ಕೆ ಬರಬೇಕಾದಲ್ಲಿ ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿ ಮಾಡುವುದು ಅತ್ಯವಶ್ಯಕವು ಅನಿವಾರ್ಯವು ಇರುತ್ತದೆಂದು ಗೊತ್ತುವಳಿಯನ್ನು ಸರ್ವ ಸಮ್ಮತದಿಂದ ಪಾಸು ಮಾಡುವ ಮೂಲಕ ರಾಜ್ಯ ಹಾಗೂ ಕೇಂದ್ರ ಸರಕಾರದ ಗಮನ ಸೆಳೆದಿರುವುದು ಶ್ಲಾಘನೀಯ ಇರುತ್ತದೆ.

ಈ ಭಾಗದ ಜನತೆಯು ಸಹನೆಯನ್ನು ದೌರ್ಬಲ್ಯ ಎಂದು ಭಾವಿಸದೆ ರಾಜ್ಯ ಸರಕಾರ ಹಾಗೂ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಕೇಂದ್ರ ಸರಕಾರದ ಮೇಲೆ ಒತ್ತಡ ತರುವ ಮೂಲಕ ಚಳಿಗಾಲದ ಅಧಿವೇಶನದಲ್ಲಿ ಸಂವಿಧಾನದ ೩೭೧ನೇ ವಿಧಿ ತಿದ್ದುಪಡಿ ಮಾಡಲು ಪ್ರಯತ್ನಿಸಬೇಕೆಂದು ವಿನಂತಿ.

ಶ್ರೀ ಭತ್ತದ ಮರಿಯಪ್ಪನವರು

ಆಗಸ ನೀರಲ್ಲಿದು ಬಾಯಾರಿಕೆಯಿಂದ ಸತ್ತಂತೆ, ದೀಪದ ಕೆಳಗೆ ಕತ್ತಲೆಂಬತ್ತೆ, ದೇವರು ಕೊಟ್ಟರೂ ಪೂಜಾರಿ ವರ ಕೊಡನು ಎಂಬಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶವು ಅಭಿವೃದ್ಧಿ ಕಾಣದೆ ಹಿಂದೆ ಉಳಿದಿದೆ. ೧೨ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ಒಂದು ವಚನದಲ್ಲಿ "ಬೇಡುವವರಿಲ್ಲದೆ ಬಡವನಾದನಯ್ಯ", ೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಬೀದಿಗಳಲ್ಲಿ ಮುತ್ತು-ರತ್ನಗಳನ್ನು ಅಳೆಯುತ್ತಿದ್ದರು. ಇಡೀ ರಾಜ್ಯಕ್ಕೆ

ಅಕ್ಕಿಯನ್ನು ಕೊಡುವ ಭತ್ತದ ಕಣಜ ಗಂಗಾವತಿ, ದೇಶದಲ್ಲಿಯೇ ಅತಿ ಹೆಚ್ಚು ಬಂಗಾರವನ್ನು ಉತ್ಪಾದಿಸುವ ರಾಯಚೂರು ಜಿಲ್ಲೆಯ ಹಟ್ಟಿ, ಕರ್ನಾಟಕ ರಾಜ್ಯಕ್ಕೆ ಶೇ.೩೫%ರಷ್ಟು ವಿದ್ಯುತ್ ಉತ್ಪಾದನೆ ಮಾಡುವ ರಾಯಚೂರಿನ ಶಕ್ತಿನಗರ, ಇಡೀ ರಾಜ್ಯಕ್ಕೆ ಸಿಮೆಂಟ್ ಕೊಡುವ ವಾಡಿ ಹೀಗೆ ಹಲವಾರು ನೈಸರ್ಗಿಕ ಸಂಪತ್ತನ್ನು ಒಳಗೊಂಡ ಹೈದ್ರಾಬಾದ್-ಕರ್ನಾಟಕ ಎಲ್ಲಾ ಇದ್ದು ಇಲ್ಲದಂತಾಗಿದೆ.

ದೇಶಕ್ಕೆ ಸ್ವತಂತ್ರ ಬಂದು ೬೫ ವರ್ಷಗಳಾದರೂ ಹೈದ್ರಾಬಾದ್-ಕರ್ನಾಟಕಕ್ಕೆ ಸ್ವತಂತ್ರ ಬಂದು ೬೪ ವರ್ಷಗಳಾದರೂ ಇಂದಿಗೂ ಒಂದು ಇಂಜಿನೀಯರಿಂಗ್, ಮೆಡಿಕಲ್, ಡಿ.ಫಾರ್ಮ ಕಾಲೇಜುಗಳು ಸರ್ಕಾರದಿಂದಲೇ, ಸರ್ಕಾರೇತರವಾಗಲೀ ಇಲ್ಲ. ಶೈಕ್ಷಣಿಕವಾಗಿ ಅತ್ಯಂತ ಅತ್ಯಂತ ಹಿಂದುಳಿದಿದೆ.

ನಮ್ಮ ಸಂವಿಧಾನದ ಪ್ರಕಾರ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ಸದುದ್ದೇಶದಿಂದ ಅತ್ಯಂತ ಹಿಂದೆ ಉಳಿದೆ ಪ್ರದೇಶಕ್ಕೆ ವಿಶೇಷ ಸವಲತ್ತು ನೀಡಲು ಸಂವಿಧಾನದ ೩೭೧ನೇ ಕಲಂನ ಅಡಿಯಲ್ಲಿ ಅವಕಾಶ ನೀಡಲಾಗಿದೆ.

ಭಾರತದಲ್ಲಿ ಈಗಾಗಲೇ ಸಂವಿಧಾನದ ೩೭೧ನೇ ಕಲಂನ್ನು ಗುಜರಾತಿನ ಸೌರಾಷ್ಟ್ರ, ಮಹಾರಾಷ್ಟ್ರ, ೧೯೭೩ರಲ್ಲಿ ಇಡೀ ಆಂಧ್ರಪ್ರದೇಶಕ್ಕೆ ಗೋವಾ, ಅಸ್ಸಾಂ, ಮಿಜೋರಾಂ, ನಾಗಲ್ಯಾಂಡ್ ಇತ್ಯಾದಿ ರಾಜ್ಯಗಳಿಗೆ ಬೇರೆ ಬೇರೆ ಕಾರಣಗಳಿಗಾಗಿ ನೀಡಲಾಗಿದೆ. ಡಾ. ಡಿ.ಎಂ. ನಂಜುಂಡಪ್ಪನವರ ಉನ್ನತಾಧಿಕಾರಿ ಸಮಿತಿಯು ತನ್ನ ವರದಿಯಲ್ಲಿ ಈ ಭಾಘದ ಅಭಿವೃದ್ಧಿಗಾಗಿ ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಲಂಗಾಣ ಮಾದರಿಯಲ್ಲಿ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಹೇಳಿದರು. ಈ ಭಾಗದ ಸಮಸ್ಯೆಗಳ ಪರಿಹಾರಕ್ಕೆ ಭೌತಿಕ ಅಭಿವೃದ್ಧಿಯ ಜೊತೆಗೆ ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೌಕರಿಗಳಲ್ಲಿ ಹಾಗೂ ಉತ್ತನ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ ೩೭೧ನೇ ಕಲಂ ತೆಲಂಗಾಣದ ಮಾದರಿಯಲ್ಲಿ ಜಾರಿಯಾಗುವುದು ಅತೀ ಅವಶ್ಯಕವಾಗಿದೆ.

ಗಂಗಾವತಿಯಲ್ಲಿಯೇ ಹುಟ್ಟಿ, ಗಂಗಾವತಿಯಲ್ಲಿಯೇ ವಿದ್ಯಾಭ್ಯಾಸ ಮಾಡಿದ ನನಗೆ ಶಾಲೆ-ಕಾಲೇಜುಗಳಲ್ಲಿ ಆಗಸ್ಟ್ ೧೫ರಂದು ಮಾತ್ರ ಸ್ವಾತಂತ್ರೋತ್ಸವ ಆಚರಿಸಿದ್ದು ಗೊತ್ತಿದೆ. ವಿನಹ ಸೆಪ್ಟೆಂಬರ್ ೧೭ರ ಹೈದ್ರಾಬಾದ್-ಕರ್ನಾಟಕದ

ಸ್ವಾತಂತ್ರ್ಯದ ಬಗ್ಗೆ ಶಾಲೆ ಕಾಲೇಜುಗಳಲ್ಲಿ ಆಚರಿಸಲಿಲ್ಲ. ೧೯೯೭ರ ನಂತರ ಹೈದ್ರಾಬಾದ್-ಕರ್ನಾಟಕದ ಬಗ್ಗೆ ಮತ್ತು ಹೈದ್ರಾಬಾದ್-ಕರ್ನಾಟಕ ಸ್ವಾತಂತ್ರ್ಯದ ಬಗ್ಗೆ ನಾನು ಉಪನ್ಯಾಸಕನಾದ ಮೇಲೆ ತಿಳಿದುಕೊಂಡ ವಿಪರ್ಯಾಸ ಈ ಭಾಗದಲ್ಲಾಗಿದೆ.

ಈ ಮೂಲಕ ಸನ್ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಲ್ಲಿ ಮತ್ತು ಉನ್ನತ ಶಿಕ್ಷಣ ಸಚಿವರಲ್ಲಿ ಹೈದ್ರಾಬಾದ್-ಕರ್ನಾಟಕ ಜನರ ಪರವಾಗಿ ಕೇಳಿಕೊಳ್ಳುವುದೇನೆಂದರೆ, ಹೈದ್ರಾಬಾದ್-ಕರ್ನಾಟಕದ ಸ್ವಾತಂತ್ರ್ಯದ ಇತಿಹಾಸವನ್ನು ವಿದ್ಯಾರ್ಥಿಗಳಿಗೆ ಪಠ್ಯಗಳ ಮುಖೇನ ಶಾಲಾ-ಕಾಲೇಜುಗಳಲ್ಲಿ ತಿಳಿಸುವ ಪ್ರಯತ್ನ ತಮ್ಮಿಂದಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಘವೇಂದ್ರ ಕುಷ್ಟಗಿ ಹಾಗೂ ಶ್ರೀ ರಜಾಕ ಉಸ್ತಾದ ನೇತೃತ್ವದಲ್ಲಿ ಏಪ್ರಿಲ್ ೨೧ರಿಂದ ಏಪ್ರಿಲ್ ೩೯, ೨೦೧೧ರವರೆಗೆ ನಡೆದ ೩೭೧ನೇ ಕಲಂ ತಿದ್ದುಪಡಿಗಾಗಿ ಒತ್ತಾಯಿಸಿ ಕೊಪ್ಪಳದಿಂದ ಗುಲ್ಬರ್ಗಾದವರೆಗೆ ಬೃಹತ್ ಜಾಗೃತಿ ಜಾಥಾದಲ್ಲಿ ಪಾಲ್ಗೊಳ್ಳುವುದರ ಮೂಲಕ ಮತ್ತು ಆಗಸ್ಟ್-೧೦, ೨೦೧೧ ದೆಹಲಿಯ ಜಂತರ್-ಮಂಥರ್‌ನಲ್ಲಿ ಶ್ರೀ ವೈಜಿನಾಥ ಪಾಟೀಲ್ ಹಾಗೂ ಶ್ರೀ ರಾಘವೇಂದ್ರ ಕುಷ್ಟಗಿ ಇವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಗೃಹಮಂತ್ರಿ ಪಿ. ಚಿದಂಬರಂ ರವರಿಗೆ ಹೈದ್ರಾಬಾದ್-ಕರ್ನಾಟಕಕ್ಕೆ ೩೭೧ನೇ ಕಲಂ ತಿದ್ದುಪಡಿಗಾಗಿ ಒತ್ತಾಯಿಸಲಾಯಿತು. ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗೆ ೩೭೧ನೇ ಕಲಂ ತಿದ್ದುಪಡಿ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ ಇಲ್ಲಿಯವರೆಗೂ ಈಡೇರಿಸಲಿಲ್ಲ.

ಗಂಗಾವತಿಯಲ್ಲಿ ಜರುಗಿದ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮಾನಾಂತರ ವೇದಿಕೆಯಲ್ಲಿದ್ದ ಹೈದ್ರಾಬಾದ್-ಕರ್ನಾಟಕಕ್ಕೆ ೩೭೧ನೇ ಕಲಂ ತಿದ್ದುಪಡಿ ಅಗತ್ಯತೆ ಎಂಬ ಗೋಷ್ಠಿಯನ್ನು ಪ್ರಧಾನ ವೇದಿಕೆಗೆ ತರುವಲ್ಲಿ ಈ ಭಾಗದ ಯುವಕರಿಗೂ ಗೋಷ್ಠಿಯನ್ನು ಪ್ರಧಾನ ವೇದಿಕೆಗೆ ತರುವುದಲ್ಲದೇ ನಿರ್ಣಯವನ್ನು ತೆಗೆದುಕೊಳ್ಳುವುದರ ಜೊತೆಗೆ ಈ ಭಾಗದ ಸಂಪೂರ್ಣ ಇತಿಹಾಸವನ್ನು ತಿಳಿಸುವ ಪುಸ್ತಕವನ್ನು ಪ್ರಕಟಿಸಲು ಆಸಕ್ತಿಯನ್ನು ವ್ಯಕ್ತಪಡಿಸಿದ ಡಾ. ಆರ್.ಕೆ. ನಲ್ಲೂರ ಪ್ರಸಾದರವರಿಗೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳಿಗೆ ವೈಯಕ್ತಿಕವಾಗಿ ಹಾಗೂ ಹೈದ್ರಾಬಾದ್-ಕರ್ನಾಟಕದ ಜನರ ಪರವಾಗಿ ತುಂಬು ಹೃದಯದ ಅಭಿನಂದನೆಗಳು ಸಲ್ಲಿಸುತ್ತೇನೆ.

ನನ್ನ ಜೊತೆ ಸಹಕರಿಸಿದ ಹೈದ್ರಾಬಾದ್-ಕರ್ನಾಟಕ ಹೋರಾಟ ಸಮಿತಿಯ ಕಾರಟಗಿ ಕಾರ್ಯಾಧ್ಯಕ್ಷರಾದ ಶ್ರೀ ಶಿವಶರಣೇಗೌಡ ಹಾಗೂ ಕಾರಟಗಿ ಸದಸ್ಯರಾದ ಪ್ರಭು ಉಪ್ನಾಳ, ಪ್ರಕಾಶ, ಬಸವರಾಜ, ಶರಣಪ್ಪ ಪರ್ಕಿ ಹಾಗೂ ಇನ್ನುಳಿದ ಎಲ್ಲಾ ಸದಸ್ಯರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಜೈ ಹಿಂದ ಜೈ ಕರ್ನಾಟಕ

ಎ.ಕೆ. ಮಹೇಶಕುಮಾರ

ಹೈದ್ರಾಬಾದ್-ಕರ್ನಾಟಕ (ಕೊಪ್ಪಳ, ರಾಯಚೂರು, ಬೀದರ, ಗುಲ್ಬರ್ಗ ಮತ್ತು ಯಾದಗಿರಿ) ಭಾಗವು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶ ಎಂದು ಎಲ್ಲರಿಗೂ ತಿಳಿದಿರುವ ವಿಷಯ. ಇದಕ್ಕೆ ಪೂರಕವಾಗಿ ಈ ಹಿಂದೆ ಸರ್ಕಾರ ನೇಮಿಸಿದ ಹಲವಾರು ಸಮಿತಿಗಳು ವರದಿ ನೀಡಿವೆ. ೨೦೦೨ರಲ್ಲಿ ಮಾನ್ಯಶ್ರೀ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರವು ನೇಮಿಸಿದ ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ರಾಜ್ಯದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಪ್ರಾದೇಶಿಕ ಅಸಮತೋಲನ ಕುರಿತು ಆಳವಾಗಿ ಅಧ್ಯಯನ ಮಾಡಿ ಸಲ್ಲಿಸಿರುವ ವರದಿಯುಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶವು ಅಭಿವೃದ್ಧಿಯಲ್ಲಿ ಮೈಸೂರು-ಕರ್ನಾಟಕ ಮತ್ತು ಮುಂಬೈ-ಕರ್ನಾಟಕಕ್ಕೆ ಹೋಲಿಸಿದಾಗ ೧೦೦ ವರ್ಷದಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಮುಲ್ಕಿ ಕಾನೂನು :

ಹೈದ್ರಾಬಾದ್ ಸಂಸ್ಥಾನದಲ್ಲಿ ಶೈಕ್ಷಣಿಕ ಸೌಲಭ್ಯಗಳ ಕೊರತೆಯಿಂದ ಸರಿಯಾದ ಶಿಕ್ಷಣ ಸಿಗುತ್ತಿರಲಿಲ್ಲ. ಅಂದು ಹೈದ್ರಾಬಾದ್ ರಾಜ್ಯದ ಆಡಳಿತ ಭಾಷೆ ಉರ್ದುವಾಗಿತ್ತು ಮತ್ತು ಬಹುಸಂಖ್ಯಾತ ಜನರ ಭಾಷೆ ತೆಲುಗು, ಮರಾಠಿ ಮತ್ತು ಕನ್ನಡವಾಗಿತ್ತು. ಇದರಿಂದಾಗಿ ಎಲ್ಲರಿಗೂ ಶಿಕ್ಷಣ ದಕ್ಕುವುದು ಕಷ್ಟವಾಗುತ್ತಿತ್ತು. ಆ ಸಂದರ್ಭದಲ್ಲಿ ಸರಕಾರಿ ಹುದ್ದೆಗಳಿಗೆ ನೇಮಕವಾಗುತ್ತಿದ್ದವರು ಹೆಚ್ಚಿನ ಸಂಖ್ಯೆಯಲ್ಲಿ ಉತ್ತರ ಭಾರತದ ಅಲಿಗರ ಮುಸ್ಲಿಂ ವಿಶ್ವವಿದ್ಯಾಲಯದ ಅಭ್ಯರ್ಥಿಗಳಾಗಿದ್ದರು ಇದನ್ನು ಮನಗಂಡ ಹೈದ್ರಾಬಾದ್ ನಿಜಾಮನು ೧೯೧೯ರಲ್ಲಿ ಈ ರಾಜ್ಯದ ನೌಕರಿಗಳು ಇದೇ ರಾಜ್ಯದ ಅಭ್ಯರ್ಥಿಗಳಿಗೆ ಸಿಗಬೇಕು ಎಂದು 'ಮುಲ್ಕಿ' (ಮುಲ್ಕ ಎಂದರೆ ಉರ್ದುವಿನಲ್ಲಿ ಸ್ಥಳೀಯರು ಎಂದು ಅರ್ಥ) ಕಾನೂನು ಜಾರಿಗೆ ತಂದರು. ಈ ಕಾನೂನು ಹೈದ್ರಾಬಾದ್ ರಾಜ್ಯದಲ್ಲಿ

೧೯೫೬ರವರೆಗೆ ಜಾರಿಯಲ್ಲಿತ್ತು. ಮುಲ್ಕಿ ಕಾನೂನು ಎಂದರೆ ರಾಜ್ಯ ಸರ್ಕಾರದ ಎಲ್ಲಾ ಹುದ್ದೆಗಳ ನೇಮಕಾತಿಯಲ್ಲಿ ಶೇ.೮೦% ರಷ್ಟು ಹುದ್ದೆಗಳು ಮತ್ತು ಉನ್ನತ ಶಿಕ್ಷಣದಲ್ಲಿ ಶೇ.೮೦% ರಷ್ಟು ಸ್ಥಾನಗಳು ಸ್ಥಳಿಯರಿಗೆ ನೀಡಬೇಕು ಎಂದು ಹೇಳುತ್ತದೆ.

ಸಂವಿಧಾನದ ೩೭೧ನೇ ಕಲಂ :

ಸಂವಿಧಾನ ರಚನಾ ಸಂದರ್ಭದಲ್ಲಿ ಯಾವುದೇ ರಾಜ್ಯದಲ್ಲಿ ಒಂದು ಪ್ರದೇಶ ಸಮೃದ್ಧವಾಗಿದ್ದು, ಮತ್ತೊಂದು ತೀರಾ ಹಿಂದುಳಿದಿದ್ದು, ಅಲ್ಲಿನ ಜನ ಹಲವು ಸೌಲಭ್ಯಗಳಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಅತಿಯಾದ ಅಸಮಾನತೆಯ ನಿವಾರಣೆಗೆ ವಿಶೇಷ ಸವಲತ್ತು ನೀಡಲು ಸಂವಿಧಾನದ ೩೭೧ನೇ ಕಲಂ ಅಡಿಯಲ್ಲಿ ಅವಕಾಶವಿದೆ.

ಹೈದ್ರಾಬಾದ್-ಕರ್ನಾಟಕಕ್ಕೆ ೩೭೧ನೇ ಕಲಂ ತಿದ್ದುಪಡಿ ಮಾಡಲು ಹಲವಾರು ವರ್ಷಗಳಿಂದ ಹೋರಾಟಗಳು ನಡೆಯುತ್ತಿವೆ. ನಮ್ಮ ರಾಜ್ಯ ಸರ್ಕಾರವು ಮಾನ್ಯಶ್ರೀ ಯಡಿಯೂರಪ್ಪನವರ ನೇತೃತ್ವದಲ್ಲಿ ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ಮನವೊಲಿಸುವ ಪ್ರಯತ್ನ ಮಾಡಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಈ ಭಾಗಕ್ಕೆ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗೆ ೩೭೧ನೇ ಕಲಂ ತಿದ್ದುಪಡಿ ಮಾಡುವುದಾಗಿ ಭರವಸೆ ನೀಡಿದೆ. ನಾನು ಭಾಗದ ಶಾಸಕನಾಗಿ ಈ ಭಾಗಕ್ಕೆ ೩೭೧ನೇ ಕಲಂ ತಿದ್ದುಪಡಿ ಮಾಡಿ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡುವಂತೆ ನನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಗಂಗಾವತಿಯಲ್ಲಿ ಡಿಸೆಂಬರ್ ೯,೧೦ ಮತ್ತು ೧೧ ೨೦೧೧ರಂದು ಜರುಗಿದ ೭೮ನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಧಾನ ವೇದಿಕೆಯಾದ ಗಂಡುಗಲಿ ಕುಮಾರರಾಮನ ವೇದಿಕೆಯಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ೩೭೧ನೇ ಕಲಂ ತಿದ್ದುಪಡಿ ಅಗತ್ಯತೆ ಎಂಬ ವಿಶೇಷ ಗೋಷ್ಠಿಯೊಂದಿಗೆ ನಿರ್ಣಯವನ್ನು ಕೈಗೊಂಡಿದ್ದು ಪ್ರಶಂಸನೀಯ. ಅಲ್ಲದೇ ಹೈದ್ರಾಬಾದ್-ಕರ್ನಾಟಕ ಭಾಗದ ಸಂಪೂರ್ಣ ಇತಿಹಾಸವನ್ನು ನೀಡುವ ಪುಸ್ತಕವನ್ನು ಪ್ರಕಟಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳ ಕಾರ್ಯ ಶ್ಲಾಘನೀಯ.

ಜೈಹಿಂದ ಜೈ, ಕರ್ನಾಟಕ

ಪರಣ್ಣ ಈಶ್ವರಪ್ಪ ಮುನವಳ್ಳಿ

ಭಾರತ ದೇಶಕ್ಕೆ ೧೯೪೭ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಬಂದಿತು. ಆದರೆ ಹೈದ್ರಾಬಾದ್ ಸಂಸ್ಥಾನದ ನಿಜಾಮನು ಭಾರತ ದೇಶದ ಒಕ್ಕೂಟಕ್ಕೆ ಸೇರಲು ಒಪ್ಪಲಿಲ್ಲ. ಆಗ ಈ ಭಾಗದ ಜನರು ಹೈದ್ರಾಬಾದ್ ಸಂಸ್ಥಾನವನ್ನು ಭಾರತ ದೇಶದ ಒಕ್ಕೂಟಕ್ಕೆ ಸೇರಿಸಲು ಮತ್ತೊಂದು ಸ್ವಾತಂತ್ರ್ಯ ಹೋರಾಟವನ್ನು ರಜಾಕರರ ಸೈನ್ಯದ ವಿರುದ್ಧ ಮಾಡಬೇಕಾಯಿತು. ಆ ಹೋರಾಟದ ಫಲವಾಗಿ ೧೯೪೮ ಸೆಪ್ಟೆಂಬರ್ ೧೭ರಂದು ಹೈದ್ರಾಬಾದ್ ಸಂಸ್ಥಾನ ಭಾರತ ದೇಶಕ್ಕೆ ವಿಲೀನಗೊಂಡಿತು.

ಹೈದ್ರಾಬಾದ್-ಕರ್ನಾಟಕ ಪ್ರದೇಶವು ಆ ದಿನಗಳಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದೆ ಉಳಿದಿದೆ. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗ ಹೈದ್ರಾಬಾದ್ ರಾಜ್ಯವನ್ನು ೩ ಭಾಗಗಳಾಗಿ ವಿಂಗಂಡಿಸಿ ತೆಲಂಗಾಣವನ್ನು ಆಂಧ್ರಪ್ರದೇಶಕ್ಕೆ ಮರಾಠವಾಡವನ್ನು ಮಹಾರಾಷ್ಟ್ರಕ್ಕೆ ಹಾಗೂ ಹೈದ್ರಾಬಾದ್-ಕರ್ನಾಟಕ (ಕೊಪ್ಪಳ, ರಾಯಚೂರು, ಬೀದರ್, ಗುಲ್ಬರ್ಗ ಮತ್ತು ಯಾದಗಿರಿ) ಪ್ರದೇಶವನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ನ್ಯಾಯಮೂರ್ತಿ ಫಜಲಲಿ ಅವರ ನೇತೃತ್ವದ ರಾಜ್ಯ ಪುನರ್ ವಿಂಗಡಣಾ ಸಮಿತಿಯು ಹೈದ್ರಾಬಾದ್-ಕರ್ನಾಟಕ ಪ್ರದೇಶವು ಮೈಸೂರು-ಕರ್ನಾಟಕ, ಮುಂಬೈ-ಕರ್ನಾಟಕಕ್ಕೆ ಹೋಲಿಸಿದಾಗ ೧೦೦ ವರ್ಷದಷ್ಟು ಹಿಂದುಳಿದಿದೆ ಎಂದು ಇದನ್ನು ವಿಶೇಷವಾಗಿ ಅಭಿವೃದ್ಧಪಡಿಸುವ ಅಗತ್ಯವಿದೆ ಎಂದು ತಿಳಿಸಿತು.

ಎಸ್.ಎಸ್. ಕೃಷ್ಣರವರ ನೇತೃತ್ವದ ಸರ್ಕಾರವು ನೇಮಿಸಿದ ಡಾ. ಡಿ.ಎಂ. ನಂಜುಂಡಪ್ಪನವರ ಉನ್ನತಾಧಿಕಾರಿ ಸಮಿತಿಯು ರಾಜ್ಯದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಅಧ್ಯಯನ ಮಾಡಿ ಸಲ್ಲಿಸಿರುವ ವರದಿಯಲ್ಲಿ ಈ ಭಾಗದ ಅಭಿವೃದ್ಧಿಗಾಗಿ ಹಾಗೂ ಇಲ್ಲಿಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಲಂಗಾಣ ಮಾದರಿಯಲ್ಲಿ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂದು ಹೇಳಿದೆ. ಇಲ್ಲಿನ ವಿದ್ಯಾವಂತ ನಿರುದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ನೌಕರಿಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ನೀಡುವ ಸಂವಿಧಾನದ ೩೭೧ನೇ ಕಲಂ ತೆಲಂಗಾಣ ಮಾದರಿಯಲ್ಲಿ ಜಾರಿಯಾಗುವುದು ಅತಿ ಅವಶ್ಯಕವಾಗಿದೆ.

ಹಿಂದಿನ ಹೈದ್ರಬಾದ್ ರಾಜ್ಯದ ಭಾಗಗಳಾಗಿದ್ದ ಮಹಾರಾಷ್ಟ್ರದ ಮರಾಠವಾಡ ಮತ್ತು ಆಂಧ್ರದ ತೆಲಂಗಾಣ ಪ್ರಾಂತಗಳಿಗೆ ೩೭೧ರ ಸೌಲಭ್ಯವನ್ನು ಕೇಂದ್ರ ಸರ್ಕಾರ ಕಲ್ಪಿಸಿಕೊಟ್ಟಿದೆ. ಆದರೆ ಅದೇ ರಾಜ್ಯದ ಮತ್ತೊಂದು ಭಾಗವಾಗಿದ್ದ ಇಂದಿನ ಕರ್ನಾಟಕದ ಹೈದ್ರಾಬಾದ್-ಕರ್ನಾಟಕಕ್ಕೆ ಮಾತ್ರ ೩೭೧ನ್ನು ಅನ್ವಯಿಸದೆ

ಅನ್ಯಾಯವನ್ನು ಮಾಡಲಾಗಿದೆ. ಇದಕ್ಕೆ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಹಾಗೂ ಸ್ಥಳೀಯರಿಂದ ಪ್ರಬಲ ಬೇಡಿಕೆ ಇರಲಿಲ್ಲ ಎಂಬುದು ಸತ್ಯವಾದರೂ ಕೇಂದ್ರ ಸರಕಾರದ ಮುತ್ಸದ್ಧಿತನದ ಕೊರತೆ ಮತ್ತು ಜಾಣ ಕುರುಡನ್ನು ಮರೆಯುವಂತಿಲ್ಲ.

ಗಂಗಾವತಿಯಲ್ಲಿ ಜರುಗಿದ ೭೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ಸಂವಿಧಾನದ ೩೭೧ ಕಲಂ ತಿದ್ದುಪಡಿಯ ಅಗತ್ಯತೆ ಎಂಬ ವಿಶೇಷ ಗೋಷ್ಠಿ ಮತ್ತು ಈ ಭಾಗಕ್ಕೆ ೩೭೧ನೇ ಕಲಂ ತಿದ್ದುಪಡಿ ಮಾಡಬೇಕೆಂಬ ನಿರ್ಣಯವನ್ನು ಕೈಗೊಂಡಿರುವುದು ಸ್ವಾಗತಾರ್ಹ. ವಿಶೇಷವಾಗಿ ಗಂಗಾವತಿಯಲ್ಲಿ ನಡೆದ ಸಮ್ಮೇಳನದ ವಿಶೇಷ ಗೋಷ್ಠಿಯ ನೆನಪಿಗಾಗಿ ಈ ಭಾಗದ ಇತಿಹಾಸವನ್ನು ತಿಳಿಸುವ ಪುಸ್ತಕವನ್ನು ಪ್ರಕಟಿಸಲು ಆಸಕ್ತಿಯನ್ನು ವ್ಯಕ್ತಪಡಿಸಿದ ರಾಜ್ಯಾಧ್ಯಕ್ಷರಾದ ಡಾ. ನಲ್ಲೂರು ಪ್ರಸಾದರವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಾ ೩೭೧ನೇ ಕಲಂ ತಿದ್ದುಪಡಿಗಾಗಿ ಸಂಬಂಧಪಟ್ಟ ಎಲ್ಲಾ ಜನಪ್ರತಿನಿಧಿಗಳು ವಿಶೇಷವಾಗಿ ವಿದ್ಯಾರ್ಥಿಗಳು, ಯುವಕರು ಈ ಒಂದು ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಈ ಭಾಗಕ್ಕೆ ಆದಷ್ಟು ಬೇಗ ಸಂವಿಧಾನದ ೩೭೧ ಕಲಂ ತಿದ್ದುಪಡಿ ಮಾಡುವಲ್ಲಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕೆಂದು ಆಶಿಸುತ್ತೇನೆ.

ಜೈ ಹಿಂದ ಜೈ ಕರ್ನಾಟಕ

ಗೌಳಿ ಮಹಾದೇವಪ್ಪ

ಹೈದ್ರಾಬಾದ – ಕರ್ನಾಟಕ ವಿಭಾಗ – ಕರ್ನಾಟಕ ರಾಜ್ಯ

ಭಾರತೀಯ ಸಂವಿಧಾನದ ಯಾವುದೇ ಕಲಂನ್ನು ತಿದ್ದುಪಡಿ ಮಾಡುವ ಪದ್ಧತಿಯನ್ನು ನಾವು ಈಗ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಕಲಂ ೩೬೮ರ ಪ್ರಕಾರ ನಾವು ಸಂವಿಧಾನದ ಕಲಂಗಳ ತಿದ್ದುಪಡಿಯನ್ನು ಕೇಂದ್ರ ಸರ್ಕಾರದಿಂದ ಸಂಸತ್ತಿನ ನಿರ್ಣಯದ ಪ್ರಕಾರ ಮಾಡಿಕೊಳ್ಳಬಹುದು. ಅದಕ್ಕೂ ಮುಂಚೆ ತಿದ್ದುಪಡಿಯ ವಿಷಯಗಳು, ಅದರ ಅವಶ್ಯಕತೆ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಅದನ್ನು ತಿದ್ದುಪಡಿ ಮೂಲಕ ಕಾರ್ಯರೂಪದಲ್ಲಿ ತರಬೇಕಾಗುತ್ತದೆ.

ತಿದ್ದುಪಡಿ ಹಿನ್ನೆಲೆ :

ಮೊಟ್ಟಮೊದಲಾಗಿ ರಾಜ್ಯಕ್ಕೆ ಅನುಗುಣವಾಗುವಂತೆ ಅಲ್ಲಿಯ ಎಲ್ಲಾ ತರಹದ ಪರಿಸ್ಥಿತಿಯನ್ನು ಅವಲೋಕಿಸಿ ನಿರ್ಧಿಷ್ಟವಾದ ಭಾಗಕ್ಕೆ ಕಲ್ಪಿಸುವಂತೆ ಪ್ರಯತ್ನ ಮಾಡಬೇಕಾದದ್ದು ಅವಶ್ಯಕ.

ಈ ಹಿಂದೆ ತಿದ್ದುಪಡಿ ಲಾಭ ಪಡೆದ ರಾಜ್ಯಗಳ ಇತಿಹಾಸ :

ಸುಮಾರು ೧೯೫೭ರಿಂದಲೂ ಭಾರತದ ಅತೀ ಹಿಂದುಳಿದ ಪ್ರದೇಶಗಳಾದ ಮಿಝೋರಾಂ, ಮಣಿಪುರ, ನಾಗಲ್ಯಾಂಡ್, ಗೋವಾ ಗುಜರಾತ್, ಅಸ್ಸಾಂ, ಅರುಣಾಚಲ ಪ್ರದೇಶಗಳು ಇದರ ಅನುಕೂಲತೆಗಳನ್ನು ಪಡೆದುಕೊಂಡಿವೆ. ಇವುಗಳನ್ನು ಪಡೆಯುವ ದಿಶೆಯಲ್ಲಿ ಲಭ್ಯವಾದ ಮಾಹಿತಿ ಪ್ರಕಾರ ಯಾವ ತರಹದ ಉಗ್ರ ಹೋರಾಟ ನಡೆದ ಬಗ್ಗೆ ಲಭ್ಯವಿಲ್ಲ. ನಂತರ ೧೯೭೧ರ ನಂತರ ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳು ಇದರ ಲಾಭ ಪಡೆದುಕೊಂಡಿದ್ದಾರೆ. ಮರಾಠವಾಡದಲ್ಲಿ ಯಾವ ಉಗ್ರ ಹೋರಾಟ ನಡೆದಿಲ್ಲ. ಈ ಪ್ರದೇಶಗಳಿಗೆ ಜನಪ್ರತಿನಿಧಿಗಳಿಂದ (ಲೋಕಸಭಾ ಸದಸ್ಯರು, ಶಾಸಕರು) ಕೇಂದ್ರಕ್ಕೆ ಮನವರಿಕೆ ಮಾಡಿಕೊಟ್ಟು ಲಾಭ ಪಡೆದುಕೊಂಡಿದ್ದಾರೆ.

ಆದರೆ ೧೯೭೧ರ ನಂತರ ತೆಲಂಗಾಣ ಪ್ರದೇಶ (ಮಾಜಿ ಹೈದ್ರಾಬಾದ ಸ್ಟೇಟ್ ವಿಭಾಗ)ಕ್ಕೆ ಈ ೩೭೧ನೇ ಕಲಮಿನ ಲಾಭ ದೊರಕಿತು. ಆದರೆ ಆಂಧ್ರಪ್ರದೇಶದ ಉಳಿದ ಭಾಗಗಳಲ್ಲಿದ್ದ ಹಿಂದುಳಿದ ಪ್ರದೇಶಕ್ಕೆ ಲಾಭ ಆಗದ ಕಾರಣ ಅಲ್ಲಿಯ ಜನರಿಂದ ಪ್ರತಿಭಟನೆ ಪ್ರಾರಂಭವಾಗಿ ಕೊನೆಗೆ ೧೯೭೪ರಲ್ಲಿ ಸಂಪೂರ್ಣ ಹಿಂದುಳಿದ ಆಂಧ್ರಪ್ರದೇಶ ಭಾಗಕ್ಕೆ ೩೭೧ನೇ ಕಲಂ ಲಾಗೂ ಆಯಿತು. ಇಂದಿಗೂ ಅಲ್ಲಿಯ ಪ್ರಜೆಗಳು ಲಾಭ ಪಡೆಯುತ್ತಿದ್ದಾರೆ.

ಈಗ ನಮ್ಮ ಭಾಗಕ್ಕೆ (ಹೈ.ಕ.) ಮಾಡಬೇಕಾದ ಪ್ರಯತ್ನ :

ಈ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿದಲ್ಲಿ ಹಾಗೂ ಇದರ ಬೇಡಿಕೆ ಬಗ್ಗೆ ವಿಚಾರಿಸಲಾಗಿ ಈಗ ಸುಮಾರು ೮-೧೦ ವರ್ಷಗಳಿಂದ ನಮ್ಮಲ್ಲಿ ಕೇವಲ ಪ್ರಚಾರದಿಂದ ಮಾತ್ರ ಪ್ರಯತ್ನ ನಡೆದಿದೆ ಅದೂ ರಾಜಕಾರಣಿಗಳು, ದುರೀಣರಿಂದ ಮಾತ್ರ ಪ್ರಯತ್ನ ನಡೆದಿದೆ. ಅಂಕಿಸಂಖ್ಯೆಗಳನ್ನು ಲೆಕ್ಕಚಾರಕ್ಕೆ ತೆಗೆದುಕೊಂಡಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು ೩೯ ತಾಲ್ಲೂಕುಗಳು ಹಿಂದುಳಿದವು ಇದ್ದು, ಅದರಲ್ಲಿ (೨೧) ತಾಲ್ಲೂಕುಗಳು ನಮ್ಮ ಹೈದ್ರಾಬಾದ-ಕರ್ನಾಟಕದಲ್ಲಿವೆ. ಉಳಿದ ೧೮ ತಾಲ್ಲೂಕುಗಳಿಗೆ ೩೭೧ ಕಲಂ ಜಾರಿ ಆಗುವಂತೆ ಯಾವ ಪ್ರಯತ್ನವೂ ನಡೆದಂತೆ ಕಾಣುವುದಿಲ್ಲ. ಅದಕ್ಕೆ ಅಲ್ಲಿಯ ಜನಾನುರಾಗಿಗಳೇ ಕಾರಣವೆನ್ನಬಹುದು. ಈ ಬಗ್ಗೆ ಹಿಂದಿನ ವರದಿಗಳನ್ನು ಗಮನಿಸಿಲ್ಲ.

ಹೋರಾಟದ ಅವಶ್ಯಕತೆ :

ಈ ದಿಶೆಯಲ್ಲಿ ನಾವು ಪ್ರಮಾಣಪೂರ್ವಕವಾಗಿ ಹಾಗೂ ಕೂಲಂಕುಷವಾಗಿ ವಿಚಾರ ಮಾಡುವ ಅವಶ್ಯಕತೆ ಇದೆ. ಇದರ ಬಗ್ಗೆ ನಮ್ಮ ಭಾಗದ (ಹೈ.ಕ.) ಲೋಕಸಭಾ ಸದಸ್ಯರುಗಳ ಪ್ರತಿಕ್ರಿಯೆ ಇಂದಿಗೂ ವ್ಯಕ್ತವಾಗಿಲ್ಲ. ಅವರೆಲ್ಲರ ಅಭಿಪ್ರಾಯ ಒಂದೇ ಇದೆ. ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ದುರ್ದೈವ. ಕೇವಲ ಸಭೆಗಳಲ್ಲಿ ಮಾತನಾಡುತ್ತಾ ಬಂದಿದ್ದಾರೆ. ಈ ಬಗ್ಗೆ ನಮ್ಮ ಭಾಗದ ಲೋಕಸಭಾ ಸದಸ್ಯರು, ಶಾಸಕರು (ಬೀದರ-ಗುಲ್ಬರ್ಗಾ-ರಾಯಚೂರು ಮತ್ತು ಕೊಪ್ಪಳ) ಒಟ್ಟುಗೂಡಿ ತಮ್ಮ ಅಭಿಪ್ರಾಯ ಪ್ರತಿಕ್ರಿಯೆಯನ್ನು ಸಹಕಾರ ವ್ಯಕ್ತಪಡಿಸಿದ ಸನ್ನಿವೇಶಗಳು ಕಂಡು ಬಂದಿಲ್ಲ. ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ತನ್ನ ವಾರ್ಷಿಕ ಸಮ್ಮೇಳನ ಇನ್ನಿತರ ಸಭೆಗಳಲ್ಲಿ ತನ್ನ ಅಭಿಪ್ರಾಯವನ್ನು ಸಹಕಾರವನ್ನು ವ್ಯಕ್ತಪಡಿಸುತ್ತಾ ಬಂದಿರುವುದು ಶ್ಲಾಘನೀಯ. ಆದರೆ ಏನು ಪರಿಣಾಮ?

ಇನ್ನು ಒಂದು ವೇಳೆ ಎಲ್ಲಾ ಶಾಸಕರು, ಲೋಕಸಭಾ ಸದಸ್ಯರು (ಹೈ.ಕ.ವಿಭಾಗ) ಒಟ್ಟುಗೂಡಿ ಬಂದು ನಮ್ಮ ಭಾಗದ ಅತಿ ಅವಶ್ಯಕ ಬೇಡಿಕೆಗಳ ಬಗ್ಗೆ ಪತ್ರವನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಲ್ಲಿ ಪ್ರಯತ್ನ ಯಶಸ್ವಿಯಾಗಬಹುದು. ಹಾಗಾದಲ್ಲಿ ಈ ಭಾಗದ ಜನಕ್ಕೆ (ಹೈ.ಕ) ಆದ ಲಾಭವನ್ನು ನೋಡಿಕೊಂಡು ಸಹಿಸಿಯೋ ಅಥವಾ ಅಸಮಧಾನದಿಂದಲೋ ಅಥವಾ ಇನ್ನಿತರ ರೀತಿಯಿಂದ ತಮಗೂ ಈ ಲಾಭ ಆಗಬೇಕೆಂದು ಆಶಯ ವ್ಯಕ್ತಪಡಿಸಿ ತಮ್ಮ ಜನಪ್ರತಿನಿಧಿಗಳಿಂದ ಪ್ರಯತ್ನ ಪ್ರಾರಂಭಿಸಿದಲ್ಲಿ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಚಿಂತೆ ಪ್ರಾರಂಭವಾಗಬಹುದು. ಹಾಗಾದಲ್ಲಿ ನಮ್ಮ ಭಾಗಕ್ಕೆ ಆಗಬೇಕಾದ ಲಾಭ ಅನುಕೂಲತೆಗಳು ಕಾರ್ಯಗತವಾಗುವುದಕ್ಕೆ ವಿಳಂಬವಾಗಬಹುದು.

ಅಯೋಧ್ಯ ರಾಮಾಚಾರ್ಯ

ಕರ್ನಾಟಕವು ನೂರಾರು ವರ್ಷಗಳ ಹಿಂದೆ ಅನೇಕ ರಾಜ್ಯ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದವು. ಅದರಲ್ಲಿ ಹಳೆ ಮೈಸೂರು, ಕೊಡಗು, ಮುಂಬೈ, ಮದ್ರಾಸು, ಹೈದ್ರಾಬಾದ, ಹೀಗೆ ೫ ರಾಜ್ಯಗಳಾಗಿ ಹಂಚಿ ಹೋಗಿ ಬೇರೆ ಬೇರೆ ಆಡಳಿತದಲ್ಲಿ ಒಳಗಾದವರು. ಹಳೇ ನಿಜಾಮ ರಾಜ್ಯದಲ್ಲಿ ಇಂದಿನ ಹೈದ್ರಾಬಾದ ಕನಾಟಕದವರು ಒಳಗಾದವರು ಹಳೇ ಹೈದ್ರಾಬಾದು ಭಾರತದಲ್ಲಿ ಬಹಳ ದೊಡ್ಡ ರಾಜ್ಯವಾಗಿತ್ತು. ಅಲ್ಲಿ ತೆಲುಗುವಿನ ೮ ಜಿಲ್ಲೆಗಳು ಇಂದು ಆಂಧ್ರದಲ್ಲಿ ತೆಲಂಗಣಾ ಎಂದು ಕರೆಯಲಾಗುತ್ತದೆ. ಮರಾಠಿಗಳ ೫ ಜಿಲ್ಲೆಗಳು ಮಹಾರಾಷ್ಟ್ರಕ್ಕೆ ಸೇರಿದವುಗಳು ಇಂದು ಮಹಾರಾಷ್ಟ್ರದಲ್ಲಿ ಮರಾಠವಾಡಾ ಎಂದು

ಕರೆಯಲಾಗುತ್ತವೆ. ಹಾಗೆ ಇಂದಿನ ಹೈದ್ರಾಬಾದ ಕರ್ನಾಟಕದ ಜನ ಬೀದರ, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮೊದಲಾದವು ಕರ್ನಾಟಕಕ್ಕೆ ಸೇರಿಸಲಾಗಿದೆ. ಆಂಧ್ರಕ್ಕೆ ಸೇರಿದ ತೆಲಂಗಾಣ ಹಾಗೂ ಮಹಾರಾಷ್ಟ್ರಕ್ಕೆ ಸೇರಿದ ಮರಾಠವಾಡದವರು ಸಂವಿಧಾನದ ೩೭೧ ಕಲಂನ ಲಾಭ ಪಡೆಯುತ್ತಿದ್ದಾರೆ. ಆದರೆ ಕರ್ನಾಟಕಕ್ಕೆ ಸೇರಿದ ಹೈದ್ರಾಬಾದ ಕರ್ನಾಟಕದವರು ಈ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಆದುದರಿಂದ ಹೈದ್ರಾಬಾದ ಕರ್ನಾಟಕ ಹೋರಾಟ ಸಮಿತಿಯವರು ಸಂವಿಧಾನದ ೩೭೧ನ ಕಲಂಗೆ ತಿದ್ದುಪಡಿ ಮಾಡಲು ಹೋರಾಡುತ್ತಿದ್ದಾರೆ. ಈ ಹೋರಾಟದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವ ರಾಯಚೂರಿನ ರಝಾಕ ಉಸ್ತಾದ ಸಂವಿಧಾನದ ೩೭೧ಕ್ಕೆ ತಿದ್ದುಪಡಿ ಮಾಡಬೇಕೆಂದು ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಹೋದ ಏಪ್ರಿಲ್, ಮೇ ನಲ್ಲಿ ಕೊಪ್ಪಳದಿಂದ ಬೀದರ್, ಗುಲ್ಬರ್ಗಾವರೆಗೆ ಜನಜಾಗೃತಿ ಜಾಥ ಸಂಘಟನೆಯಲ್ಲಿ ಈ ಜಾಥದ ನೇತೃತ್ವ ವಹಿಸಿ ಹೈದ್ರಾಬಾದ ಕರ್ನಾಟಕದ ಜನರಲ್ಲಿ ಸಂವಿಧಾನದ ೩೭೧ರ ತಿದ್ದುಪಡಿ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಅಗ್ರಗಣ್ಯರು.

ಇವರು ಬರೆದ ಈ ಪುಸ್ತಕ ಜಾಗೃತಿ ಮೂಡಿಸುವಲ್ಲಿ ಬಹಳ ಉಪಯುಕ್ತವಾದದ್ದು. ಇದು ಹೈದ್ರಾಬಾದ ಕರ್ನಾಟಕದಲ್ಲಿ ಒಂದು ಹೊಸ ಜಾಗೃತಿ ತರುವುದೆಂದು ನನ್ನ ನಂಬಿಕೆ

ವೈಜನಾಥ ಪಾಟೀಲ

*****

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೬ನೆಯ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ – ಕನ್ನಡಿಗ – ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ನಡೆಯುತ್ತಿರುವ ೭೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು–೫೬೦೦೧೮